ಸಂಕ್ರಮಣ

೧೨೫
೧೨೬

ಸಂಪುಟ ೧೮ : ಸಂಚಿಕೆ ೧–೨

ಜೂನ–ಜುಲೈ ೧೯೮೨

ಇದ್ದರೆಲ್ಲ ಇಲ್ಲದಂತೆ : ಕತೆ

ಗಾಂಧಿ : ಒಬ್ಬ ಮನುಷ್ಯ

ಅಭಿವ್ಯಕ್ತಿ ಸ್ವಾತಂತ್ರ್ಯ : ಚೆರಬಂಡರಾಜು ಬಲಿ

ಕುಮಾರವ್ಯಾಸನ ಶ್ರೀ ಕೃಷ್ಣ ಪರಮಾತ್ಮನೇ ?

ವಿಮರ್ಶೆ :

ಬೇಂದ್ರೆಯವರ ಮೂರು ಕವನಗಳು

ವಿಶ್ವಕಥಾಕೋಶ : ಆನೆಯ ಕಂತು

ಬೆಸಗರಹಳ್ಳಿ ಅವರ 'ಒಂದು ಹುಡುಗನಿಗೆ ಬಿದ್ದ ಕನಸು'

ಗೊರೂರು ಅವರ 'ಮೆರವಣಿಗೆ'

ಏಳು ಕವನ ಸಂಕಲನಗಳು

ಜನಾಂಗೀಯ ಕಿರುಪರಿಚಯಗಳು

ನಾಲ್ಕು ಚಂಪಾ ನಾಟಕಗಳು

ಕವನಗಳು :

ಸದಾನಂದ ಪಾಟೀಲ, ಎಂ. ಎಸ್. ಮೂರ್ತಿ, ಸುವರ್ಣ ಕಾಡನಕುಪ್ಪೆ, ರಘು ಕುಲಕರ್ಣಿ, ಸಿ. ಎಂ. ಚೆನಬಸಪ್ಪ, ಪೋಲಂಕಿ ರಾಮಮೂರ್ತಿ, ಮುಳ್ಳೂರು ನಾಗರಾಜ, ಮುಕ್ತಾಯಕ್ಕ, ಮುಜಾಫ್ಫರ್ ಅಸ್ಸಾದಿ.

'ರಾಮಾಯಣದ ಸೀತಾಯಣ' : ಪ್ರತಿಕ್ರಿಯೆ

DEVU PATTAR
GUTTIPETH,
SHAHAPUR-585223

ಸಂಪಾದಕ : ಚಂದ್ರಶೇಖರ ಪಾಟೀಲ

ಕನ್ನಡದ ಏಕೈಕ ಪುಸ್ತಕೋದ್ಯಮದ ಪತ್ರಿಕೆ

ಗ್ರಂಥಲೋಕ

(ಪ್ರತಿ ತಿಂಗಳು ಮೊದಲನೆಯ ದಿನ ಪ್ರಕಟನೆ)

● ಹಿಂದಿನ ತಿಂಗಳು ಕನ್ನಡದಲ್ಲಿ ಪ್ರಕಟವಾದ ಪುಸ್ತಕಗಳ ವರ್ಗೀಕೃತ ಸೂಚಿ ● ಪುಸ್ತಕಗಳ ಪರಿಚಯ, ವಿಮರ್ಶೆ, ಪುಸ್ತಕ ಸುದ್ದಿ ● 'ಗ್ರಂಥಲೋಕದ ಸುತ್ತ ಮುತ್ತ', 'ಗ್ರಂಥಲೋಕದ ಗಣ್ಯರು' ಅಂಕಣಗಳು ● ಕನ್ನಡದ ಪುಸ್ತಕೋದ್ಯಮದ ಸಮಸ್ಯೆಗಳನ್ನು ಬಿಂಬಿಸುವ ಲೇಖನಗಳು ● ಡೆಮಿ ಚತುರ್ಥ ಅಳತೆಯ ೩೨೦ ಪುಟಗಳಿಗೂ ಮಿಕ್ಕಿ ಉಪಯುಕ್ತ ಪರಾಮರ್ಶನ ಸಾಹಿತ್ಯ ● ವರ್ಷಕ್ಕೆರಡು ವಿಶೇಷ ಸಂಚಿಕೆಗಳು.

ವಾರ್ಷಿಕ ಚಂದಾ ರೂ. ೧೦ : ಆಜೀವ ಪೋಷಕತ್ವ ರೂ. ೧೦೦

(ಚೆಕ್ಕುಗಳಿಗೆ ೨ ರೂ. ಹೆಚ್ಚು)

೭ನೆಯ ಸಂಪುಟ ಪ್ರಾರಂಭ ೧ ಜನವರಿ ೮೩ : ಬೇಗ ಚಂದಾದಾರರಾಗಿರಿ

ವಿಳಾಸ : ಸಂಪಾದಕ, **ಗ್ರಂಥಲೋಕ**, ೪೯, ಟಿ. ಕೆ. ಬಡಾವಣೆ

ಸರಸ್ವತೀಪುರಂ, **ಮೈಸೂರು** ೫೭೦೦೦೯

ರೈತ ಹೋರಾಟದ ಸಮಗ್ರ ಚಿತ್ರಣ

ರೈತ ರಾಯಭಾರಿ

ವಾರ್ಷಿಕ ಚಂದಾ : ೧೫ ರೂ. (ಅಂಚೆ ವೆಚ್ಚ ಸೇರಿ)

ವಿಳಾಸ : ಜೋಗನಹಳ್ಳಿ ಗುರುಮೂರ್ತಿ, ಜೋಗನಹಳ್ಳಿ; ಭುವನಹಳ್ಳಿ ಅಂಚೆ, ೫೭೧೧೦೨, ತಾ. ಪಿರಿಯಾ ಪಟ್ಟಣ, ಜಿ. ಮೈಸೂರು.

DEVU PATTAR
GUTTIPETH,
SHAHAPUR-585223

ಮಾರಾಟಕ್ಕೆ ದೊರೆಯುತ್ತದೆ

ಡಿ. ಲಿಂಗಯ್ಯನವರ ಹೊಸ ಕಾದಂಬರಿ

ಅಸಹಾಯಕರು

ಪುಟ : ೨೨೦ ಬೆಲೆ : ೧೦ ರೂ.

ವಿಳಾಸ : **ದಿನಕರ ಪ್ರಕಾಶನ,** ೬೯೦, ೭ನೇ ಬ್ಲಾಕ್, ಬನಶಂಕರಿ ೩ನೇ ಘಟ್ಟ

ಬೆಂಗಳೂರು ೫೬೦ ೦೮೫

ಅಭಿವೃದ್ಧಿಯೆಡೆಗೆ ಸರ್ಕಾರದ ಮಹತ್ತರ ಹೆಜ್ಜೆ

- ರಾಜ್ಯದ ೧೦೨ ತಾಲೂಕುಗಳಲ್ಲಿ ಆಗಾಗ್ಗೆ ಉಂಟಾಗುವ ಅಭಾವ ಪರಿಸ್ಥಿತಿಯ ಶಾಶ್ವತ ನಿವಾರಣೆಗಾಗಿ ಕೇಂದ್ರಕ್ಕೆ ೨೦೫ ಕೋಟಿ ರೂ.ಗಳ ಯೋಜನೆಯ ಸಲ್ಲಿಕೆ.
- ಇಪ್ಪತ್ತು ಅಂಶಗಳ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅತ್ಯಂತ ಹೆಚ್ಚಿನ ಆದ್ಯತೆ, ಅದಕ್ಕಾಗಿ ತಾಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದ ಸಮಿತಿಗಳ ರಚನೆ.
- ಸಾಮಾಜಿಕ ನ್ಯಾಯದಿಂದ ಕೂಡಿದ ಆರ್ಥಿಕ ಪ್ರಗತಿ ಸರ್ಕಾರದ ಗುರಿ.
- ಅಂಗವಿಕಲರಿಗಾಗಿ ೧೦.೫೦ ಲಕ್ಷ ರೂಪಾಯಿ ಅಂದಾಜು ವೆಚ್ಚದ ವಿಶೇಷ ಯೋಜನೆಗಳು.
- ಪ್ರೆಸ್ ಅಕಾಡೆಮಿ ಸ್ಥಾಪನೆಗೆ ನಿರ್ದಿಷ್ಟ ಕ್ರಮ.
- ಹಂಪೆಯ ಪ್ರಾಚೀನ ವೈಭವವನ್ನು ಮರಳಿ ತರಲು ವಿಶೇಷ ಯೋಜನೆ.
- ಮೈಸೂರಿನಲ್ಲಿ ವಿಶ್ವ ಕನ್ನಡಿಗರ ಸಮ್ಮೇಳನವನ್ನು ನಡೆಸಲು ನಿರ್ಧಾರ.
- ರಾಜ್ಯದಲ್ಲೇ ತಯಾರಾಗಿ, ಪ್ರದರ್ಶನವಾಗುವ ಎಲ್ಲಾ ಕನ್ನಡ ಚಿತ್ರಗಳಿಗೆ ಶೇಕಡಾ ೫೦ ರಷ್ಟು ಮನರಂಜನಾ ತೆರಿಗೆ ವಿನಾಯಿತಿ.
- ಗ್ರಾಮ ಸಹಾಯಕರ ಮಾಸಿಕ ಸಂಭಾವನೆ ೧೦೦ ರೂ. ಯಿಂದ ೧೨೦ ಕ್ಕೆ ಹೆಚ್ಚಳ.
- ವಿದ್ಯುತ್ ಯೋಜನೆಗಳಿಗಾಗಿ ೧೧೭ ಕೋಟಿ ರೂ. ನೀಡಿಕೆ.
- ೧೨ ಕೋಟಿ ರೂ. ವೆಚ್ಚದಲ್ಲಿ ಉದ್ಯೋಗ ದೃಢೀಕರಣ ಯೋಜನೆ.
- ಸಹಕಾರಿ ವಲಯದಲ್ಲಿ ಇನ್ನೂ ನಾಲ್ಕು ನೂಲಿನ ಗಿರಣಿಗಳ ಸ್ಥಾಪನೆ.

ಪ್ರಕಟಣೆ : ಕರ್ನಾಟಕದ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ

ಸಂಕ್ರಮಣ

ಸಂಪುಟ : ೧೮ ಸಂಚಿಕೆ : ೧-೨

ಮಾಸಿಕ ಸಾಹಿತ್ಯ ಸಂಕಲನ

ಜೂನ-ಜುಲೈ ೧೯೮೨

SANKRAMANA 125-126 A Literary Monthly in Kannada

June-July 1982 Vol XVIII Nos. 1—2

Editor : **Chandrashekhar Patil**

Sankramana Prakashana Dharwad 580008 Phone : 80509

Printed at Rajshri Printing Press, Dharwad-1.

ಬೇಂದ್ರೆಯವರ ಮೂರು ಕವನಗಳು : ಜಿ. ಎಸ್. ಅವಧಾನಿ ೫

ಪ್ರೇಮಿಗಳ ಬದುಕು (ಕವನ) : ಸದಾನಂದ ಪಾಟೀಲ ೧೫

ಇದ್ದರೆಲ್ಲ ಇಲ್ಲದಂತೆ (ಕತೆ) : ಕೆ. ಆರ್. ಗಂಗಾಧರಯ್ಯ ೧೭

ಗರ್ಭಗುಡಿಯಲ್ಲಿ (ಕವನ) : ಎಂ. ಎಸ್. ಮೂರ್ತಿ ೨೬

ಗಾಂಧಿ-ಒಬ್ಬ ಮನುಷ್ಯ : ಎಸ್. ಎನ್. ಗುಬ್ಬಿ ೨೭

ಕತ್ತಲ ಕರ್ಮಕಾರಿಗಳು (ಕವನ) : ಆರ್. ಸುವರ್ಣ ಕಾಡನಕುಪ್ಪೆ ೪೦

ಅಭಿವ್ಯಕ್ತಿ ಸ್ವಾತಂತ್ರ್ಯ–ಚೆರಬಂಡರಾಜು ಬಲಿ : ಮಂಗ್ಳೂರು ವಿಜಯ ೪೧

ಕುಮಾರವ್ಯಾಸನ ಶ್ರೀಕೃಷ್ಣ ಪರಮಾತ್ಮನೇ? : ಚಿ. ರಾಮಸ್ವಾಮಿ ೪೭

ವಿಶ್ವಕಥಾಕೋಶ—೪ನೆಯ ಕಂತು : ಸಿ. ವಿ. ವೇಣುಗೋಪಾಲ ೫೧

ಜೀವಿಸಿದ್ದಕ್ಕೆ ಸಾಕ್ಷಿ (ಕವನ) : ರಘು ಕುಲಕರ್ಣಿ ೬೨

ಬೆಸಗರಹಳ್ಳಿ ಅವರ 'ಒಂದು ಹುಡುಗನಿಗೆ ಬಿದ್ದ ಕನಸು' : ಎಸ್, ಶಿವಾನಂದ ೬೩

ಲಚಮಿ (ಕವನ) : ಸಿ. ಎಂ. ಚೆನಬಸಪ್ಪ ೭೦

ಗೊರೂರು ಅವರ 'ಮೆರವಣಿಗೆ' : ಎಂ. ಜಿ. ಈಶ್ವರಪ್ಪ ೭೧

ಮುಟ್ಟಾಟ (ಕವನ) : ಪೋಲಂಕಿ ರಾಮಮೂರ್ತಿ ೭೫

ಆಕ್ರಂದನ (ಕವನ) : ಮುಳ್ಳೂರು ನಾಗರಾಜ ೭೮

'ರಾಮಾಯಣದ ಸೀತಾಯಣ' (ಪ್ರತಿಕ್ರಿಯೆ) : ಭಗವಾನ್ ೭೯

ಸಾವು (ಕವನ) : ಎಚ್. ಎಸ್. ಮುಂಕ್ತಾಯಕ್ಕ ೮೮

ಏಳು ಕವನ ಸಂಕಲನಗಳು (ವಿಮರ್ಶೆ) : ಕೆರ ೮೯

ಎರಡು ಕವನಗಳು : ಶಿರ್ವ ಮುಂಜಾಪ್ಪರ್ ಎಸ್. ಅಸ್ನಾದಿ ೯೪

ಜನಾಂಗೀಯ ಕಿರುಪರಿಚಯಗಳು : ಮಹಿಮ ೯೭

ನಾಲ್ಕು ಚಂಪಾ ನಾಟಕಗಳು : ಡಿ. ರಘುನಾಥರಾವ್ ೧೦೦

ಈ ಸಂಚಿಕೆಯ ಲೇಖಕರು

ಜಿ.ಎಸ್. ಅವಧಾನಿ ಕನ್ನಡ ಪ್ರಾಧ್ಯಾಪಕ, ಎಸ್.ಡಿ.ಎಂ. ಕಾಲೇಜು ಹೊನ್ನಾವರ **ಸದಾನಂದ ಪಾಟೀಲ** ಕನ್ನಡ ಪ್ರಾಧ್ಯಾಪಕ, ಗವಿಸಿದ್ಧೇಶ್ವರ ಕಾಲೇಜು, ಕೊಪ್ಪಳ **ಕೆ. ಆರ್. ಗಂಗಾಧರಯ್ಯ** ನಂ. ೮೮೭, I ಬ್ಲಾಕ್, II ಸ್ಟೇಜ್, ರಾಜಾಜಿನಗರ, ಬೆಂಗಳೂರು–೧೦ **ಎಂ. ಎಸ್. ಮೂರ್ತಿ** ವಿಜಯನಗರ ಪ್ರೌಢಶಾಲೆ, ಟಿ. ಬಿ. ಪಿ. ಮುನಿರಾಬಾದ, ಜಿ. ರಾಯಚೂರು **ಎಸ್. ಎನ್. ಗುಬ್ಬಿ** ಬಿ.ಡಿ.ಟಿ. ಎಂಜಿನಿಯರಿಂಗ್ ಕಾಲೇಜು, ದಾವಣಗೆರೆ **ಆರ್. ಸುಪರ್ಣ ಕಾಡನಕುಪ್ಪೆ** ೩೮೭, ೧೪ನೇ ಮೇನ್, ಸರಸ್ವತಿಪುರಂ, ಮೈಸೂರು ೯ **ಮಂಗ್ಳೂರು ವಿಜಯ** ೩೧, ಕಲ್ಯಾಣಕರ ಬಿಲ್ಡಿಂಗ್, ಗುಲಬರ್ಗಾ-೨ **ಚೆ. ರಾಮಸ್ವಾಮಿ** ಕನ್ನಡ ಪ್ರಾಧ್ಯಾಪಕ, ಮದ್ರಾಸು ವಿ.ವಿ. ಮದ್ರಾಸು-೫ **ಸಿ.ವಿ. ವೇಣುಗೋಪಾಲ** ಇಂಗ್ಲಿಷ್ ಪ್ರಾಧ್ಯಾಪಕ, ಕರ್ನಾಟಕ ವಿ. ವಿ., ಧಾರವಾಡ–೩ **ರಘು ಕುಲಕರ್ಣಿ** ಭಾಷಾಶಾಸ್ತ್ರ ವಿಭಾಗ, ಉಸ್ಮಾನಿಯಾ ವಿ.ವಿ. ಹೈದ್ರಾಬಾದ **ಎಸ್. ಶಿವಾನಂದ** ಸಾಸ್ವೆಹಳ್ಳಿ, ಜಿ. ಶಿವಮೊಗ್ಗ **ಸಿ. ಎಂ. ಚೆನಬಸಪ್ಪ** ಸಿಂಡಿಕೇಟ ಬ್ಯಾಂಕ, ಸುಪರ ಮಾರ್ಕೆಟ ಶಾಖೆ, ಹುಬ್ಬಳ್ಳಿ–೨೯ **ಎಂ.ಜಿ. ಈಶ್ವರಪ್ಪ** ಇಂಗ್ಲಿಷ ಪ್ರಾಧ್ಯಾಪಕ, ಡಿ.ಆರ.ಎಂ. ಸೈನ್ಸ್ ಕಾಲೇಜು, ದಾವಣಗೆರೆ **ಪೋಲಂಕಿ ರಾಮಮೂರ್ತಿ** ಇಂಗ್ಲಿಷ್ ಪ್ರಾಧ್ಯಾಪಕ ಮೈಸೂರು ವಿ. ವಿ., ಮೈಸೂರು–೬ **ಮುಳ್ಳೂರು ನಾಗರಾಜ** ನಿರುದ್ಯೋಗಿ ಯುವಜನ ವೇದಿಕೆ, ನಂಜನಗೂಡು **ಭಗವಾನ್** ಎಂ–೧೦, ಹುಡ್ಕೊ ಕಾಲನಿ, ಕುವೆಂಪು ನಗರ, ಮೈಸೂರು-೯ **ಎಚ್. ಎಸ್. ಮುಕ್ತಾಯಕ್ಕ** ಕನ್ನಡ ಪ್ರಾಧ್ಯಾಪಕಿ, ಎಸ್. ಎಸ್. ಆರ್. ಜಿ. ಮಹಿಳಾ ಕಾಲೇಜು, ರಾಯಚೂರು **ಕೆರ ಕೇರಾಫ್** ಸಂಕ್ರಮಣ ಶಿರ್ವ **ಮುಂಜಾಫ್ಫರ್ ಎಸ್. ಅಸ್ಸಾದಿ** ಕಲೀಮ್ ಮನ್ಜಿಲ್, ಶಿರ್ವ, ದ. ಕ. **ಮಹಿಮ** ಎಸ್. ಜಿ. ಮಹೇಶ್ವರಯ್ಯ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ. ವಿ., ಧಾರವಾಡ–೩ **ಡಿ. ರಘುನಾಥರಾವ್** ಕನ್ನಡ ಪ್ರಾಧ್ಯಾಪಕ, ವಿಜಯ ಕಾಲೇಜು, ಮೂಲ್ಕಿ. ದ. ಕ.

ಶುಭಾಶಯಗಳೊಂದಿಗೆ :

ಬೆಲ್ಲದ ಆ್ಯಂಡ ಕಂಪನಿ

ಹುಬ್ಬಳ್ಳಿ–೨೦ : ಧಾರವಾಡ–೧.

ಪ್ರೇಮಿಗಳ ಬದುಕು

ಸದಾನಂದ ಪಾಟೀಲ

೧

ಇಲ್ಲಿ ಕೇಳಿ
ಮೋಹ ತೊಗಲಿನ ಮೇಲೆ
ಪ್ರೀತಿ ಬಣ್ಣದ ಮೇಲೆ
ಪ್ರೇಮ ದುಡ್ಡಿನ ಮೇಲೆ
ಕುಡಿಗಣ್ಣ ನೋಟದಲಿ ಚಂದುಟಿಯ ನಗೆಯಲ್ಲಿ
ಸ್ನೇಹ ಕುಡಿ ಚಾಚುವದು ಬಯಕೆ ಮರನೇರುವದು
ಮುರಿ ಹೊಡೆದು ಸುತ್ತುತ್ತ ಮೈ ತುಂಬ ತುಂಬುತ್ತ
ಬೆಳಗಿನಿಂದಲೂ ಹಗಲು ಹಗಲಿನಿಂದಲೂ ಇರುಳು
ಸುತ್ತುವುದೇ ಸುತ್ತುವುದು.
ಬಳ್ಳಿ
ಹಬ್ಬುತ್ತ ಹೋಗುವುದು.

ಸೊಗದ ಸುಂದರ ಪ್ರೀತಿ ಬಳ್ಳಿ ಮೊಗ್ಗೆಯ ಬಿಡಲು
ಮೊಗ್ಗೆ ಮರಿಯಾಗುವುದು ಹೂವರಳಿ ನಗುವುದು
ಪ್ರೇಮ ಹಣ್ಣಾಗುವುದು ಸಂಭ್ರಮವೇ ಸಂಭ್ರಮವು
ತುಟಿಗಿಲ್ಲ ಬೇಸರ ಗಲ್ಲ ಕೆಂಪು ಕೆಂಪು
ಹಾವುಗಳ ಹೆಣೆಯಾಟ ಕತ್ತಲೆಯ ಕೂಟ
ಬೇರೆ ಜಗದಿರವಿಲ್ಲ ಪ್ರೇಮ ಕಾಮದಾಟ

೨

ವಾಸ್ತವದ ಹಗಲಿನಲಿ
ಸತ್ಯಗಳ ಬೆಳಕಿನಲಿ
ಸಮಸ್ಯೆಗಳ ಸುಳಿಗಳಲಿ
ಮರ ಒಣಗತೊಡಗುವದು

ಬಳ್ಳಿ
ಬಳಲುವುದು
ಹಣ್ಣಾದ ಕಾಯಿ ಮುಟ್ಟುತಿರೆ ಕಳಚುವುದು
ಇದ್ದ ಕಾಲಡಿ ಕುಸಿದು ಕಂದಕವೇ ಬೀಳುವದು
ಬಣ್ಣನೆಯ ಮಾತುಗಳು ದೂಡಿಟ್ಟ ಲೆಖ್ಖಗಳು
ತಿರವು ಮುರವು
ಅಂಬಿಗನೇ ಬಲ್ಲ ನದಿಯ ಇರವು
ಹರವು.
ನೆನಪುಗಳ ಜಾತ್ರೆಯಲಿ ಉತ್ಸಾಹದುತ್ಸವದಿ
ಪ್ರೇಮ ತೇರಲಿ ಕೂತು ಪೂಜೆಗೊಳ್ಳುವ ಬದುಕು
ನೆನಪಿನುತ್ಸವ ಮುಗಿಯೆ ಕಣ್ಣೀರ ಬೇಸರದಿ
ಸಾಯಬೇಕೆನಿಸುವುದು ಅಯ್ಯೋ ಸಾಕು.

೩

ಗಂಡು ಹೆಣ್ಣಿನ ಪ್ರೀತಿ ಪ್ರೇಮ ಹೆದ್ದಾರಿಯಲಿ
ಸಾಗುವುದೇ ಇಲ್ಲ ಇಲ್ಲಿ.
ಆಡಿದ್ದೇ ಮಾತು ನೆನೆದದ್ದೇ ನನಸಾಗಿರಲು
ಬೇಕೆನಿಸುವುದು ಬದುಕು ನಡೆಯದಿಲ್ಲಿ.

ಮುಂದೊಂದು ಕಾಲಕ್ಕೆ ಚಿತ್ರ ಹಿಂಸೆಯ ನಡುವೆ
ಎಂಜಲವೇ ಎಡೆಯಾಗಿ ಬಾಳಿನಲ್ಲಿ
ಯವ್ವನದ ಉಪಕಾರ ಪ್ರೇಮ ಸಾಕ್ಷಾತ್ಕಾರ
ಈ ಹೆಣ್ಣು ಗರತಿಯರ ಸಾಲಿನಲ್ಲಿ
ಗಂಡು ಹೂನಗೆಯ ಶಯ್ಯೆಯಲ್ಲಿ.

ಇದ್ದರೆಲ್ಲ ಇಲ್ಲದಂತೆ

ಕತೆ

ಕೆ. ಆರ್. ಗಂಗಾಧರಯ್ಯ

ಕಾರಿರುಳ ಕತ್ತಲು ತನ್ನ ಬಾಹುಗಳ ಪಾಳ್ಯದ ಮೇಲೆ ಚಾಚಿತ್ತು. ಕಳೆಯಿಲ್ಲದ ಮುದುಕರ ಕಣ್ಣುಗಳಂತೆ ಆಗಸದಲ್ಲಿ ಅಲ್ಲೊಂದು ಇಲ್ಲೊಂದು ಚುಕ್ಕೆಗಳು ಮಿಟುಕುತ್ತಿದ್ದವು. ಗಾಳಿಯೆನ್ನುವುದು ತನ್ನದೇ ಆದ ಗತಿಯಲ್ಲಿ ಬೀಸುತ್ತಿತ್ತು. ಒಮ್ಮೊಮ್ಮೆ ತೆಳುವಾಗಿ ಮತ್ತೊಮ್ಮೆ ಸುಳಿಯಾಗಿ ಕಾರಿರುಳ ಕತ್ತಲೆಗೆ ಭೋರೆಂಬ ಗಾಳಿ ಜೊತೆಯಾದ್ದಕ್ಕೋ ಎಂಬಂತೆ ಕೆಲವು ನಾಯಿಗಳು ಒಂದೇ ಸಮನೆ ಬೊಗಳುತ್ತಿದ್ದವು. ಪಾಳ್ಯದ ಎಲ್ಲಾ ಮನೆಗಳೂ ನಿದ್ದೆಯಲ್ಲಿ ಮುಳುಗಿದ್ದರೆ ಹಡ್ಡಿಯಲ್ಲಿ ಮಾತ್ರ ಒಂದು ಮಿಣುಕು ಬುಡ್ಡಿ ಪುಟ್ಟ ಗುಡಿಸಲೊಳಗೆ ಮಂದಬೆಳಕಿನ ಛಾಯೆಯ ಅತ್ತಿತ್ತ ಹರಿಸುತ್ತಾ ಅಲುಗಾಡುತ್ತಿತ್ತು. ಲಕುಮವ್ವನ ಮನಸ್ಸು ಸ್ಥಿರವಲ್ಲದೆ ಹೊಯ್ದಾಡುತ್ತಿತ್ತು. ಸಂಜೆ ಮೆಲ್ಲನೆ ಕಾಲಿಡುತ್ತಿರುವಾಗ್ಗೆ ಹಟ್ಟಿಯಿಂದ ಕಾಲುತೆಗೆದ ಗಂಡ ಸರಿರಾತ್ರಿ ಮೀರಿದರೂ ವಾಪಸು ಬಾರದಾಗ ಆತಂಕ ಅವಳ ಹಿಡಿದಿತ್ತು. ಊರೊಳಗಿಂದ `ಅಲ್ಲಾ...ಹೋ...ಅಕ್ಬರ್...' ಮಸೀದಿಯ ನಮಾಜು ಸಮಯಕ್ಕೆ ಉಂಡು ಸಿಲವಾರದ ತಟ್ಟೆ ತೊಳದಿಟ್ಟು ಗುಡಿಸಲ ಮೂಲೆಯಲ್ಲಿ ಗೋಣಿ ತಾಟು ಹಾಸಿ ದೇಹ ಚೆಲ್ಲಿದವಳಿಗೆ ಎಷ್ಟು ಹೊತ್ತಾದರೂ ನಿದ್ದೆ ಹತ್ತಿರಲಿಲ್ಲ. ಗಂಡನ ಕಾಯುವಿಕೆಯಲ್ಲಿ ಒಮ್ಮೊಮ್ಮೆ ಅವಳಿಗೆ ಅರ್ಥವಿಲ್ಲ ಅನಿಸುತ್ತಿತ್ತು. ಯಾಕಂದರೆ ದ್ಯಾವನ ವ್ಯವಹಾರವೇ ರಾತ್ರಿಯದು. ಈಗ್ಗೆ ಸುಮಾರು ಹತ್ತು ವರ್ಷಗಳಿಂದಲೂ ಪಾಳ್ಯದ ಸುತ್ತಮುತ್ತಲ ತೋಟಗಳ ತೆಂಗಿನ ಮರಗಳು ರಾತ್ರಿಯಲ್ಲಿ ದ್ಯಾವನ ಬಿಸಿ ಅಪ್ಪುಗೆಯ ಕಾಡಿಸಿ ಹತ್ತುವರ್ಷದ ಈ ಕಾಯಕದಲ್ಲಿ ದ್ಯಾವ ಸಿಕ್ಕಿಬಿದ್ದದ್ದೂ ಆನೇಕ ಸಲ ಮೈಯೆಲ್ಲಾ ಒದೆತ ತಿಂದು ಜಡ್ಡುಗಟ್ಟಿದೆ. ಗಂಡನ ಮೈಮೇಲಿನ ಬಾಸುಂಡೆಗಳ ಮೊದಮೊದಲಿಗೆ ಕಂಡಾಗ ಲಕುಮವ್ವನಿಗೆ

ಕರುಳು ಕಿತ್ತು ಬರುತ್ತಿತ್ತು. ಈ ಕಸ್ಬು ಯಾಕ್ಬೇಕ್ ನಿಂಗೆ ಮಾನ್‌ವಾಗಿ ಎಲ್ಲಾರಾ ಕೂಲಿಮಾಡಕಾದಾ—ಅನ್ನುತ್ತಾ ಮೂಗಿಂದ ಸಿಂಬಳ ತೆಗೆದು ನೆಲಕ್ಕೆ ಸೀಟಿ ಸೆರಗು ಬಾಯಿಗೆ ತಂದು ಮುಳುಮುಳು ಅಳುತ್ತಿದ್ದಳು. ದ್ಯಾವ ಚಿಕ್ಕಂದಿನಿಂದಲೂ ಮೈಮುರಿದು ದುಡಿಯುವ ಬಾಬತ್ತು ಬೆಳಸಿಕೊಂಡವನಲ್ಲ. ಒಂಬತ್ತು ವರ್ಷದವನಿದ್ದಾಗಲೇ ಗೌಡರ ಮನೆಯಲ್ಲಿ ಚಾಕರಿ ಮಾಡಿಕೊಂಡಿದ್ದವ. ಆಗಲೇ ಹಿತ್ತಲಲ್ಲಿ ಕಾಣದಂತೆ ಒಂದೊಂದು ಪೆಂಡಿಹುಲ್ಲೂ ಕದ್ದು ಮಾರುವ ಜಾಣತನ ತೋರಿಸಿದ್ದ. ಅಲ್ಲಿಂದ ಪ್ರಾರಂಭವಾದ ಅವನ ಕಸುಬು ಹಂತ ಹಂತವಾಗಿ ಬೆಳೆದು ಈಗ ಕಳ್ಳರಲ್ಲಿ ಕಳ್ಳನಾಗಿದ್ದ. ಸುತ್ತಮುತ್ತೆಲ್ಲಾ ದ್ಯಾವ ಅಂದರೆ ನಂಬರ್ ಒನ್ ಅನ್ನುವಷ್ಟು ಹೆಸರು ಮಾಡಿದ್ದ.

ಕಾಟಿನ ಒಂದು ಮೂಲೆಗೆ ಪಕ್ಕದಲ್ಲೇ ಮಲಗಿದ್ದ ಮಗ ಪರತ ನಿದ್ದೆಗಣ್ಣಲ್ಲಿ ಹೊರಳಿ ನೆಲಕ್ಕೆ ಬಿದ್ದಾಗ ಎಳೆದು ಮತ್ತೆ ಕಾಟಿನಮೇಲೆ ಮಲಗಿಸಿದಳು. ಸಂಕ್ರಾಂತಿಗೆ ಇನ್ನೂ ಇಪ್ಪತ್ತು ದಿನಗಳಿತ್ತು. ಛಳಿಯು ಅಪಾಂತರ. ಪರತ ಎರಡೂ ಕಾಲುಗಳನ್ನು ಕುಗ್ಗಿ ಹಿಡಿದು ಮಂಡಿಯ ಜೊತೆಮಾಡಿ ಗದ್ದಕ್ಕೆ ತಂದಾಗ ಮೂಲೆಯ ಗಳುವಿನಲ್ಲಿ ನೇತಾಡುತ್ತಿದ್ದ ಸೀರೆಯ ಪದರನ್ನು ತಂದು ಹೊದಿಸಿದಳು. ಪರತ ಲಕುಮವ್ವನ ಆರು ವರ್ಷದ ಮಗ. ಗಂಢನ ಛಾಳಿ ಮಗನಿಗೆ ಬೇಡವೆಂದುಕೊಂಡು ಒಳ್ಳೆಯ ರೀತಿಯಲ್ಲಿ ಅವನನ್ನು ಬೆಳಸುವ ಉದ್ದೇಶದಿಂದ ಲಕುಮವ್ವ ಅವನನ್ನು ಸ್ಕೂಲಿಗೆ ಸೇರಿಸಿದ್ದಾಳೆ. ಮೂರು ಚೂರಾಗಿರುವ ಸಿಲೇಟು ಹಿಡಿದು ಬಳಪದಿಂದ ಆಟ ಊಟ ಓಟ ಅಂತ ತೊದಲಿದಾಗೆಲ್ಲಾ...ಒಂದೊಂದ್ಲಿ ಒಂದು ಒಂದೆಳ್ಳ ನಾಕು-ಅಂತ ತಪ್ಪು ಮಗ್ಗಿ ಹೇಳುವಾಗೆಲ್ಲಾ ಲಕುಮವ್ವನಿಗೆ ಸಂತಸ ತನ್ನ ಜೀವಮಾನವಿದ್ದರೆ ಮಗನನ್ನು ಓದಿಸಿ ಇಜಾರ ಹಾಕಿ ಪಟ್ಟಣವಲ್ಲಿ ಓಡಾಡುವಂತೆ ಮಾಡಬೇಕೆಂಬ ಆಲೋಚನೆ ಅವಳದು.ಸಮಯ ಮೆಲ್ಲನೆ ಸರಿಯುತ್ತಿತ್ತು ಆತಂಕ ಇಳಿದಾಗ ಒಮ್ಮೊಮ್ಮೆ ರೆಪ್ಪೆಯ ಮೇಲೆ ಕೂತು ಹೊಂಚುಹಾಕುತ್ತಿದ್ದ ನಿದ್ದೆ ರಪ್ಪನೆ ಅಮುಮುತ್ತಿತ್ತು. ಅರೆನಿದ್ದೆ ಎಚ್ಚರದ ಸ್ಥಿತಿಯಲ್ಲಿಯೇ ಬಹಳ ಹೊತ್ತು ಕಳೆದಳು. ಒಂಪ ಮಾಡಲು ದೇಹ ತೀಟೆ ಮಾಡಿತು. ಎದ್ದು ತಡಿಕೆಯ ನೂಕಿ ಹೊರ ಬಂದಳು. ಛಳಿಗೆ ಒಮ್ಮೆಗೇ ಮೈ ನಡುಗಿದಾಗ ಹಟ್ಟಿಯ ಪಕ್ಕದಲ್ಲೇ ಕೂತಳು. ಎದ್ದು ನಿಂತವಳಿಗೆ ಆಗಸದಲ್ಲಿ ಬೆಳ್ಳಿ ಕಾಣಲಿಲ್ಲವಾದ್ದರಿಂದ ಬೆಳಕು ಹರಿಯಲಿಕ್ಕೆ ಇನ್ನೂ ಬಹಳ ಹೊತ್ತು ಇದೆ ಅಂದುಕೊಂಡು ಗುಡಿಸಲ ಒಳಹೊಕ್ಕು ಮತ್ತೆ ಕಾಟಿಗೆ ಕುಂಡೆಯೂರಿದಳು. ಕಾಟಿನ ಕೆಳಗಿಟ್ಟಿದ್ದ ಎಲೆಯಡಿಕೆ ಸಂಚಿ ಕೈಗೆತ್ತಿಕೊಂಡು ಪದರಗಳೆಲ್ಲಾ ಜಾಲಾಡಿದಾಗ ಸಿಕ್ಕಿದ ಎರಡು ಚೂರು ಗೋಟು ಅಡಿಕೆಯ ಬಾಯೊಳಗೆ ಹಾಕಿ ಕಟುಮ್ಮನೆ ಕಡಿದು. ಒಣಗಿದ ಎಲೆಗೆ ನೀರಿಲ್ಲದೆ ಪುಡಿಯಾಗಿದ್ದ ಸುಣ್ಣ ಹಚ್ಚಿ ಬಾಯಿಗಿಟ್ಟು ಜಗಿದಳು.

ಹೊಗೆಕಡ್ಡಿಯ ಪುಡಿ ಖಾಲಿಯಾಗಿದ್ದರಿಂದ ಸಂಚಿ ಕೊಡವಿದಾಗ ಕೈಗುದುರಿದ ಧೂಳನ್ನೇ ಬಾಯಿಗೆ ಹಾಕಿಕೊಂಡು ತೃಪ್ತಳಾದಳು. ಎಲೆಯಡಿಕೆ ಜಗಿದಂತೆಲ್ಲಾ ರಸ ನಿಧಾನ ಗಂಟಲನಾಳಕ್ಕೆ ಇಳಿಯುತ್ತಿದ್ದಂತಯೇ ಒಂದು ರೀತಿಯ ಸಮಾಧಾನವಾಗಿ ಹಾಗೇ ಕಾಟಿನ ಮೇಲೆ ಉರುಳಿಕೊಂಡು ಪರತನನ್ನು ಇನ್ನೂ ಹತ್ತಿರಕ್ಕೆಳೆದುಕೊಂಡು ಮಲಗಿದಳು. ಪರತನ ಎಣ್ಣೆ ಕಾಣದ ತಲೆಗೂದಲಲ್ಲಿ ಬೆರಳಿಕ್ಕಿ ಆಡಿಸುತ್ತಿರುವಂತೆಯೇ ರೆಪ್ಪೆಯ ಮೇಲೆ ಹೊಂಚು ಹಾಕುತ್ತಾ ಕೂತಿದ್ದ ನಿದ್ದೆ ಕಣ್ಣುಮುಚ್ಚಿಸಿತು, ನಾಯಿಂಗಳು ಸುಮ್ಮನಾಗಿದ್ದವು.

ಲಕುಮವ್ವನ ಮುಚ್ಚಿದ ಕಣ್ಣೊಳಗೆ ಚಿತ್ರ ಸುತ್ತುತ್ತಿತ್ತು...ತನ್ನ ಹಟ್ಟಿಯಲ್ಲಿ ಅಂದು ಸಡಗರ. ಎಲ್ಲಾಗುಡಿಸಲುಗಳ ಮುಂದೆಯೂ ಸಾರಿಸಿ ರಂಗೋಲಿ ಇಟ್ಟಿದ್ದಾರೆ. ಅಲ್ಲಲ್ಲಿ ಮಾವಿನ ಸೊಪ್ಪಿನ ತೋರಣ ಕಟ್ಟಿದ್ದಾರೆ. ಹುಡುಗರೆಲ್ಲಾ ಕೇಕೆಹಾಕಿ ನೆಗೆದಾಡುತ್ತಿದ್ದರೆ ದೊಡ್ಡವರೆಲ್ಲಾ ಯಾರಿಗೋ ಕಾಯುತ್ತಿದ್ದಾರೆ. ಒಮ್ಮೆಲೇ ಧೂಳೆಬ್ಬಿಸುತ್ತಾ ಬಂದು ನಿಂತ ಮೋಟಾರಿನಿಂದ. ಐದು ಅಡಿ ಮೂರಂಗುಲದ ಇಜಾರಹಾಕಿದವ ಒಬ್ಬ ಇಳಿದು ನಿಂತ ಕೂಡಲೇ ಊರಿನ ಗೌಡರು ಪಟೇಲರು, ಸಿದ್ರಾಮಯ್ಯ, ಶಂಕರಲಿಂಗಪ್ಪ, ರಾಜಣ್ಣ, ಬೋರೇಗೌಡ ನಾಮುಂದು ತಾಮುಂದು ಅಂತ ಹಾರಹಿಡಿದು ನುಗ್ಗಾಡಿದರು. ಅವ ನಿಧಾನವಾಗಿ ನಡೆದು ಹಟ್ಟಿಯ ಒಳಗೆ ಬರುತ್ತಿದ್ದಾನೆ. ಅವನ ಹಿಂದೆ ಊರವರೂ ಹಟ್ಟಿಯವರೂ ಹೆಜ್ಜೆ ಹಾಕುತ್ತಿದ್ದಾರೆ. ಲಕುಮವ್ವ ತನ್ನ ಗುಡಿಸಲಿಂದ ಆಚೆ ಬಂದುನಿಂತಳು. ತಲೆಕೂದಲೆಲ್ಲಾ ಬೆಳ್ಳಗಾಗಿದೆ.ಕಣ್ಣು ಬೇರೆ ಮಂಜು. ಸಾಲದ್ದಕ್ಕೆ ಒಲೆಗಿಟ್ಟ ಹಸಿಪುಳ್ಳೆ ಹೊತ್ತಿಸಲು ಊದಿ ಊದಿ ಬೂದಿಕೊಂಡು ಹೊಗೆಗೆ ಕಣ್ಣಲ್ಲಿ ನೀರಾಡಿದ್ದರಿಂದ ಇನ್ನೂ ಮುಸುಕಾದ ಕಣ್ಣು ನೋಡಿದವಳಿಗೆ ಆ ವ್ಯಕ್ತಿ ಯಾರೆಂದು ಗೊತ್ತೇ ಆಗಲಿಲ್ಲ. ಅದಾರದೂ ? ಮುಂದಲೆಯ ಮೇಲೆ ಕೈಯಿಟ್ಟು ದಿಟ್ಟಿಸಿದಳು.ಇದೇನ್ಲಾ ಲಕುಮವ್ವಾ ಹಿಂಗೇಳಿಯೇ. ನಿಮ್ ಪರತಲ್ಲೇನಬೇ, ಅಮುಲ್ದಾರಾಗವ್ನೆ...ಕರಿಯಜ್ಜ ಬೊಚ್ಚು ಬಾಯಲ್ಲಿ ಮಾತು ಉದುರಿಸಿದ. ಪರತ ಹತ್ತಿರ ಬಂದ. ಬರುತ್ತಿದ್ದ. ಇನ್ನೇನು ಪರತನಿಗೂ ಅವಳಿಗೂ ಮಾರುದೂರ. ಎಲ್ಲಿಂದಲೋ ಒಂದು ನಾಯಿ ಪರತನ ಮೇಲೆ ಬಿದ್ದು ಅವನ ಬಿಳಿಯ ಇಜಾರ ಅಂಗಿ ಎಲ್ಲವನ್ನೂ ಹರಿದು ಒಂದೇ ರಂಪ ಮಾಡಿತು. ಪರತ ನೆಲಕ್ಕೆ ಬಿದ್ದರೂ ಬಿಡದೆ ನಾಯಿ ತನ್ನ ಬಾಯಿಯನ್ನು ಎಲ್ಲೆಂದರಲ್ಲಿ ಹಾಕುತ್ತಾ ಹುಚ್ಚೆದ್ದಿತು. ಲಕುಮವ್ವ ಹೌಹಾರಿ ಪರತಾ...ಪರತಾ...ಕೂಗಿದಳು.

ಧಿಗ್ಗನೆ ಎಚ್ಚರಾದ ಲಕುಮವ್ವ ಕಣ್ಣುಬಿಟ್ಟಾಗ ಗುಡಿಸಲ ತುಂಬಾ ಕತ್ತಲು. ದೀಪ ಯಾವಾಗಲೋ ಆರಿ ಹೋಗಿತ್ತು. ಧಿಢೀರನೆ ಎದ್ದು ಕೂತವಳು ಪಕ್ಕದಲ್ಲಿದ್ದ

ಪರತನ ಮೈ ಕೈಯನ್ನೆಲ್ಲಾ ಕತ್ತಲಲ್ಲೇ ತಡವರಿಸಿದಳು. ಪರತ ಆರಾಮ ನಿದ್ದೆ ಮಾಡುತ್ತಿದ್ದವ ಲಕುಮವ್ವನ ಕೈ ಸ್ಪರ್ಶದಿಂದ ಮತ್ತಷ್ಟು ಮುದುಡಿ ಮಲಗಿದ. ಕನಸಿಗೆ ಅರ್ಥ ಹಚ್ಚುವ ಯತ್ನದಲ್ಲಿರುವಂತೆಯೇ ಗುಡಿಸಲ ಕತ್ತಲೆಯು ಕಳೆಯ ಬೇಕೆಂಬ ಆಲೋಚನೆ ಬಂದಾಗ ತಡಕಾಡಿ ಬುಡ್ಡಿಗೆ ಕೈ ಹಾಕಿದಳು. ಅದನ್ನು ಕಿವಿಯ ಬಳಿ ತಂದು ಅಲ್ಲಾಡಿಸಿದಾಗ ಎಣ್ಣೆ ತೀರಿದೆಯೆಂದು ತಿಳಿಯಿತು. ಮನೆ ಯಲ್ಲಿ ಎಣ್ಣೆ ಇರಲಿಲ್ಲ. ಹೋದವಾರ ಕರಡಾಳು ಬೋರೆಯ ಸಂತೆಯಲ್ಲಿ ತಂದು ಎಂಟಾಣೆಯ ಎಣ್ಣೆ ಆರು ದಿನ ಬಂದಿತ್ತು. ನಾಳೆಯ ಸಂತೆಯ ಖರ್ಚಿಗೆ ದಾರಿ ಮಾಡಿಕೊಂಡು ಬರುತ್ತೇನೆಂದು ಹೋದ ಗಂಡ ಇನ್ನೂ ಬರಲಿಲ್ಲ. ಮೆಲ್ಲನೆ ಎದ್ದಳು. ಗುಡಿಸಲ ಮಧ್ಯದಲ್ಲಿ ಹಾಕಿದ್ದ ಮಣ್ಣಿನ ಅಡ್ಡಗೋಡೆಯ ಆ ಕಡೆ ಇರುವ ಅಡಿಗೆ ಮನೆಗೆ ನಡೆದಳು. ಒಲೆಯ ಪಕ್ಕದ ಕಿರು ಗೂಡಿಗೆ ಕೈಯಿಟ್ಟವಳಿಗೆ ಬೆಂಕಿಪೆಟ್ಟಿಗೆ ಸಿಕ್ಕಿತು. ಅಲ್ಲಾಡಿಸಿದಾಗ ಅವಳ ಪುಣ್ಯಕ್ಕೆ ಇದ್ದದ್ದು ಒಂದೇ ಕಡ್ಡಿ. 'ಒಂದು ಬೆಂಕಡ್ಡೀಂತ ಬಿಡಂಗಿಲ್ಲ. ಬೀಡಿ ತೇಪ್ಲ ಬ್ಯಾರೆ ಕೇಡು'. ಗಂಡನ್ನ ಬಯ್ದುಕೊಂಡಳು. ಕಡ್ಡಿಗೀರಿ ಬುಡ್ಡಿಗೆ ಹಿಡಿದಳು. ಸುತಾರಾಂ ಎಣ್ಣೆಯಿಲ್ಲದ್ದ ರಿಂದ ಬುಡ್ಡಿ ಹೊತ್ತಲಿಲ್ಲ. ಗುಡಿಸಲ ಕತ್ತಲು ಹೋಗಲಿಲ್ಲ. ತಡಿಕೆ ನೂಕಿ ಹೊರ ಬಂದಳು. ಅವಳ ನಾಯಿ 'ಬೀರ' ಕಾಣಲಿಲ್ಲ. ಅದನ್ನು ಕೂಗಲು ಅವಳಿಗೂ ಮನಸ್ಸು ಬರಲಿಲ್ಲ. ಕೂಗುವ ಪ್ರಮೇಯವೂ ಬೇಕಿರಲಿಲ್ಲ. ಅದು ಹಟ್ಟಿಯಲ್ಲಿ ಇದ್ದದ್ದೇ ಆದರೆ ಹಿತ್ತಲ ಒಂದು ಮೂಲೆಯಲ್ಲಿ ಬೂದಿ ಹಾಕುವ ಜಾಗದಲ್ಲಿ ಮುದುಡಿ ಮಲಗುತ್ತಿತ್ತು. ಒಂದ್ಹೊತ್ತಿನಲ್ಲಿ ಲಕುಮವ್ವ ಒಂದು ಮಾಡಲಿಕ್ಕೆ ಬಂದಾಗ ಧಡಧಡ ಎದ್ದು ಲಕುಮವ್ವ ಕೂತಲ್ಲಿಗೆ ಬಂದು ನಿಲ್ಲುತ್ತಿತ್ತು. ಒಮ್ಮೊಮ್ಮೆ ತಾನೂ ಕಾಲೆತ್ತಿ ಬದಿಯ ಬೇಲಿಗೋ ಇಲ್ಲಾ ಮಣ್ಣುಗುಡ್ಡೆಗೋ ಆನುತ್ತಿತ್ತು. ಲಕುಮವ್ವ ಏಳುವವರೆಗೂ ಕಾದಿದ್ದು ಅವಳು ಕೂತ ಜಾಗವನ್ನೊಮ್ಮೆ ಮೂಸಿ ಇನ್ನೂ ವಿಶೇಷವಿದ್ದರೆ ಕಾರ್ಯ ಮುಂದುವರೆಸುತ್ತಿತ್ತು. ಇಲ್ಲಾಂದರೆ ಸ್ವಸ್ಥಾನ ಸೇರುತ್ತಿತ್ತು. ಮೊನ್ನೆ ಸತ್ತ ಮರಿಸ್ವಾಮಣ್ಣನ ಎಮ್ಮೆ ಕರ ಎಳೆದುಹಾಕಿದ್ದು ಜ್ಞಾಪಕಕ್ಕೆ ಬಂದು 'ಬಡ್ಡೀಮ ಎಲ್ಲೋ ಬೀಳಿಗ ಹೋಗ್ಯೆತೆ' ಅಂದುಕೊಂಡಳು. ಬೆಳ್ಳಿ ಇನ್ನೂ ಮೂಡಿರಲಿಲ್ಲ. ಆದರೆ ಮೂಡಣದಲ್ಲಿ ಕತ್ತಲು ಕಡಿಮೆಯಾಗಿ ಬೆಳ್ಳಿ ಮೂಡುವ ಸೂಚನೆ ಕೊಟ್ಟಿತ್ತು. 'ಬೀರಾ' — ನಾಯಿಯನ್ನು ಕರೆದಳು. ಅದು ಕಾಣಲಿಲ್ಲ. ಒಳಗೆ ಹೋಗಿ ಮಲಗಿದಳು. ನಿದ್ದೆ ಹತ್ತಲಿಲ್ಲ. ಗಾಳಿ ಬೀಸುತ್ತಲೇ ಇತ್ತು. ಕ್ಷಣಗಳ ಹಿಂದೆ ಕ್ಷಣಗಳು ಸರಿಯುತ್ತಿದ್ದವು. ಕಾಟಿಗೊರಗಿಕೊಂಡಿದ್ದ ವಳಿಗೆ ಕನಸಿನ ಅರ್ಥ ಹುಡುಕುವುದರಲ್ಲೇ ಮನಸ್ಸು ತಲ್ಲೀನವಾಗಿತ್ತು. ಈ ನಡುವೆ ಹೊರಗೆ ಯಾವುದೋ ನಾಲ್ಕಾರು ಹೆಜ್ಜೆಗಳ ಸಪ್ಪಳ ನಾಯಿಗಳ ಜೋರು ಬೊಗಳು ವಿಕೆ. ಇವಾವುದರ ತೀವ್ರ ಅನುಭವ ಅವಳಿಗಾಗಲೇ ಇಲ್ಲ. ಗಂಡನ ಬಗ್ಗೆ ಯೋಚಿಸಿ

ದಳು. ಈ ಕಸ್ಬು ಬ್ಯಾಡಾಂತ ಇನ್ನಿಲ್ದಂಗೆ ಹೇಳಿದ್ರೂ ಕೇಳಾಂಗಿಲ್ಲ. ಒಂದಲ್ಲಾ ಒಂದಿವ್ಸ ಇವ್ನ ಯಾರ್ಾರಾ ಜೀವ ತೆರೋನೇ... ಸಂಜಿಮಾರ ಬಾಯ್ಗೆ ಮಣ್ಣಾಕವ್ನೇ ಲಕುಮವ್ವನ ಕಣ್ಣಲ್ಲಿ ನೀರಿಳಿಯಿತು. ಸೆರಗಿನಂಚಿನಿಂದ ತೀಡಿಕೊಂಡಳು. ಕೆಳಗೆ ಚೀಲದ ಮೇಲೆ ತೊಳ ...ತೊಳ ಹರಿಯುವ ಸದ್ದು ಕೇಳಿಸಿತು. ಪರತ ನಿದ್ದೆಯು ಲ್ಲಿಯೇ ಉಚ್ಚಿಮಾಡುತ್ತಿದ್ದ ಥೂ ಇವ್ರು ಹೊಸ್ಸಾಳಾಗೋಗ. ಒಂಬತ್ತು ವರ್ಸದ ಗಪ್ಪಾದ್ರೂ ಮಲ್ಗಿದ್ ಮಗ್ಗಲ್ಲೇ ಉಚ್ಚಿಉಯ್ಯೋದು ಬಿಡ್ನಿಲ್ಲಾ ಸಿಡುಕಿದಳು. ಪರತಾ ...ಲೇ ಪರತಾ...ಮಲಗಿದ್ದ ಮಗನನ್ನು ತಿವಿದಳು. ಹೊಯ್ದು ತಾಟಿನ ಕೆಳಗೆ ಹರಿದು ತಂಪು ಮಾಡಿದ್ದರಿಂದ ಪರತನೂ ಎಚ್ಚರಾವಸ್ಥೆಯಲ್ಲಿದ್ದ. ಹೀಗಾಗಿ ಅವ್ವನ ಕೂಗಿಗೆ ಎದ್ದು ಕುಳಿತವನಿಗೆ 'ಇದಾಕ್ಲಾ ಹೆದ್ರಿ ಕಂಡ್ಸಾ ಹೋಗು ಆಚೇಗೋಗಿ ಹುಯ್ದುಬಾ' ಹೇಳಿದಳು ಲಕುಮವ್ವ. ಎದ್ದುಕೂತ ಪರತ ಕೂತಲ್ಲೇ ತಳಮುಟ್ಟಿ ನೋಡಿಕೊಂಡ. ಒದ್ದೆಯ ಅನುಭವವಾಯ್ತು. ಆದರೂ ಅದು ಉಚ್ಚೆಯೋ ಹೇಗೆ ಎಂದು ಒಮ್ಮೆ ಮೂಗಿಗೆ ಹಿಡಿದ. ಜುಂಗುಬಡಿದಾಗ ಅದು ಉಚ್ಚೆಯೇಅಂತ ತೀರ್ಮಾನಿಸಿದ. ತಲೆಗೆ ಎರಡೂ ಕೈಯಿಕ್ಕಿ ಪರಪರ ಕೆರೆದುಕೊಂಡ. ದೀಪ ಹಚ್ಚಿಪ್ಪೋ-ರಾಗ ಎಳೆದ. ಎನ್ನಲ್ಲಿ ದ್ದಾತೂ ಲಕುಮವ್ವ ಹೇಳಿದಳು. ಮತ್ತೆ ಕತ್ಲೆ ಹೋಗು ನಾಇಲ್ಲೇ ಉಯ್ತೀನಿ ಅಂದ ಪರತ. ಕಾಟಿನ ಮೇಲಿಂದ ಏಳಲಿಲ್ಲ. ಕತ್ಲಾದ್ರೇನು ದೆವ್ವಿಡ್ತಾತಾ? ಅಲ್ಲೆ ಮುಂದೆ ಕಲ್ಲು ಮೇಲೆ ಉಯ್ದುಬಾಪ್ಪೋಗು. ಲಕುಮವ್ವ ಹೇಳಿದಾಗ ಪರತಎದ್ದುನಿಂತ ಮತ್ತೊಮ್ಮೆ ಚಡ್ಡಿಯ ಮುಟ್ಟಿಕೊಂಡ. ಮುಂದುಗಡೆ ನೆಂದಿತ್ತು ಹಿಂಬಾಗಕ್ಕಿನ್ನೂ ಉಚ್ಚಿ ಇಳಿದಿರ ಲಿಲ್ಲ. ಇಳಿದಿದ್ದರೂ ಅಲ್ಲಿ ನೆಂದಿರಲಿಲ್ಲ. ಯಾಕಂದರೆ ಹಿಂಬಾಗದ ಚಡ್ಡಿ ಹರಿದು ಅಲ್ಲಿ ನೆನೆಯುಲಿಕ್ಕೆ ಬಟ್ಟೆಯೇ ಇರಲಿಲ್ಲ. ತಪತಪ ಮುಂದೆ ಹೆಜ್ಜೆಯಿಟ್ಟ ಪ ನಿದ್ದೆಗಣ್ಣಲ್ಲೇ ತಟಿಕೆಯು ಬಿಡಿಸಿ ಆಚೆಗೆ ಕಣ್ಣುಬಿಟ್ಟ. ಹೊಸಾದೊಂದು ಲೋಕಕ್ಕೆ ಬಂದಂತಾಯಿತು ಅವನಿಗೆ. ಆ ಇಜ್ಜಲಿನಂಥ ರಾತ್ರಿ. ಮಿಣುಕುವ ಚುಕ್ಕಿ. ಬೀಸುವ ಗಾಳಿ ಬೊಗಳುವ ನಾಯಿಗಳು. ಗುಡಿಸಲ ಮುಂದೆ ಹಾಸುಗಲ್ಲ ಮೇಲೆನಿಂತು ಚಡ್ಡಿ ಓರೆ ಮಾಡಿ ಇನ್ನೇನು ಕೂರ ಬೇಕಿದ್ದವನಿಗೆ ಗುಡಿಸಲ ಆ ಕಡೆಗೆ ಏನೋ ಕಪ್ಪಗೆ ಉದ್ದವಾದ್ದು ಬಿದ್ದಿರುವಂತೆ ಕಂಡಿತು. ಎರಡೂ ಕೈಯಿಂದ ಕಣ್ಣುಗಳ ಉಜ್ಜಿ ಮತ್ತೆನೋಡಿದ. ಅದೇ ನೋಟ ಆಚೆ ಗುಡಿಸಲ ಸಂಕ್ರಿ ಹೇಳುತ್ತಿದ್ದ ದೆವ್ವಗಳಕತೆ ಜ್ಞಾಪಕಕ್ಕೆ ಬಂದ ಒಂದೇ ನೆಗೆತಕ್ಕೆ ಗುಡಿ ಸಲ ಒಳಗೆ ನೆಗೆದ ಉಚ್ಚೆಯನ್ನು ಉಯ್ಯದೆ. ನಿಂಗೇನಾತೋ ಪರತಾ ಹಿಂಗ್ಯಾಕೆ ನೆಗದ್ಲಾ? ಲಕುಮವ್ವ ಕೇಳಿದಳು ಹಟ್ಟಿಮುಂದ್ಲ್ಯಾಗೆ ಎಂಥದೋ ಕಪ್ಗೆ ಐತೆ-ಪರತ ಕಣ್ಣ ರಳಿಸಿ ಹೇಳಿದ. ಕಗ್ಗೆ ಮುಕಾಡೋಕತ್ಲೆ ಕಡ್ಲಾ—ಲಕುಮವ್ವ ಸಮಜಾಯಿಷಿ ನುಡಿದಳು ಕತ್ಲೆ ಒಳ್ಗ್ಯಾಂದು ಕತ್ಲಿನಾಂಗೆ ಕಾಣ್ಸತ್ತೆ ಪರತು ಭಯದಿಂದ ನುಡಿದ. ಲಕುಮವ್ವನಿಗೆ ಬಗೆಹರಿಯಲಿಲ್ಲ. ನಿನ್ ಮನ್ ಮನ್‌ಮಾರತ್ತೋಗ ಒಂದ ಮಾತಕೆ ಯಾಪಾಟೇ ರಂಪ ಮಾಡೀಯೆ ಅಂತ ಗುನುಗುತಲೇ ಲಕುಮವ್ವ ಎದ್ದು ಹೊರ ಬಂದಳು.

ಪರತನೂ ಹಿಂಬಾಲಿಸಿದ. ಏಳ್ತೈತ್ಲಾ? ಅವ್ವನ ಪ್ರಶ್ನೆಗೆ ಪರತ ಕೈತೋರಿದ. ಕಪ್ಪಗೆ ಏನೋ ಬಿದ್ದಿರುವುದು ನಿಜ ಅನಿಸಿತವಳಿಗೆ ಕಣ್ಣು ಕಿರಿದುಹಿರಿದುಮಾಡಿ ರೆಪ್ಪೆಹೊಯ್ದ್ರೆ ರೆಪ್ಪೆ ಕಾಣದ ಕತ್ತಲಲ್ಲಿ ಆ ಕರಿಯ ವಸ್ತುವನ್ನು ದಿಟ್ಟಿಸಿದಳು. ಪರತನ ಮಾತು ನಿಜ ವಾಗಿತ್ತು. ನಾಯಿಗಳಂತೂ ಒಂದೇ ಸಮನೆ ಬೊಗಳುತ್ತಿದ್ದವು. ಅವುಗಳ ಬೊಗಳುವಿಕೆ ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ ಮಧ್ಯರಾತ್ರಿಯಲ್ಲಿ ಪ್ರಪಂಚ ಹೇಗಿರುತ್ತಿದೆಂದು ಗೊತ್ತೇ ಇರದ ಕಡೇ ಗುಡಿಸಲ ಸಣ್ಣಮೂರ ಒಮ್ಮೆ ಎದ್ದು ಬಂದು ಗುಡಿಸಲಮುಂದೆ ನಿಂತು ಅತ್ತಿತ್ತ ಕಣ್ಣಾಡಿಸಿ ಎದ್ದದ್ದಕ್ಕೆ ಕೇಡಾಗದಿರಲೆಂದು ಒಂದು ಮಾಡಿ ಹೋಗಿ ಮಲಗಿದ್ದ. ಲಕುಮವ್ವ ಕ್ಷಣಹಾಗೆಯೇ ನಿಂತಳು. ಹತ್ತಿರಹೋಗಲು ಮನಸ್ಸು ಹಿಂದೇಟು ಹಾಕಿತು. ಲಕುಮವ್ವ ಯೋಚನೆಯ ಗುಂಗಲ್ಲಿ ನಿಂತಿರುವಂತೆಯೇ ಪರತ ಕಾಟಿನ ಮೇಲೆ ಸಲೀಸಾಗಿ ಹೋಗುತ್ತಿದ್ದಾಗ ತಡೆ ಹಿಡಿದಿದ್ದ ಜಲಭಾಧೆಯನ್ನು ತೀರಿಸಿಕೊಂಡ ಬೆಳಕಲ್ಲಿ ನೋಡೋಣಾಂದರೆ ಗೀರಲು ಕಡ್ಡಿಯಿಲ್ಲ. ಛಳಿಗೆ ಎರಡೂ ಕೈಗಳ ಮುದುಡಿ ಗದ್ದದ ಕೆಳಗೆ ಇಟಗೊಂಡು ನಿಂತಿದ್ದ ಪರತನಿಗೆ 'ಓಡೋಗ್ ಮತ್ತಿ ಹೋಗಿ ಮಾದೇವಣ್ಣಂತಾವ ಒಂದು ಬೆಂಕಡ್ಡಿ ಇಸ್ಕಂಬಾ' ಲಕುಮವ್ವ ಹೇಳಿದಳು. ಪರತನಿಗೆ ಯಾಕೋ ಅಪ್ಪನ ನೆನಪಾಯಿತು. ಅಪ್ಪ ಇನ್ನೂ ಬಂದಿಲ್ಲೇನವ್ವಾ- ಅವ್ವನ ಕೇಳಿದ. 'ಹೆಂಡ್ರು ಮಕ್ಕ ಗ್ಯಾನಿದ್ರೆ ಬತ್ತಿದ್ದ' ಅಂದವಳು ದವಡೆಯ ಸಂದಿಯಲ್ಲಿ ಒತ್ತರಿಸಿಕೊಂಡಿದ್ದ ತೊಂಬಲವನ್ನು ಪಿಚಕ್ಕನೆ ಉಗಿದಳು. ಎದುರಿಗೆ ಸ್ವಲ್ಪ ದೂರದಲ್ಲಿ ಕಾಣುತ್ತಿದ್ದ ಮಾದೇವಣ್ಣನ ಮನೆಗೆ ಓಡಿದ ಪರತ. ಇಡೀ ಹಟ್ಟಿಯಲ್ಲಿ ಮನೆ ಅಂತ ಇರುವುದು ಅದೊಂದೇ. ಮಣ್ಣಿನ ಗೋಡೆಯ ನಾಡಹೆಂಚು ಹೊದಿಸಿರುವ ಆ ಮನೆಯ ಮಾದೇವಣ್ಣ ಪಂಚಾಯತಿಯ ಮೆಂಬರು. ಮೀಸಲು ಕ್ಷೇತ್ರದಿಂದ ಆಯ್ಕೆಯಾದವ. ಈಗ್ಗೆ ಎರಡು ಬಾರಿಯಿಂದಲೂ ವೈಸ್‌ಛೇರ್‌ಮನ್‌ರಿಗೆ ವಿಫಲ ಪ್ರಯತ್ನ ನಡೆಸಿದ್ದವ. ಹೋದ ಸಲ ಚುನಾವಣೆಯಲ್ಲಿ ಗೌಡರ ಗುಂಪು ಒಂದು ಕಡೆ. ಸಿದ್ರಾಮಣ್ಣನ ಗುಂಪು ಇನ್ನೊಂದು ಕಡೆ ಆಗಿ ಎರಡೂ ಕಡೆ ಸಮ ಸಮ ಸೀಟು ಬಂದಾಗ ಗೌಡ್ರು ಉಪಾಯವಾಗಿ ಮಾದೇವಣ್ಣನ ಕರೆಸಿ ಬೆಂಗಳೂರಿಗೆ ಕರ್ಕೊಂಡೋಗಿ ಮಜಾ ಮಾಡ್ಸಿ ವೈಸ್‌ಛೇರ್‌ಮನ್ ಮಾಡ್ತೀನಿ ಅಂತ ಆಶ್ವಾಸನೆ ಕೊಟ್ಟು ಕೈಗೆ ಎರಡು ಸಾವಿರ ಇಟ್ಟು ತಮ್ಮ ಕೆಲಸ ಗಿಟ್ಟಿಸಿಕೊಂಡರು. ಊರಿಗೆ ಬಂದ ಗೌಡ್ರಿಗೆ ವೈಸ್‌ಛೇರ್‌ಮನ್‌ಗಿರಿ ಮಾದಿಗ್ರೀಸ್ಗೆ ಕೊಟ್ರೆ ಗತಿ ಏನು ಅನ್ನೊ ಚಿಂತೆ ಶುರುವಾಯಿತು. ಮಾನ ಮರ್ಯಾದೆ ಅಂತ ಕೂತರೆ ಆಗೊಲ್ಲಾ ಅಂದ್ಕೊಂಡು ಒಂದು ರಾತ್ರಿ ಪತ್ತು ಹೊಡೆದ ಮೇಲೆ ಸಿದ್ರಾಮಣ್ಣನ ಮನೆ ತುಳಿದು ಪಟಿ, ಜಿದ್ದು. ಎರಡು ಸಾವಿರ ಎಲ್ಲಾದನ್ನೂ ಗಾಳಿಗೆ ತೂರಿಬಿಟ್ರು. ಇಬ್ರೂ ಕೂತು ಮಾತುಕತೆ ಆಡಿ ಏದೇವ್ಯಾಕ್ತಿ ಲಿಂಗ ಕಟ್ಕೊಂಡಿರೋ ನಮ್ಮ ಸರಿಸಮಕ್ಕೇ ಅವ್ನ ಪಂಚಾಯ್ತಿ ಹಾಲ್ನಲ್ಲಿ ಕೂರದು ಬೇಡಾಂತ ತೀರ್ಮಾನ ಮಾಡಿಕೊಂಡು ಒಂದು

ಒಪ್ಪಂದಕ್ಕೆ ಬಂದರು, ಸದ್ಯಕ್ಕೆ ವೈಸ್‌ಛೇರ್‌ಮನ್‌ಗಿರಿ ಸಿದ್ರಾಮಣ್ಣಂಗೆ ಕೊಡೋದು. ಇನ್ನೆಲ್ಡು ವರ್ಷ ಆದ್ಮೇಲೆ ಗೌಡ್ರು ಛೇರ್‌ಮೆನ್ಸ್ಕಿ ಬಿಟ್ಟುಕೊಟ್ಟು ಸಿದ್ರಾಮಣ್ಣ ಛೇರ್‌ಮೇನಾಗೋದು, ಆಗ ಖಾಲಿಯಾಗೋ ವೈಸ್‌ಛೇರ್‌ಮನ್‌ಗಿರಿ ಗೌಡ್ರ ಬಲಗೈ ಭಂಟ ಮರಿಸ್ವಾಮಣ್ಣನ ಪಾಲಿಗೆ ಹೋಗೋದು. ಅಂತೂ ರಾಜಿಯಾಯಿತು. ಸಿದ್ರಾಮಣ್ಣನ ಹೆಂಡ್ರು ರೇವಕ್ಕ ತಂದಿಟ್ಟ ಬಿಸಿ ಕಾಫಿ ಕುಡಿದು ಎಲೆ ಅಡಿಕೆ ಜಗಿದು ಎರಡು ಸಿಗರೇಟು ಬೂದಿ ಮಾಡಿದ. ಗೌಡ್ರು ಒಂದೇ ಕಲ್ಲಲ್ಲಿ ಎರಡು ಹಕ್ಕಿ ಹೊಡೆದದ್ದಕ್ಕೆ ಖುಷಿಪಟ್ಟುಕೊಂಡರು.

ಲಕುಮವ್ವನ ಹೈದ ಮಾದೇವಣ್ಣನ ಮನೆ ಕದ ತಬ್ಬುವಾಗ್ಗೆ ಮಾದೇವಣ್ಣನಿಗೆ ಸಖತ್ತು ನಿದ್ದೆ. ಎಲ್ಲೋ ದೂರದಿಂದ ಕೂಗುತ್ತಿರುವಂತೆನಿಸಿ ಕಣ್ಣು ಬಿಟ್ಟವ ಕ್ಷಣ ಹಾಗೇ ಕಿವಿ ಅಗಲಿಸಿದ. ಮಾದೇವಣ್ಣೋ...ಮಾದೇವಣ್ಣಾ...ಹೈದ ಕೂಗುತ್ತಲೇ ಇದ್ದ. 'ಯಾರ್ಲಾ ಅದು' ಒಳಗಿಂದ ಕೇಳಿದ್ದಕ್ಕೆ 'ನಾನು ಪರತ' ಉತ್ತರಿಸಿದ. ಏನ್ಲಾ ಪರತ ಈಟೊತ್ನಾಗೆ? ಮಾದೇವಣ್ಣ ಎದ್ದು ಅಗುಳಿ ತೆಗೆದ. 'ಒಂದು ಬೆಂಕಡ್ಡಿ ಬೇಕಂತೆ ಅವ್ವಿಗೆ' ಅಂದ ಪರತ. 'ಲೇ ಬುಡ್ಡಿ ಹಚ್ಚೆಲೆ' ಗಂಡನ ಕೂಗಿಗೆ ನಾಗಿ ಎದ್ದವಳು ಅಲ್ಲೇ ತಲೆದಿಂಬಿನಲ್ಲಿದ್ದ ಬುಡ್ಡಿಗೆ ಕಡ್ಡಿ ಗೀರಿ ಇಟ್ಟಳು. ದೀಪದ ಬೆಳಕಿಗೆ ಪರತನ ಕಣ್ಣುಗಳು ಹೊಂದಿಕೊಳ್ಳಲು ಸ್ವಲ್ಪ ತಕರಾರು ಮಾಡಿದವು. ಕಣ್ಣು ಪಿಂಗಳಿಸಿ ಹೊಂದಿಸಿಕೊಳ್ಳುವಷ್ಟರಲ್ಲಿಯೇ ಕೈಗೆ ಎರಡು ಬೆಂಕಿಕಡ್ಡಿ ಬಿದ್ದಿದ್ದವು. ಪರತ ಮನೆಯಿಂದ ಕಾಲ್ತೆಗೆದ. ಹಿಂದೆಯೇ ಬಾಗಿಲು ಬಡಿದುಕೊಂಡಿತು. ಕ್ಷಣ ಹಿಂದಷ್ಟೇ ಕಂಡ ಬೆಳಕು ಗುಡುಗುಪ್ಪನೆ ಬಾಗಿಲ ಒಳಗೆ ಸೇರಿ ಮತ್ತೆ ಕತ್ತಲಲ್ಲಿ ಬೆತ್ತಲಾದ ಪರತನಿಗೆ ಮೂಲೆಯ ಕಪ್ಪನೆಯ ಆಕೃತಿ ಘಟ್ಟನೆ ಮೂಡಿ ಮಾದೇವಣ್ಣನ ಮನೆಗೂ ತನ್ನ ಗುಡಿಸಲಿಗೂ ಇರುವ ನಾಲ್ಕುಮಾರು ದಾರಿ ಹರದಾರಿ ಅನಿಸಿ ಗಾಬರಿಯಾಯಿತು. ಕಡ್ಡಿಗಳನ್ನು ಬಿಗಿಯಾಗಿ ಕೈಲಿ ಹಿಡಿದವ ಒಂದೇ ಉಸಿರಿಗೆ ಓಟ ಕಿತ್ತ. ಅವನ ಓಟ ನಿಂತಿದ್ದು ಅವ್ವನ ಮುಖ ಕಂಡಾಗಲೇ. ಲಕುಮವ್ವನ ಕೈಲಿ ಕಡ್ಡಿ ಇಡುವಷ್ಟರಲ್ಲಿ ಆ ಬಿರುಸಿನ ಓಟಕ್ಕೆ ಸಿಕ್ಕು ಮಾದೇವಣ್ಣ ಕೊಟ್ಟಿದ್ದ ಎರಡು ಕಡ್ಡಿಗಳಲ್ಲಿ ಉಳಿದಿದ್ದು ಒಂದೇ. ಕಡ್ಡಿ ಕೈಗೆ ಬಿದ್ದೊಡನೆ ಲಕುಮವ್ವ ಚುರುಕಾದಳು. ಬಿರಬಿರನೆ ಗುಡಿಸಲ ಒಳಹೊಕ್ಕು ಕತ್ತಲಲ್ಲೇ ತಡಕಾಡಿ ಬೆಂಕಿಪೆಟ್ಟಿ ಹುಡುಕಿ ಹುಡುಕಿದಳು. ಎಣ್ಣೆ ತೀರಿದ್ದ ಬುಡ್ಡಿಯನ್ನು ತಡಕಿ ಅದರ ಬತ್ತಿಯನ್ನು ಎತ್ತಿ ಕಡ್ಡಿ ಗೀರಿದಳು. ಕೆಂಪು ಮಿಶ್ರಿತ ಲಾಡಿ ಬೆಳಕು ಗುಡಿಸಲ ಕತ್ತಲೆಯೊಂದಿಗೆ ಸ್ಪರ್ಧೆಗಿಳಿಯಿತು. ಬುಡ್ಡಿ ಹಿಡಿದು ಹೊರಬಂದಳು. ಗಾಳಿ ಬೀಸುತ್ತಲೇಯಿದ್ದುದರಿಂದ ಒಂದು ಕೈಯನ್ನು ಬುಡ್ಡಿಗೆ ಅಡ್ಡ ಹಿಡಿದು ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟಳು. ಗುಡಿಸಲ ಮೂಲೆಗೆ ಬಂದು ಪರತ ತೋರಿದೆಡೆ ಬೆಳಕು ಹಿಡಿದು ಕಣ್ಣು ಹಾಯಿಸಿದಳು. ದ್ಯಾವ ಮಲಗಿದ್ದ! ಬಿದ್ದೊಡ್ಡ ಅವನು ಕಂತ

ಪೂರ್ತಿ ಕುಡಿದು ಬಂದು ತಡಿಕೆಯನ್ನು ತಟ್ಟಲೂ ಆಗದೆ ಹೊರಗೆ ಬಿದ್ದದ್ದುಂಟು. ಲಕುಮವ್ವ ಹಿಂದೆ ನಿಂತಿದ್ದ ಪರತನ ಕೈಗೆ ಬುಡ್ಡಿ ಕೊಟ್ಟು ಗಂಡನ ಎರಡೂತೋಳಿಗೆ ಕೈಹಾಕಿ ಎತ್ತಹೋದವಳಿಗೆ ತಣ್ಣನೆಯ ಅನುಭವವಾಯಿತು. ಅನುಮಾನ. ಮೈ ಅಲುಗಾಡಿಸಿದಳು. ದ್ಯಾವ ಮಾತಾಡಲಿಲ್ಲ. ಮತ್ತೊಮ್ಮೆ ಅಲುಗಾಡಿಸಿದಳು. ದ್ಯಾವ ನಿಶ್ಚಲನಾಗಿದ್ದ. ಕಣ್ಣುಗುಡ್ಡೆಯ ಮೀಟಿದಳು. ಕರಿಗುಡ್ಡೆ ಮೇಲೇರಿದ್ದುವು. ಮೂಗು, ಮುಖ, ಮೈ ಕೈ ಎಲ್ಲಾ ತಡವರಿಸಿದಳು. ತಾನು ಕನಸಿನ ಅರ್ಥ ಹಚ್ಚುತ್ತಿರುವಾಗ ಆದ ನಾಲ್ಕಾರು ಹೆಜ್ಜೆಯ ಸಪ್ಪಳದ ಧ್ವನಿ ಅವಳ ಮೆದುಳಲ್ಲಿ ಪುನರಾವರ್ತನೆಯಾಗಿ ಆ ಹೆಜ್ಜೆಗಳ ಭಾರ ಎದೆಯ ಮೇಲೆ ನಡೆಯುತ್ತಿರುವಂತಾಗಿ...ಕೆಟ್ಟೆಲ್ಲಪ್ಪೋ...ಅಂತ ಒಮ್ಮೆಲೇ ಲಭೋ ಲಭೋ ಹೊಯ್ದುಕೊಂಡಾಗ ಒಮ್ಮೆಗೇ ದಡ್ಡಿಯೇ ಎತ್ತೆಸೆದಂತಾಯಿತು. ಮಾತಾಡಿಸಿದರೂ ಮೌನವಾಗಿರುವ ಅಪ್ಪ. ಒಮ್ಮೆಲೇ ಕಿಠಾರನೇ ಕಿರುಚಿಕೊಂಡ ಅವ್ವ ಇಬ್ಬರೂ ಪರತನ ಕಣ್ಣಿಗೆ ವಿಚಿತ್ರವಾಗಿ ಕಂಡರು. ನಾನಂವ್ಕಂಡಂಗೇ ಮಾಡ್ಯೋದಲ್ಲೋ......ನಡ್‌ನೀರ್ನಾಗೆ ಕೈಬಿಟ್ಟಲ್ಲೋ......ಲಕುಮವ್ವ ಹಾಡಿ ಅತ್ತು ಪರತನ ಮುಖ, ಎದೆ. ಮೈಕೈ ನೇವರಿಸಿ ತಬ್ಬಿಕೊಂಡಾಗ ಅವನಿಗೆ ಇನ್ನೂ ವಿಚಿತ್ರವೆನಿಸಿತು. ಲಕುಮವ್ವನ ರೋದನದ ಪ್ರತಿಧ್ವನಿ ಸುತ್ತೆಲ್ಲಾ ಸೆಲೆಯೊಡೆಯಿತು. ಬದಿಯಲ್ಲಿಯ ಗಿಡಮರಗಳ ಹಕ್ಕಿಗಳು ಚಿಲಿಪಿಲಿಗುಟ್ಟಿದವು. ನಾಯಿಗಳ ಬೊಗಳುವಿಕೆ ಮತ್ತೂ ಹೆಚ್ಚಿತು. ಮಾದೇವಣ್ಣನ ಮನೆಬಾಗಿಲು ತೆಗೆದುಕೊಂಡಿತು. ಮಾದೇವಣ್ಣ ಹೊರಬಂದ. ಕೆಲವು ಗುಡಿಸಲುಗಳ ತಡಿಕೆಗಳೂ ತೆರೆದುಕೊಂಡವು. ಕುನ್ನೀರ. ಕರಿಯ, ಮಾರ, ಸಣ್ಣಜೀರ, ಬಸ್ಲಿಂಗ ಎಲ್ಲಾ ಹೊರಬಂದರು. ಹಿಂದೆಯೇ ಕೆಲವು ಹೆಂಗಸರೂ ಬಂದರು. ಅಪ್ಪ ಅವ್ವಂದಿರ ಹಿಂದೆ ನಾಲ್ಕಾರು ಹೈಕಳೂ ಬಂದವು, ಎಲ್ಲರ ಕಣ್ಣಲ್ಲೂ ಗಾಬರಿ ಕುಣಿಯುತ್ತಿತ್ತು.

ಸತ್ತ ದ್ಯಾವನ ಸುತ್ತ ವರ್ತುಲವೊಂದು ಸೃಷ್ಟಿಯಾಯಿತು. ಎಲ್ಲರ ಕಾತುರದ ಕಣ್ಣುಗಳಿಗೆ ವಸ್ತುವಾಗಿ ದ್ಯಾವ ಮಲಗಿದ್ದ. ಮುಖ ಹಾಗೂ ಮೈ ಕೈಗಳ ಮೇಲೆ ಅಲ್ಲಲ್ಲಿ ತರಚಿದ್ದ ಗಾಯಗಳಿಂದ ರಕ್ತ ಒಸರಿ ಹೆಪ್ಪುಗಟ್ಟಿತ್ತು. ಮೊದಲೇ ಹರಿದಿದ್ದ ಅಂಗಿ ಮತ್ತಷ್ಟು ಹರಿದಿತ್ತು. ಕಸಬಿಗೆ ಹೋಗುವಾಗ್ಗೆ ಅವನು ಮಾಮೂಲಿನಂತೆ ಹೊದ್ದುಕೊಂಡು ಹೋಗುತ್ತಿದ್ದ ಕರಿಯ ಕಂಬಳಿಯಲ್ಲಿ ಸುತ್ತಿ ಅವನನ್ನು ತಂದು ಒಗೆದಿದ್ದರು. ಲಕುಮವ್ವನ ಅಕ್ಕಪಕ್ಕ ಕೂತ ಸಣರಾಮಿ, ನಂಜಿ ಕೆಂಪವ್ವ ಹನುಮಕ್ಕ ಇವಳಿಗೆ ಪಿಳಿಪಿಳಿ ಕಣ್ಣುಬಿಡುವುದಷ್ಟೇ ಕೆಲಸವಾಯಿತು. ಅವ್ರು ಕೈಗೆ ಕರೀ ನಾಗ್ರು ಕಡ್ದ್ಯಾ. ಅವ್ರು ಹೆಂಡ್ರು ಮುಂಡ್ಯಾಗಾ... ಲಕುಮವ್ವನ ಬಾಯಿಂದ ಒಮ್ಮೊಮ್ಮೆ ಬಂದರೆ ಮಿಕ್ಕಂತ ಹಾಡಿ ಅಳುವುದೇ ಕೆಲಸವಾಯಿತು. ಪರತ ಪರದೇಶಿಯಂತೆ ಗುಂಪಿನ ಒಂದು ಮೂಲೆಯಲ್ಲಿ ನಿಂತು ಒಮ್ಮೆ ಅಪ್ಪ ಮತ್ತೊಮ್ಮೆ ಅವ್ವನನು

ನೋಡುತ್ತಾ ಏನೂ ಗೊತ್ತಾಗದೆ ಸುತ್ತಲಿನ ಜನಗಳ ಮೇಲೆಲ್ಲಾ ಕಣ್ಣಾಡಿಸುತ್ತಿದ್ದನು. ಕೋಲೂರುತ್ತ ಕೆಮ್ಮಿಕೊಂಡು ಕರಿಯಜ್ಜ ಬಂದ. ಹಟ್ಟಿಗೆಲ್ಲಾ ಅವನೇ ಹಿರಿಯ. ಬಿದರೆಗುಡಿಯ ಚಿಕ್ಕಮ್ಮನ ಮೂಲ ಪೂಜಾರಿ ಅವನೇ ಆಗಿದ್ದ. ಈಗಲೂ ಒಮ್ಮೊಮ್ಮೆ ಅವನಿಗೆ ಮೈಮೇಲೆ ಇದ್ದಕ್ಕಿದ್ದಂತೇ ಚಿಕ್ಕಮ್ಮ ಬಂದು ಬಿಡುತ್ತಾಳೆ. ಕೋಳಿ ಮಾಂಸ ತಿಂದು ಹೋಗಿಬಿಡುತ್ತಾಳೆ. ಗುಂಪಿನ ಮುಂದೆ ಬಂದ ಕರಿಯಜ್ಜ ಒಮ್ಮೆ ಎಲ್ಲರ ಮುಖಗಳ ಮೇಲೆ ದೃಷ್ಟಿಹಾಯಿಸಿದ. ದ್ಯಾವನ ಬಳಿ ಬಂದು ಕಂಬಳಿ ಸರಿಸಿ ತರಚಿದ್ದ ಗಾಯಗಳ ಮೇಲೆಲ್ಲಾ ಕಣ್ಣಾಯಿಸಿದ. ತಲೆಯ ಎರಡೂ ಕಡೆ ತಿರುಗಿಸಿ ನೋಡಿದ, ಗುಂಪು ಉಸಿರು ಬಿಗಿಹಿಡಿದು ನೋಡುತ್ತಿತ್ತು. ಕರಿಯಜ್ಜ ಕಂಬಳಿಯ ಒಳಗೆ ಕೈ ತೂರಿಸಿ ದ್ಯಾವನ ಸೊಂಟದ ಕೆಳಗೆ ಗಲುಬಿ ಕೈ ತೆಗೆದವ 'ಮರ್ಮಸ್ಥಾನ ಹಿಸ್ಕಿ ಜೀವ ತಗ್ದವ್ರು.' ಅಲ್ಲೇ ಕುಕ್ಕರಗಾಲಲ್ಲಿ ಕೂಡಿದ್ದ ಮಾದೇವಣ್ಣನ ಮುಖ ನೋಡಿ ಹೇಳಿದ. ಸಿಕ್ಕರೆ ಜೇಬಿಂದ ಬೀಡಿ ಕಟ್ಟು ತೆಗೆದು ಕರಿಯಜ್ಜನ ಕೈಗೊಂದು ಹಾಕಿ ತಾನೊಂದು ಬಾಯಿಗಿಟ್ಟು ಕಡ್ಡಿಗೀರಿದ ಮಾದೇವಣ್ಣ ಒಂದು ಧಂ ಎಳೆದು ಬಿಟ್ಟು. 'ಇದ್ಯಾರೋ ನಮ್ಮೂರ್ನೋರ ಕೆಲ್ಸವೇ ಇರ್ಬೇಕು' ಅಂದವ ಎಲ್ಲರ ಮುಖಗಳ ಮೇಲೂ ಕಣ್ಣಾಯಿಸಿ ಸರ್ವೆ ಮಾಡಿದ. ಎಲ್ಲರೂ ಮಾದೇವಣ್ಣನ ಮುಖವನ್ನೊಮ್ಮೆ ನೋಡಿ ಕತ್ತು ಕೆಳಹಾಕಿದರು. ಪೋಲೀರ ಅಂದ್ರ ಹಳೇ ಬಟ್ಟೆ ಬಿಸಾಕಿದಷ್ಟು ಸುಲಭ ಆಗೋಯ್ತು-ಮಾದೇವಣ್ಣನ ಈ ಮಾತಿಗೆ ಕೆಲವರು ಕತ್ತೆತ್ತಿ ನೋವಿನ ನಿಟ್ಟುಸಿರು ಬಿಟ್ಟರು. ಮಿಕ್ಕವರಿಗೆ ಅಂಥ ಆಸಕ್ತಿಯೇನೂ ಕಾಣಲಿಲ್ಲ.

ಎತ್ತಿ ಅತ್ಲಾಕೆ ಮಲ್ಗಿಸಿ ಆದೇನ್ ಮುಂದಿನ ಕೆಲ್ಸನೋಡ್ರಿ—ಕರಿಯಜ್ಜ ಹೇಳಿದ. ಒಂದಿಬ್ಬರು ದ್ಯಾವನ ತಲೆ ಹಾಗೂ ಕಾಲು ತಡೆ ಹಿಡಿದು ನೆಲಕೆಯ ಕೆಳಗೆ ಹಾಸಿದ್ದ ಅವನ ಕರಿಯ ಕಂಬಳಿಯ ಮೇಲೆ ಮಲಗಿಸಿದರು. ನಾಗಿ ದೀಪ ತಂದು ದ್ಯಾವನ ತಲೆಯ ಬಳಿ ಇಟ್ಟಳು. ಗಾಳಿಗೆ ದೀಪ ಆರೀತೆಂದು ದೊಡ್ಡ ಒಡೆದ ಮಡಕೆಯೊಂದನ್ನು ಬೋರಲು ಹಾಕಿದ. ಎದುರಿಗೆ ನಾಲ್ಕು ಮಾರುಗಳ ದೂರದಲ್ಲಿ ನಾಲ್ಕು ಗರಿಗಳ ಹಚ್ಚಿ ಸೂಡೆ ಮಾಡಿದರು. ಆ ಬೆಂಕಿ ಆರದಂತೆ ಅಲ್ಲಲ್ಲಿ ಬಿದ್ದ ತಂಗು ಪುಳ್ಳೆ ಆರಿಸಿ ತಂದು ಹಾಕುತ್ತಿದ್ದರು. ಅದರ ಸುತ್ತ ನೆರೆದು ಛಳಿಕಾಯಿಸಿಕೊಳ್ಳುತ್ತಾ ಒಬ್ಬರ ಮುಖ ಒಬ್ಬರು ಪಿಳಿ ಪಿಳಿ ನೋಡುತ್ತಾ ಹೊತ್ತು ಕಳೆಯುತ್ತಿರುವಂತೇ ಇವರಿಗೆ ಅರಿವಿಲ್ಲದಂತೆ ಮೂಡಣದ ಭಾನು ಕೆಂಪಡರುತ್ತಿತ್ತು.

ಗರ್ಭ ಗುಡಿಯಲ್ಲಿ

ಎಂ. ಎಸ್. ಮೂರ್ತಿ

ಮುಂಬೆಳಗಿನ ಮುಸುಕಿನಲ್ಲಿ
ಗುಡಿ ಗಂಟೆ ಧ್ವನಿಗಳಲ್ಲಿ
ಕೆಂಪು ಹಸಿರು ಮಡಿಯುಟ್ಟು
ಭಕ್ತಾ ಗ್ರೇಸರ ಕ್ಯೂ ಅಲ್ಲಿ
ನಾಮುಂದು ತಾಮುಂದು ಅಭಿಷೇಕ ಅರ್ಚನೆಗೆ
ಮಂಗಳಾರತಿಗೆ ಕೈಚಾಚಿ ಮೈಚಾಚಿ
ಕಣ್ಣಿನಿಂದಲೇ ಪರಿಚಯಿಸಿ
ಅರ್ಚಕರ ಖುಷಿಪಡಿಸಿ
ಬೆಚ್ಚನೆಯ ಸ್ಥಳಕ್ಕೆ
ಕಂಬಕ್ಕೆ ಕುಂಕುಮ ಹಚ್ಚಿ ಹೋದರು.

ಕಾರ್ಗತ್ತಲಲ್ಲಿ ಕದ ಕಿರ್ ಎನಿಸಿ
ಮೆತ್ತನೆಯ ಹೆಜ್ಜೆ ತಗ್ಗಿಗಿಟ್ಟು
ಕಂಬಗಳ ಮೈದಡವಿ ಎದ್ದುಬಿದ್ದು
ಕಚಗುಳಿ ಇಟ್ಟು ಎಬ್ಬಿಸಿ
ರಗ್ಗಿನಲ್ಲಿಯೆ ಪಿಸು ಗುಟ್ಟಿ
ಕತ್ತಲಲ್ಲಿಯೆ ಬೆತ್ತಲಾಗಿ
ಮನ ಮೈ ಚಾಚಿದರು.
ಗಂಟೆ ಜಾಗಟೆಗಳ ಸದ್ದಿಗೆ ಬೆವರಿ ಬೇರ್ಪಟ್ಟು
ಮೈಲಿಗೆಯ ಮಡಿಯುಟ್ಟು
ಕೆಮ್ಮುತ್ತ ಖ್ಯಾಕರಿಸಿ ಹಳ್ಳಸೇರಿದರು.

ಗುಡಿಯ ಗೌರಮ್ಮ
ಬಯಕೆಯ ಬಸಿರಾಗಿ
ಗೌಡ್ರು ಮೊಮ್ಮಗನಿಗೆ ವಾಯಿಕ್ ಎಂದಳು.
ಗಟ್ಟಿನಾ ಗುಡಿಯು ಮುಚ್ಚಿದಾ
ವ್ಯವಹಾರಕ್ಕೆ ಹೆಸರು—ಅಲ್ಲಿ
ಬಂಜೆಯಾಗುವಳು ಬಸರಿ

ಗಾಂಧಿ: ಒಬ್ಬ ಮನುಷ್ಯ

ಎಸ್. ಎನ್. ಗುಬ್ಬಿ

ನಾವು ಕನ್ನಡ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾಗ ನಮ್ಮ ಮಾಸ್ತರು ತಾವೇ ರಚಿಸಿದ "ಗಾಂಧೀ ನಮ್ಮ ತಾತ, ಗಾಂಧೀ ಸ್ವರಾಜ್ಯದಾತಾ", "ನಮ್ಮ ಮಹಾತ್ಮ ಓ-ಓ-ಓ ನಮ್ಮ ಮಹಾತ್ಮಾ" ಎಂಬ ಗೀತೆಗೆ ಸಿನೆಮಾಧಾಟಿ ಹಚ್ಚಿಹಾಡಿಸುತ್ತಿದ್ದರು, ನಾನಂತೂ ಹೋದಲ್ಲೆಲ್ಲ ಅವನ್ನು ಹಾಡಿ ಹಾಡಿ ಚಪ್ಪಾಳೆ ಗಿಟ್ಟಿಸುತ್ತಿದ್ದೆ. ಪ್ರಭಾತ ಫೇರಿಯಲ್ಲಿ ಗಾಂಧೀಫೋಟೋ ಎದೆಗವಚಿಕೊಂಡು ಸಾಲಿನ ಮುಂದೆ ಮುಂದೆ, ನಡೆಯುತ್ತ 'ಬೋಲೋ ಭಾರತಮಾತಾಕಿ' 'ಬೊಲೋ ಗಾಂಧೀ ಮಹಾತ್ಮಾಕಿ' ಎಂದು ಹುರುಪಿನಿಂದ ಜಯಘೋಷ ಮಾಡುತ್ತಿದ್ದೆ. ಗಾಂಧೀಫೋಟೋದ ಪೂಜೆ ಮಾಡಿ ಮಂಡಕ್ಕಿ ಕೊಬ್ಬರಿ ತಿನ್ನುತ್ತಿದ್ದೆವು. ನಮ್ಮ ಮನೆಯಲ್ಲಿ ಪ್ರತಿ ಶನಿವಾರ ನಡೆಯುತ್ತಿದ್ದ ಕಾಗೆಯ ಮೇಲೆ ಕೂತ ಶನಿದೇವರ ಫೋಟೋದ ಪೂಜೆಗೂ ಅಗಸ್ಟ ೧೫, ಅಕ್ಟೋಬರ ೨ರಂದು ಮಾಡುವ ಗಾಂಧೀಫೋಟೊದ ಪೂಜೆಗೂ ಯಾವ ವ್ಯತ್ಯಾಸವೂ ಕಾಣುತ್ತಿದ್ದಿಲ್ಲ. ನೂರಾರು ದೇವರುಗಳಲ್ಲಿ ಗಾಂಧೀಜಿ ನೂರಾಒಂದನೆ ಯುವನಾಗಿ ಬಿಟ್ಟಿದ್ದ. ನಮ್ಮ ಸಂಸ್ಕೃತಿಗೆ ಅದು ತೀರ ಸಹಜ ಪ್ರಕ್ರಿಯೆ. ಪೊರಕೆ, ಒಳಕಲ್ಲು, ಮೊರ, ಸಗಣಿ ಎಲ್ಲವನ್ನೂ ದೈವೀಕರಿಸುವ (deification ಮಾಡುವ) ನಮಗೆ ಗಾಂಧೀಜಿಯಂಥ ವಿಚಿತ್ರ ಆದ್ದರಿಂದ ವಿಶೇಷ ವ್ಯಕ್ತಿಯನ್ನು ದೇವರನ್ನಾಗಿ ಮಾಡದೆ ಗತ್ಯಂತರವಿರಲಿಲ್ಲ!

ನಾನು ಬಿ.ಎ ಮುಗಿಸುವ ವರೆಗೆ ಗಾಂಧೀಜಿಯೂ ಒಬ್ಬ ಮನುಷ್ಯ: ಅವನಲ್ಲಿಯೂ ನ್ಯೂನತೆಗಳಿದ್ದಿರಲು ಸಾಧ್ಯ ಎಂಬ ಭಾವನೆ ಎಂದೂ ಬರದಂತೆ ನನ್ನ Brainwash ಮಾಡುವವರಲ್ಲಿ ನಮ್ಮ ಪಠ್ಯಪುಸ್ತಕಗಳು. ರಾಷ್ಟ್ರೀಯ ದಿನಾಚರಣೆಗಳು. ಗಾಂಧೀಜಿ ಕುರಿತು ಓರಿಯುರಾಡುವ ನುಡಿಗಳು. ಶಿಕ್ಷಕರು ಹಾಗೂ ಪತ್ರಿಕೆಗಳು ಗಾಂಧೀಜಿ ಬಗ್ಗೆ ಬಳಸುವ Superlative ಪದಪುಂಜಗಳು ಎಚ್ಚರವಹಿಸಿದ್ದವು. ಒಟ್ಟಾರೆ ಗಾಂಧೀಜಿ ಎಂದರೆ Flawles, ದೇವರಷ್ಟು ಪವಿತ್ರ, ಪೂಜ್ಯ ಅರ್ಥಾತ್ ದೇವರೇ ಆಗಿಬಿಟ್ಟಿದ್ದ.

ಆಕಸ್ಮಾತ್ ಒಂದು ದಿನ ಅಂಬೇಡ್ಕರ ಅವರು ಗಾಂಧೀಜಿ ಕುರಿತು ಬರೆದ ಪುಸ್ತಕ ವೊಂದು ನನ್ನ ಕೈಗೆ ಸಿಕ್ಕಿತು. ಅಕಸ್ಮಾತ್ ಸಿಕ್ಕಿತು ಎಂದೆ. ಯಾಕೆಂದರೆ ಗಾಂಧೀಜಿ ಯನ್ನು ಹೇಗೆ ವ್ಯವಸ್ಥಿತವಾಗಿ ದೈವೀಕರಿಸಿದ್ದಾರೋ ಅಷ್ಟೇ ವ್ಯವಸ್ಥಿತವಾಗಿ ಅಂಬೇಡ್ಕರರ ವಿಚಾರಧಾರೆ ನಮ್ಮ ಯುವಜನರಿಗೆ ತಲುಪದಂತೆ ಜಾಗರೂಕತೆಯಿಂದ ನೋಡಿಕೊಂಡಿದ್ದಾರೆ. ವ್ಯವಸ್ಥೆಯ ವಿರುದ್ಧ ಸಿಡಿದೆದ್ದವರನ್ನೆಲ್ಲ Blacklist ಮಾಡುವದೂ ಸಹ ನಮ್ಮ ಸಂಸ್ಕೃತಿಯ ಪ್ರಮುಖ ಲಕ್ಷಣ.

ಅಂಬೇಡ್ಕರರ "ಗಾಂಧಿ ಹಾಗೂ ಗಾಂಧೀವಾದ"ಎಂಬ ಆಪ್ರಸ್ತಕ ಓದುತ್ತಹೋದಂತೆ ಒಂದು ಕಡೆಗೆ ಆ ಅತಿಶೂದ್ರ ಭೀಮನ ಬಗೆಗೆ ಅನುತಾಪ, ಗೌರವ ಇನ್ನೊಂದೆಡೆಗೆ ನನ್ನ ಕಾಲಶತಮಾನದ ಆರಾಧ್ಯಮೂರ್ತಿ ಮೋಹನದಾಸ ಗಾಂಧೀಯ ಬಗೆಗಿನ ಪೂಜ್ಯತೆ ನಾಶವಾಗುತ್ತಿರುವಾಗಿನ ನೋವು.ಅದು ಸತ್ಯವೆಂಬ ಕೂಸಿನ ಜನನ ಕಾಲದ ಭಯಂಕರ ನೋವು.ಆದರೆ ಗಾಂಧೀಜಿ ಬಗೆಗಿನ ಸತ್ಯವನ್ನು ಹೇಳುವ ಒಂಟಿದನಿಗಳು ಅರಣ್ಯ ರೋದನವಾಗುವ ಸಂಭವವೇ ಜಾಸ್ತಿ. ಈಗಲೂ ಇಂದಿನವರೆಗೆ ನಮ್ಮ ಅತ್ಯಂತ ಪ್ರಗತಿಪರ, ಜನಪರ, ಕ್ರಾಂತಿಕಾರಿ, ಮಾನವೀಯ ವಿಚಾರವಾದಿಗಳು, ಸಮಾಜವಾದಿ ರಾಜಕಾರಣಿಗಳು, ಕವಿ ಲೇಖಕರು ಗಾಂಧೀಜಿಯ ಬಗ್ಗೆ ತಳೆದಿರುವ ಮೂಲಭೂತ ಗೌರವ ಪ್ರೀತಿಗಳು ನನಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಗಾಂಧೀಜಿಯ ಚಳುವಳಿಗಳಲ್ಲಿ ಭಾಗವಹಿಸಿದ, ಇನ್ನೂ ಜೀವಿಸಿರುವ ಸ್ವಾತಂತ್ರ್ಯ ಹೋರಾಟಗಾರರೆಂಬ ಪೆನ್‌ಶನ್‌ದಾರರಿಗೆ 'ಗಾಂಧೀಜಿ' ಯೇ ಒಂದು ಭಂಡವಾಳ. ಅವನ ಹೆಸರೇ ಅವರ ಅನ್ನ. ಇದಕ್ಕೆಲ್ಲ ಕಾರಣವೆಂದರೆ (೧) ಗಾಂಧೀಜಿಯ ಬಗೆಗೆ ಬೇರೆಯವರ ವ್ಯಾಖ್ಯೆಗಳನ್ನಷ್ಟೇ ಓದಿ ಓದಿ ಗಾಂಧೀಜಿಯನ್ನು ಮೂಲದಲ್ಲಿ ಓದದೇ ಇರುವದು. (೨) ಅಂಬೇಡ್ಕರ, ವೇದ ಮೆಹ್ತಾ, ಟಿ.ಕೆ ಮಹದೇವನ್, ಜಾರ್ಜ ಆರ್ವೆಲ್ ಮುಂತಾದವರು ಗಾಂಧೀಜಿ ಬಗೆಗೆ ಬರೆದಿರುವ ಪುಸ್ತಕಗಳು ಪ್ರಚಾರಕ್ಕೆ ಬಾರದೆ ಇರುವದು. ಮೊನ್ನೆ ಮೊನ್ನೆಯ ವರೆಗೆ ಅಂಬೇಡ್ಕರ ಎಂದರೆ ನಮ್ಮ ಸಂವಿಧಾನವನ್ನು ಬರೆದ ಒಬ್ಬ Glorified ಗುಮಾಸ್ತ ಎಂಬ ಕಲ್ಪನೆ ಮಾತ್ರ ನನ್ನಲ್ಲಿತ್ತು.

ಗಾಂಧೀಜಿಯ ವ್ಯಕ್ತಿತ್ವವನ್ನು ವಿಶ್ಲೇಷಿಸುವಾಗ ಅಂಬೇಡ್ಕರ ಅವರು ಸಿಟ್ಟಿಗೇಳದೆ, ಭಾವನಾಪರವಶರಾಗದೆ, ತರ್ಕ ಬದ್ಧವಾಗಿ ಚೂರುಚೂರು ಮಾಡುವ ವಿಧಾನ ಆಶ್ಚರ್ಯಕರವಾಗಿದೆ. ಗಾಂಧೀಜಿ ಯಾಕೆ ಪ್ರತಿಗಾಮಿ ಮನುಷ್ಯ ಎಂಬುದನ್ನು ಆಧಾರಸಹಿತ ಸಾಬೀತು ಪಡಿಸುತ್ತಾರೆ.

ಮೊದಲು ಜಾತಿಪದ್ಧತಿಯನ್ನು, ನಂತರ ಚಾತುರ್ವರ್ಣ ಪದ್ಧತಿಯನ್ನು ಸಮರ್ಥಿಸಿ ಗಾಂಧೀಜಿ ವಿಚಿತ್ರ ತರ್ಕಗಳನ್ನು ಮುಂದಿಡುತ್ತಾರೆ. ಅಂತರ್ಜಾತಿ ವಿವಾಹ ಹಾಗೂ

ಸಹಪಂಕ್ತಿ ಭೋಜನವನ್ನು ವಿರೋಧಿಸುತ್ತಾರೆ. "Taking food is as dirty an act as answering the call of nature......(and so) it must be done is seclusion" ಎಂಬುದು ಗಾಂಧೀಜಿಯ ತತ್ವ.

ಭಗವದ್ಗೀತೆ ಮೇಲ್ನೋಟಕ್ಕೆ ಸರಿ ಎಂದು ತೋರುವ "ಚಾತುರ್ವರ್ಣ್ಯವು ಮನುಷ್ಯನ ಆಂತರಿಕ ಗುಣಕರ್ಮಗಳನ್ನು ಅವಲಂಬಿಸಿದೆ" ಎಂಬ ವಿವರಣೆ ನೀಡುತ್ತದೆ. ಅದರ ಚರ್ಚೆ ಬೇರೆ ಇರಲಿ. ಆದರೆ ಗಾಂಧೀಜಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನದೇ ಆದ ಒಂದು ವಿತಂಡವಾದವನ್ನು ಮುಂದಿಡುತ್ತಾರೆ. ಅವರ ಪ್ರಕಾರ "ವರ್ಣ ಜನ್ಮಜಾತವಾದದ್ದು ಹಾಗೂ ಆಯಾ ವರ್ಣದ ವೃತ್ತಿ ಆನುವಂಶಿಕವಾದದ್ದು." ಮುಂದುವರೆದು ಗಾಂಧೀಜಿ ಹೇಳುತ್ತಾರೆ:– ವರ್ಣಪದ್ಧತಿಯಡಿಯಲ್ಲಿ ಶೂದ್ರನು ಓದುಕಲಿತು ಜ್ಞಾನಿಯಾಗುವದನ್ನು ಅಥವಾ ಸೈನಿಕ ವಿದ್ಯೆಗಳನ್ನು ಕರಗತ ಮಾಡಿಕೊಳ್ಳುವದನ್ನು ನಿಷೇಧಿಸಿಲ್ಲ. ಆದರೆ ಶೂದ್ರನು ಈ ವಿದ್ಯೆಗಳನ್ನು ತನ್ನ ಉದರ ಪೋಷಣೆಯ ಸಾಧನಗಳನ್ನಾಗಿ ಮಾಡಿಕೊಳ್ಳಬಾರದು. ತನ್ನ ಹೊಟ್ಟೆ ಹೊರೆಯುವದಕ್ಕೆ ಶೂದ್ರನು ಉಚ್ಚ ಜಾತಿಯವರ ಸೇವೆಯನ್ನೇ ಅವಲಂಬಿಸಬೇಕು. ಅದೇ ರೀತಿ ವೈಶ್ಯನು ತನ್ನ ಉದರ ಪೋಷಣೆಗೆ ಸೇವೆ (Service) ಮಾಡಕೂಡದು. ಬ್ರಾಹ್ಮಣನು ವ್ಯಾಪಾರ ಸಂಬಂಧಿ ಅಥವಾ ಸೈನಿಕ ಸಂಬಂಧಿ ವಿದ್ಯೆಗಳನ್ನು ತಿಳಿದುಕೊಂಡರೂ ಸಹ ತನ್ನ ಜೀವನ ನಿರ್ವಹಣೆಗೆ ಪೌರೋಹಿತ್ಯವನ್ನೇ ಅವಲಂಬಿಸಬೇಕು. (ಉದಾಹರಣೆಗೆ ಭಂಗಿಯೊಬ್ಬನು M.D. ಅಥವಾ FRCS ಮಾಡಿಕೊಂಡರೂ ಭಂಗಿ ಕೆಲಸ ಮಾಡಿಯೇ ಹೊಟ್ಟೆ ತುಂಬಿಕೊಳ್ಳಬೇಕು ?) ಹೀಗೆ ಜಾತಿಪದ್ಧತಿಯ ಕ್ರೌರ್ಯವನ್ನು ಬದಲಿಸಲು ಸುತರಾಂ ಇಷ್ಟವಿಲ್ಲದ ಗಾಂಧೀಜಿಯಿಂದ ಯಾವ ಬದಲಾವಣೆ ಸಾಧ್ಯ ?

ಗಾಂಧೀಜಿ ಆಧುನಿಕ ನಾಗರಿಕತೆಯನ್ನು ಹೀನಾಮಾನವಾಗಿ ಬಯ್ಯುತ್ತಾರೆ. ಯಂತ್ರಗಳನ್ನು ದೂಷಿಸುತ್ತಾರೆ. ಆದರೆ ನೀವೇಕೆ ಕಾರು, ಟ್ರೇನುಗಳಲ್ಲಿ ಓಡಾಡುತ್ತೀರಿ ಎಂದರೆ ಅವರ ಬಳಿ ಉತ್ತರವಿಲ್ಲ. "ಪಾಶ್ಚಾತ್ಯ ನಾಗರೀಕತೆ ಸೈತಾನನ ಸೃಷ್ಟಿ" ಎನ್ನುತ್ತಾರೆ. 'ಮಧ್ಯಯುಗದ ಫ್ಯೂಡಲ್ ವ್ಯವಸ್ಥೆಗೆ ಹಿಂದಿರುಗಿರಿ. ಪ್ರಾಚೀನತೆಗೆ ಮರಳಿರಿ. ಮತ್ತೆ ಗುಹಾ ಮಾನವರಾಗಿರಿ' ಎಂಬುದೇ ಗಾಂಧೀಜಿಯ ಸಂದೇಶದ ತಾತ್ಪರ್ಯ. ರವೀಂದ್ರನಾಥ ಟಗೋರರು ಗಾಂಧೀಜಿಯ ಇಂಥ 'ಮೀಡಿಈವಲಿಸಂ'ದ ವಿರುದ್ಧ ಆಗಲೇ ದನಿ ಎತ್ತಿದ್ದರು. ಆಧುನಿಕ ತಂತ್ರಜ್ಞಾನದ ನೆರವಿಲ್ಲದೆ ಗಳಿಸಿದ ಸ್ವಾತಂತ್ರ್ಯವನ್ನು ಆಕ್ರಮಣಗಳ ವಿರುದ್ಧ ಎಷ್ಟುದಿನ, ಎಷ್ಟುಗಂಟೆ ಉಳಿಸಿಕೊಳ್ಳಬಲ್ಲೆವು ಎಂಬುದನ್ನು ಗಾಂಧೀಜಿ ಯೋಚಿಸುವದಿಲ್ಲ.

ಗಾಂಧೀಜಿ ಬಂಡವಾಳಶಾಹಿಗಳ ಸ್ನೇಹಿತ. ಅವರು ಜಮೀನ್ದಾರರನ್ನು ಬೆಂಬಲಿಸಿ ದೀರ್ಘವಾಗಿ ಉಪದೇಶ ಮಾಡುತ್ತಾರೆ. (Young India 18-5-1921) ಅವರು ಕಾಂಗ್ರೆಸ್ ಪಕ್ಷಕ್ಕಾಗಿ ಮಿಲ್ಲುಗಳ ಮಾಲೀಕರಿಂದ ಹಾಗೂ ಭಂಡವಾಳಶಾಹಿ ಶ್ರೀಮಂತರಿಂದ ಹಣ ವಸೂಲಿ ಮಾಡಿದ್ದನ್ನು ಒಪ್ಪಿಕೊಂಡಿದ್ದಾರೆ. ಭಂಡವಾಳ ಶಾಹಿಗಳನ್ನು ಹೊಗಳುತ್ತ "Many among them are trying to be trustees of the poor man's wealth" ಎಂದು ಪ್ರಮಾಣಪತ್ರ ನೀಡುತ್ತಾರೆ. ಈ ಪ್ರಮಾಣಪತ್ರದ ಪೂರಣ ಈ ೩೫ ವರ್ಷಗಳಲ್ಲಿ ಹೊರಬಂದಿದೆ. ಬಿರ್ಲಾ ಮಹಾಶಯನ ಬಗೆಗೂ ಇಂಥದೇ ಉದಾರಪ್ರೀತಿ ವ್ಯಕ್ತಪಡಿಸಿ ಅಮೇರಿಕೆಯ Life ಪತ್ರಿಕೆಯ ವರದಿಗಾರ್ತಿ ಮಾರ್ಗರೆಟ್ ಬೂರ್ಕವೈಟ್‌ರೆದುರು ಹೇಳಿಕೆ ನೀಡಿದ್ದಾರೆ. ಟ್ರಸ್ಟೀಶಿಪ್ ಎಂಬ ಒಂದು ಸಣ್ಣ ನೈತಿಕ ಮೊಂಡು ಅಸ್ತ್ರದಿಂದ ಸಿರಿವಂತರನ್ನು ಕರುಣಾಳುಗಳನ್ನಾಗಿ ಪರಿವರ್ತಿಸಬಹುದು ಎಂಬ ಹಾಸ್ಯಾಸ್ಪದ ನಂಬಿಕೆ ಗಾಂಧೀಜಿಯದು.

ಈ ಜಗತ್ತಿನ ಎಲ್ಲ ವಸ್ತು ವಿಷಯಗಳ ಬಗೆಗೂ ತಾನೊಬ್ಬ ಪರಿಣತನೆಂಬಂತೆ ಅಭಿಪ್ರಾಯ ವ್ಯಕ್ತಪಡಿಸುವ ಹುಚ್ಚು ಹವ್ಯಾಸ ಗಾಂಧೀಜಿಯದು. ದೇವರು ಧರ್ಮದಿಂದ ಹಿಡಿದು ಮನುಷ್ಯರ ಮಲಮೂತ್ರಗಳ ವರೆಗೆ ಅವರು comment ಮಾಡದ ವಿಷಯವೇ ಇಲ್ಲ. ತನ್ನ ಅಭಿಪ್ರಾಯ ತಪ್ಪೆಂದು ತೋರಿಸಿಕೊಟ್ಟಾಗಲೂ ತಿದ್ದಿಕೊಳ್ಳದ ಹಟಮಾರಿತನ ಬೇರೆ. ಅಂಬೇಡ್ಕರರಂತೆ ಗಾಂಧೀಜಿ ಬಹಳಷ್ಟು ಓದಿಕೊಂಡವರಲ್ಲ. ಅಲ್ಲದೆ ಗಾಂಧೀಜಿಯ ದೃಷ್ಟಿಯಲ್ಲಿ Faith ಗೆ ಇರುವಷ್ಟು ಮಹತ್ವ ವೈಚಾರಿಕತೆಗೆ ಇಲ್ಲ.

ಗಾಂಧೀಜಿಯ ಬಗೆಗೆ ಸುಭಾಷಚಂದ್ರಬೋಸರ ಅಭಿಪ್ರಾಯ ಹೀಗಿದೆ : "ಭಾರತದ ಜನಜಂಗುಳಿಯ ಮೇಲೆ ಪ್ರಭಾವ ಬೀರುವಂಥಹದೇನೋ ಗಾಂಧೀಜಿಯ ವ್ಯಕ್ತಿತ್ವದಲ್ಲಿದೆ ನಿಜ; ಗಾಂಧೀಜಿ ಬೇರೆ ಯಾವ ದೇಶದಲ್ಲಿ ಹುಟ್ಟಿದ್ದರೂ ಅವರೊಬ್ಬ ಸನ್ನಿವೇಶಕ್ಕೆ ಹೊಂದದ misfit ವ್ಯಕ್ತಿಯಾಗುತ್ತಿದ್ದರು...ಅವರ ಅಹಿಂಸಾತ್ಮಕ ಸಿದ್ಧಾಂತ ಅವರನ್ನು ಗಲ್ಲಿಗಾದರೂ ಒಯ್ಯುತ್ತಿತ್ತು ಅಥವಾ ಹುಚ್ಚಾಸ್ಪತ್ರೆಗಾದರೂ ಒಯ್ಯುತ್ತಿತ್ತು...ಭಾರತದ ವಿಷಯವೇ ಬೇರೆ."

ಭಾರತವನ್ನು ಬಿಟ್ಟು ಬೇರೆ ಯಾವ ದೇಶವೂ ತನ್ನ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ–ಮಾರ್ಗವನ್ನು ಅನುಸರಿಸಲಿಲ್ಲ. ಗೆರಿಲ್ಲಾ ಯುದ್ಧತಂತ್ರವೇ ಎಲ್ಲ ಆಫ್ರಿಕದೇಶಗಳ ಮಾರ್ಗವಾಗಿದೆ. ಇದು ಗಾಂಧೀಜಿಯ ಮಾರ್ಗದ ನ್ಯೂನತೆಯೋ ಅಲ್ಲವೋ ಎಂಬುದು ವಿಚಾರಾರ್ಹ. ಭಾರತವನ್ನು ಬಿಡಲು ತಾವೇ ಅರ್ಧ ಸಿದ್ಧತೆ

ಯಲ್ಲಿದ್ದ ಬ್ರಿಟಿಶರನ್ನು ಓಡಿಸುವದು ಗಾಂಧೀಜಿಯ ತಂತ್ರಗಳಿಗೆ ಸಾಧ್ಯವಾಗಿರ ಬಹುದು. ಎರಡು ಮಹಾಯುದ್ಧಗಳಿಂದಾಗಿ ಇಂಗ್ಲಿಷರು ಸುಸ್ತಾಗದೆ ಹೋಗಿದ್ದರೆ ಅಥವಾ ಎರಡನೆ ಮಹಾಯುದ್ಧದ ನಂತರ ಲೇಬರ್ ಸರ್ಕಾರ ಅಧಿಕಾರಕ್ಕೆ ಬರದೆ ಚರ್ಚಿಲ್ಲನೇ ಗದ್ದುಗೆ ಏರಿದ್ದರೆ ಆಗ ಭಾರತದ ಸ್ವಾತಂತ್ರ್ಯದ ಸ್ಥಿತಿಗತಿ ಸಂಪೂರ್ಣ ಬೇರೆಯಾಗುತ್ತಿದ್ದುದರಲ್ಲಿ ಸಂದೇಹವಿಲ್ಲ. ಆದ್ದರಿಂದಲೇ His success was accidental but his failure was real ಎಂಬ ಮಾತು ಗಾಂಧೀಜಿಗೆ ಒಪ್ಪು ತ್ತದೆ. ಪ್ರಸಿದ್ಧ ಇತಿಹಾಸಕಾರ ಮುಜುಮದಾರರು ಗಾಂಧೀಯನ್ನು He was history's magnificient failure ಎಂದು ವರ್ಣಿಸಿದ್ದಾರೆ. ಭಾರತದ ವಿಭಜನೆ ಹಾಗೂ ಆಗ ಕೋಮು ಗಲಭೆಗಳಲ್ಲಿ, ಎರಡನೆ ಮಹಾ ಯುದ್ಧದಲ್ಲಿ ಸತ್ತ ಜನಕ್ಕಿಂತ ಹೆಚ್ಚು ಭಾರತೀಯರು ಸತ್ತನ್ದೂ ಗಾಂಧೀಜಿಯ ಸೋಲಲ್ಲವೇ ? ಸ್ವಾತಂತ್ರ್ಯ ಪ್ರಾಪ್ತಿಯ ವಿಜಯವನ್ನು ಗಾಂಧೀಜಿಯ ಕೊರಳಿಗೆ ಕಟ್ಟುವದಾದರೆ ಈ ಸೋಲನ್ನೂ ಅವರಿಗೇ ಕಟ್ಟಬೇಕಲ್ಲವೇ ?

ಭಾರತದಲ್ಲಿ ಸಂತರು ಮಹಾತ್ಮರಿಗೇನೂ ಎಂದೂ ಕೊರತೆ ಇಲ್ಲ.ಭಾರತಕ್ಕೆ ಅವರಿಂದ ಅಮೂಲ್ಯ ವಿದೇಶಿ ವಿನಿಮಯ ಸಿಗುವದಾದರೆ ಶತಮಾನಗಳ ವರೆಗೆ ನಾವು ಈ ಸಂತ, ಮಹಾತ್ಮರನ್ನು export ಮಾಡುತ್ತ ಇರಬಹುದು ಎಂದು ಅಂಬೇಡ್ಕರ ಹೇಳುತ್ತಾರೆ. "Mahatmas have come and mahatmas have gone. They have raised a lot of dust but never the level of the people" ಎಂಬ ಅಂಬೇಡ್ಕರರ ಮಾತು ಗಾಂಧೀಜಿಗೂ ಅನ್ವಯಿಸುತ್ತದಲ್ಲವೇ? ಒಬ್ಬ ವ್ಯಕ್ತಿಯ ಒಟ್ಟು ಸಾಧನೆಯ ಕಟ್ಟಕಡೆಯ ಮೌಲ್ಯ ವಿಶ್ಲೇಷಣೆ ಏನು ? ಗಾಂಧೀಜಿ ಯ ಕಾಲದಲ್ಲಾಗಲಿ ನಂತರದಲ್ಲಾಗಲಿ ಭಾರತದಲ್ಲಿ ಏನು ಆಗಿದೆ ? ಯಾವ ಸಾಮಾಜಿಕ, ರಾಜಕೀಯ, ಆರ್ಥಿಕ ಪಿಡುಗುಗಳು ತೊಲಗಿವೆ ? ಭಾರತಕ್ಕೆ ಗಾಂಧೀಜೀಯ ಒಟ್ಟು ಕಾಣಿಕೆ ಏನು? ಎಂಬುದನ್ನು ಪುನರ್ವಿಮರ್ಶೆ ಮಾಡುವ ಕಾಲ ವೀಗ ಬಂದಿದೆ ಎನಿಸುತ್ತದೆ. ಗಾಂಧೀಜಿಯ ಸ್ವಾತಂತ್ರ್ಯ ಹೋರಾಟದಲ್ಲಿಯೂ ಒಂದು ವಿಪರ್ಯಾಸವಿದೆ. ಪರಕೀಯರ ದಬ್ಬಾಳಿಕೆಯಿಂದ ಭಾರತೀಯರನ್ನು ಮುಕ್ತವಾಗಿಸಲು ಗಾಂಧೀಜಿ ಹೋರಾಡಿದರು. ಆದರೆ ಒಂದು ಜಾತಿ ಮತ್ತೊಂದು ಜಾತಿಯ ಮೇಲೆ ನಡೆಸುವ ಸತತ ದಬ್ಬಾಳಿಕೆ ಶೋಷಣೆಯನ್ನು ಪ್ರತ್ನಿಸದ ಗಾಂಧೀಜಿಗೆ ಇಂಗ್ಲಿಷರ ದಬ್ಬಾಳಿಕೆ ಮಾತ್ರ ಬೇಡವಾದದ್ದು ವಿಚಿತ್ರವಲ್ಲವೇ? ತಲೆಯ ಮೇಲೆ ಮಲ ಹೊರುವ ಭಂಗಿಯೊಬ್ಬನ ಮೈಮೇಲೆ ಮಲ ಸೋರಬಾರದೆಂದು ಬಿದಿರಿನ ಬುಟ್ಟಿಯ ಬದಲು ಕಬ್ಬಿಣದ ಬುಟ್ಟಿ ಕೊಡುವದು ಸುಧಾರಣೆಯೇ ಅಲ್ಲ.

ಆ ಮಲ ಹೊರುವ ಪದ್ಧತಿ, ಅದಕ್ಕೆ ಕಾರಣವಾಗಿರುವ ಸಾಮಾಜಿಕ, ಆರ್ಥಿಕ ಅಸಮಾನತೆಗಳ ವಿರುದ್ಧ ಸಿಡಿದೆದ್ದು ಆ ಪದ್ಧತಿಯನ್ನೇ ಮೂಲೋತ್ಪಾಟನ ಮಾಡುವುದು ಸುಧಾರಣೆ ಎನಿಸಿಕೊಂಡೀತು. ಗಾಂಧೀಜಿ ಮಾಡಿದ್ದು ಯಾವ ಸುಧಾರಣೆ ? ಹೊಲೆಯರಿಗೆ 'ಹರಿಜನ'ರೆಂಬ ನಾಮಕರಣ ಮಾಡಿದ್ದೇ ?

ಗಾಂಧೀಜಿಯ ಬಳಿ ಎರಡು ಪ್ರಮುಖ ಅಸ್ತ್ರಗಳಿದ್ದವು. ಒಂದು ಸತ್ಯಾಗ್ರಹ, ಎರಡನೆಯದು ಉಪವಾಸ. ಮೊದಲನೆಯ ಅಸ್ತ್ರವನ್ನು ಅವರು ಬ್ರಿಟಿಶ್ ಸರಕಾರದ ವಿರುದ್ಧ ಅನೇಕ ಸಲ ಬಳಸಿದರು. ಆದರೆ ಸವರ್ಣ ಹಿಂದೂಗಳು ಭಾವಿ ಮತ್ತು ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶ ನೀಡಬೇಕೆಂದು ಒತ್ತಾಯಿಸಿ ಎಂದೂ, ಒಮ್ಮೆ ಸಹ, ಗಾಂಧೀಜಿ ಸತ್ಯಾಗ್ರಹ ಮಾಡಲಿಲ್ಲ. ಗಾಂಧೀಜಿ ಒಟ್ಟು ೨೧ ಕ್ಕಿಂತ ಹೆಚ್ಚು ಸಲ ಉಪವಾಸದ ಅಸ್ತ್ರವನ್ನು ಬಳಸಿದರು. ಆದರೆ ಅಸ್ಪೃಶ್ಯತೆಯ ವಿರುದ್ಧ ಒಮ್ಮೆಯೂ ಉಪವಾಸ ಕೈಗೊಳ್ಳಲಿಲ್ಲ. ೧೯೩೨ರ ಮೊದಲು ಅಸ್ಪೃಶ್ಯರ ದೇವಾಲಯ ಪ್ರವೇಶವನ್ನು ಗಾಂಧೀಜಿ ವಿರೋಧಿಸಿದ್ದರು :-"How is it possible that Anthyajas (untouchables) should have the right to enter all the existing temples ? As long as the law of caste and Ashram has the chief place in Hindu Religion, to say that every Hindu can entcr every temple is a thing that is not possible to day (ಗಾಂಧಿ ಶಿಕ್ಷಣ Vol II ಪುಟ 132) ಹಿಂದೂ ದೇವಾಲಯಗಳಲ್ಲಿ ಪಶು ಪಕ್ಷಿ ನಾಯಿಗಳಿಗೂ ಸಹ ಪ್ರವೇಶವುಂಟು; ಆದರೆ ಅಸ್ಪೃಶ್ಯರಿಗೆ ಮಾತ್ರ ಪ್ರವೇಶವಿಲ್ಲ.

ಕೇರಳದ ಗುರುವಾಯೂರಿನ ದೇವಾಲಯದಲ್ಲಿ ಅಸ್ಪೃಶ್ಯರಿಗೆ ಪ್ರವೇಶ ನೀಡಬೇಕೆಂದು ಆಗ್ರಹ ಪಡಿಸಿ ಕೇಲಪ್ಪನ್ ಎಂಬ ಒಬ್ಬ ಹಿಂದೂ ೨೧-೯-೧೯೩೨ ರಂದು ದೇವಾಲಯದೆದುರು ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ. ಗಾಂಧೀಜಿ ಮಧ್ಯೆ ಪ್ರವೇಶಿಸಿ ಕೇಲಪ್ಪನ್ ಮನವೊಲಿಸಿ ಉಪವಾಸ ನಿಲ್ಲಿಸಿದರು; ಹಾಗೂ ೧-೧-೧೯೩೩ ರೊಳಗೆ ದೇವಾಲಯದಲ್ಲಿ ಹರಿಜನರಿಗೆ ಪ್ರವೇಶ ಸಿಗದಿದ್ದರೆ ನಾನೇ ಸ್ವತಃ ಉಪವಾಸ ಪ್ರಾರಂಭಿಸುತ್ತೇನೆಂದು ಗಾಂಧೀಜಿ ಹೇಳಿಕೆ ಕೊಟ್ಟರು. ಆದರೂ ದೇವಾಲಯದ ಕಮಿಟಿಯವರು ಗಾಂಧೀಯ ಮಾತು ಕೇಳಲಿಲ್ಲ. ೧-೧-೧೯೩೩ ರಂದು ಗಾಂಧೀಜಿ ಉಪವಾಸ ಪ್ರಾರಂಭಿಸಬೇಕಿತ್ತು. ಅವರು ಹಾಗೆ ಮಾಡದೆ ಒಳದಾರಿ ಹಿಡಿದರು. ಆ ಪ್ರದೇಶದಲ್ಲಿ ಜನಮತಗಣನೆ ಮಾಡಿರಿ, ಜನಮತಗಣನೆಯಲ್ಲಿ ಹರಿಜನ ಪ್ರವೇಶದ ವಿರುದ್ಧ ಬಹುಮತ ಬಂದರೆ ನಾನು ಉಪವಾಸ ಮಾಡುವದಿಲ್ಲ ಎಂದರು. (ಅಂದರೆ ಬಹುಜನರು ಬೇಡ ಎಂದರೆ ಹರಿಜನರು ದೇವಾಲಯ

ಹೋಗುವದು ಬೇಡ ಎಂದರ್ಥ. ಇದೇ ಗಾಂಧೀಜಿ Performance of one's duty should be independent of public opinion ಎಂದು ಇನ್ನೊಂದು ಸಂದರ್ಭದಲ್ಲಿ ಅಪ್ಪಣೆ ಕೊಡಿಸಿದ್ದಾರೆ.) ಜನಮತಗಣನೆಯಲ್ಲಿ ದೇವಾಲಯದೊಳಗೆ ಪ್ರವೇಶಕ್ಕೆ ಅರ್ಹತೆ ಇರುವವರು ಮಾತ್ರ ಭಾಗವಹಿಸಿದ್ದರು. ಅದರಲ್ಲಿ ೫೬% ಹರಿಜನರಿಗೆ ಪ್ರವೇಶ ನೀಡಬೇಕೆಂದು, ೯% ಬೇಡವೆಂದು, ೮% ತಟಸ್ಥರಾಗಿ ವೋಟು ಹಾಕಿದರು. ೨೭% ಜನ ಮತ ಚಲಾಯಿಸಲಿಲ್ಲ. ಇಷ್ಟಾದರೂ ಗುರುವಾಯೂರ ದೇವಾಲಯದೊಳಕ್ಕೆ ಹರಿಜನರನ್ನು ಬಿಡಲಿಲ್ಲ. ಆಗ ಗಾಂಧೀಜಿ ಉಪವಾಸ ಪ್ರಾರಂಭಿಸುವದು ಅನಿವಾರ್ಯವಾಗಿತ್ತು. ಆದರೆ ಗಾಂಧೀಜಿ ಹಾಗೆ ಮಾಡದೆ ಮಾತಿಗೆ ತಪ್ಪಿದರು. ಕೊನೆಗೂ ಗಾಂಧೀಜಿ ಉಪವಾಸ ಮಾಡಲಿಲ್ಲ. ಇತ್ತ ಕೇಲಪ್ಪನ್ನನನ್ನೂ ದಾರಿ ತಪ್ಪಿಸಿದರು. ತಾವೂ ನುಸುಳಿಕೊಂಡರು. ಇದೆಲ್ಲ ಗಾಂಧೀಜಿ ಹರಿಜನರ ಬಗೆಗೆ ಇಟ್ಟುಕೊಂಡಿದ್ದ ಪ್ರೀತಿ ಎಂಥದು ಎಂದು ತೋರಿಸುತ್ತದೆ.

ಇನ್ನೊಂದು ಪ್ರಸಂಗ : ಡಾ. ಖರೆ ೧೯೩೮ರಲ್ಲಿ ಮಧ್ಯ ಪ್ರಾಂತಗಳ ಮುಖ್ಯ ಮಂತ್ರಿಯಾಗಿದ್ದರು. ಅವರು ತಮ್ಮ ಮಂತ್ರಿಮಂಡಲದಲ್ಲಿ ಅಗ್ನಿಭೋಜ ಎಂಬ ಅಸ್ಪೃಶ್ಯನಿಗೆ ಕ್ಯಾಬಿನೆಟ್ ಮಂತ್ರಿಸ್ಥಾನ ನೀಡಿದರು. ಇದನ್ನು ಗಾಂಧೀಜಿ ಖಂಡಿಸುತ್ತ ಅಸ್ಪೃಶ್ಯರಲ್ಲಿ ಇಂಥ ಆಸೆ ಆಕಾಂಕ್ಷೆಗಳನ್ನು ಬಿತ್ತುವದು ತಪ್ಪು ಎಂದರು. ೧೯೪೨ರಲ್ಲಿ ಅಖಿಲ ಭಾರತ ಅಸ್ಪೃಶ್ಯರ ಸಮ್ಮೇಳನದಲ್ಲಿ ಅಸ್ಪೃಶ್ಯನೊಬ್ಬ ಹೀಗೆ ಪ್ರಶ್ನಿಸಿದನು—"Will you advise the congress and the leaders of the various majority parties in the legislatures in the provinces to nominate the cabinet members from among the scheduled caste leglslators who enjoy the confidence of the majority of the scheduled caste members ?

ಇದಕ್ಕೆ ಗಾಂಧೀಜಿಯ ಉತ್ತರ : I cannot. The principle is dangerous. Protection of its neglected classes should not be carried to an extent which will harm them and harm the country ಗಾಂಧೀಜಿಯ ಈ ಉತ್ತರವನ್ನು ವಿಶ್ಲೇಷಿಸುತ್ತ ಅಂಬೇಡ್ಕರ ಹೇಳುತ್ತಾರೆ : ಕ್ಯಾಬಿನೆಟ್ಟಿನಲ್ಲಿ ಅರ್ಹತೆ ಇಲ್ಲದ ಹರಿಜನರನ್ನು ಮಂತ್ರಿಯನ್ನಾಗಿ ಮಾಡಬೇಕೆಂದು ಯಾರೂ ಹೇಳುವದಿಲ್ಲ. ಅಲ್ಲದೆ ಅರ್ಹತೆ ಬಗೆಗಿನ ಯಾವುದೇ ಕರಾರುಗಳನ್ನು ಮುಸ್ಲಿಂ ಹಾಗೂ ಇತರ ಅಲ್ಪಸಂಖ್ಯಾತರ ಬಗೆಗೆ ಗಾಂಧೀಜಿ ಎಂದೂ ಹಾಕುವದಿಲ್ಲ. ಒಟ್ಟಾರೆ ಹರಿ-ಜನರು ಮಂತ್ರಿಗಳಾಗುವದು ಗಾಂಧೀಜಿಗೆ ಇಷ್ಟವಿಲ್ಲ.

೧೯೨೯ ರಲ್ಲಿ ಬಾಂಬೆ ಪ್ರಾಂತದ ಅಸ್ಪೃಶ್ಯರು ಕುಡಿಯುವ ಬಾವಿಯ ನೀರು ಹಾಗೂ ದೇವಾಲಯ ಪ್ರವೇಶದ ಬೇಡಿಕೆಗಳನ್ನು ಮುಂದೊಡ್ಡಿ ಸತ್ಯಾಗ್ರಹ ಹೂಡಿದರು. ಗಾಂಧೀಜಿ ಹರಿಜನರನ್ನು ಬೆಂಬಲಿಸಲಿಲ್ಲ. ಬದಲಾಗಿ ಬಲವಾಗಿ ಖಂಡಿಸಿದರು. ಗಾಂಧೀಜಿಯ ವಾದವೇನು ಗೊತ್ತೇ ? ಸತ್ಯಾಗ್ರಹವೆಂಬ ಅಸ್ತ್ರ ಪರದೇಶದವರ ವಿರುದ್ಧ ಮಾತ್ರ ಬಳಸತಕ್ಕದ್ದು. ನಮ್ಮನಮ್ಮಲ್ಲಿ ಅಂದರೆ ಸ್ವದೇಶಿಯರ ವಿರುದ್ಧ ಸತ್ಯಾಗ್ರಹ ಹೂಡಬಾರದು ಎಂದು ಹೇಳಿಕೆ ಕೊಟ್ಟರು. ಇದೇ ಗಾಂಧೀಜಿ ಮುಂದೆ ದೇಶ ವಿಭಜನೆಯ ನಂತರ ಪಾಕಿಸ್ತಾನಕ್ಕೆ ಹಣ ಕೊಡಬೇಕೆಂದು ಒತ್ತಾಯಿಸಿ ಸ್ವದೇಶಿ ಭಾರತ ಸರಕಾರದ ವಿರುದ್ಧ ಸತ್ಯಾಗ್ರಹ ಹೂಡಿದರು.

ಪ್ರಜಾಪ್ರಭುತ್ವ ಹಾಗೂ ಜಾತಿಪದ್ಧತಿ (ಅಥವಾ ವರ್ಣಪದ್ಧತಿ) ಇವು ಪರಸ್ಪರ ವಿರುದ್ಧಶಕ್ತಿಗಳು. ಒಂದು ಇದ್ದ ಕಡೆ ಇನ್ನೊಂದು ಇರಲಾರದು. ಆದ್ದರಿಂದ ಜಾತಿಪದ್ಧತಿಯನ್ನು ಸಮರ್ಥಿಸುವವರು ಪ್ರಜಾಪ್ರಭುತ್ವವಾದಿಗಳಾಗುವುದು ಸಾಧ್ಯವಿಲ್ಲ. ಅದರಂತೆ ಸ್ವಜಾತಿವಿವಾಹ (Endogamy) ಎಂಬುದು ಜಾತಿಪದ್ಧತಿಯ ಬೆನ್ನೆಲುಬು. ಆದ್ದರಿಂದ ಅಂತರ್ಜಾತಿ ವಿವಾಹಗಳನ್ನು ಬಯಸದವರು ಸಮಾನತೆ, ಸಮಾಜವಾದಗಳನ್ನು ಅರ್ಥಮಾಡಿಕೊಳ್ಳಲಾರರು. ಈಗ ಗಾಂಧೀಜಿ ಎಂಥವರು ಎಂದು ಸ್ಪಷ್ಟವಾಗಿ ನಿರ್ಧರಿಸಬಹುದು. ಗಾಂಧೀಜಿಯ ಆದರ್ಶಗಳು ಏಕದಮ ಪ್ರಜಾಪ್ರಭುತ್ವ ವಿರೋಧಿ ತತ್ವಗಳು. ನಂತರದ ಕೆಲವು ಸಂದರ್ಭಗಳಲ್ಲಿ ಗಾಂಧೀಜಿ ಸಹಪಂಕ್ತಿಭೋಜನ ಹಾಗೂ ಅಂತರ್ಜಾತಿ ವಿವಾಹಗಳನ್ನು ಮನ್ನಿಸಿ ಹೇಳಿಕೆ ನೀಡಿದ್ದಾರೆ. ಆದರೆ ಅವರ ಒಟ್ಟು ತಾತ್ಪರ್ಯ ಇಷ್ಟು: ಸಹಭೋಜನ ಅಥವಾ ಅಂತರ್ಜಾತಿ ವಿವಾಹಗಳು ಪ್ರತಿಯೊಬ್ಬನ ವೈಯುಕ್ತಿಕ ಬೇಕುಬೇಡಗಳು; ಸಾಮಾಜಿಕ ಪ್ರಶ್ನೆಗಳಲ್ಲ. ಈ ಬಗ್ಗೆ ಯಾರನ್ನೂ ಯಾರೂ ಒತ್ತಾಯ ಮಾಡಲಾಗದು. ಅಸ್ಪೃಶ್ಯತೆಯನ್ನೂ ನಂತರ ಅನೇಕ ಸಲ ಗಾಂಧೀಜಿ ಖಂಡತುಂಡ ಮಾತುಗಳಲ್ಲಿ ಖಂಡಿಸಿದ್ದಾರೆ. ಆದರೆ ಈ ಬಗ್ಗೆ ಯಾವದೇ ರಚನಾತ್ಮಕ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ. ಅವರು ಈ ಬಗ್ಗೆ ಸುಧಾರಣೆಯಾಗಬೇಕು ಎಂದು ಇಚ್ಛಿಸುತ್ತಾರೆ. ಆದರೆ ಸವರ್ಣ ಹಿಂದೂಗಳನ್ನು ಎದುರು ಹಾಕಿಕೊಂಡು ಇವನ್ನು ಮಾಡಲು ಅವರು ತಯಾರಿಲ್ಲ.

“ನಿಮ್ಮ ಹಿರಿಯ ಮಗ ನಿಮ್ಮ ಅಲಕ್ಷ್ಯದಿಂದಾಗಿ ದಾರಿ ತಪ್ಪಿದ್ದಾನೆ. ಅವನು ದಾರಿ ತಪ್ಪುವದಕ್ಕೆ ನೀವು ಜವಾಬ್ದಾರರಲ್ಲವೆ ? ನಿಮ್ಮ ಮನೆಯನ್ನು ನೀವು ಮೊದಲು ಸರಿಪಡಿಸಿಕೊಳ್ಳಬೇಕಲ್ಲವೇ” ಎಂದು ಒಬ್ಬ ಓದುಗ ಗಾಂಧೀಜಿಗೆ ಪ್ರಶ್ನೆ ಕೇಳಿದ್ದಾನೆ. ಇದಕ್ಕೆ ಗಾಂಧೀಜಿಯ ಉತ್ತರ ವಿಲಕ್ಷಣವಾಗಿದೆ: “I am a believer in previous births and rebirths All our relationships are the result of the samskaras we carry from our previous births. God's

laws are inscrutable......I regard the birth of a bad son to me as the result of my past evil whether of this life or previous" (ಎಲ್ಲ ಮಾನವ ಸಂಬಂಧಗಳೂ ನಮ್ಮ ಪೂರ್ವಜನ್ಮದ ಸಂಸ್ಕಾರದ ಫಲಗಳು ಎಂದಮೇಲೆ ಮನುಷ್ಯನ ಸುಧಾರಣೆಗೆ ಅವಕಾಶವೆಲ್ಲಿದೆ ? ಬಿಲ್ಲಾ ರಂಗಾ ಹಾಗೂ ಛೋಪ್ರಾ ಮಕ್ಕಳ ನಡುವಿನ ಸಂಬಂಧವೂ ಇಂಥದ್ದೇ ಇರುವದಾದರೆ ಬಿಲ್ಲಾ ರಂಗಾ ಅವರಿಗೇಕೆ ಶಿಕ್ಷೆ ವಿಧಿಸಬೇಕು ?) ಅಮಾನುಷ ಹಿಂದೂ ಧರ್ಮದ ತತ್ವಗಳನ್ನು ಒಪ್ಪಿಕೊಂಡ ಮನುಷ್ಯ ಎಂಥ ವಿತಂಡ ವಾದಗಳಿಗೆ ಶರಣಾಗಬೇಕಾಗುತ್ತದೆ ಎಂಬುದಕ್ಕೆ ಗಾಂಧೀಜಿಯ ಈ ಉತ್ತರ ಸಾಕ್ಷಿ.

ಗಾಂಧೀಜಿಯ ಇನ್ನೂ ಕೆಲವು ಆಣಿಮುತ್ತುಗಳು :—

೧) ವಿವಾಹವೆಂಬುದು ಒಂದು ಪತನ. ಜನನವೂ ಕೂಡಾ. ೨) ಅಂತರ್ಜಾತಿ ವಿವಾಹ ವಿವಾಹ ಹಾಗೂ ಅಂತರ್ಜಾತಿ ಭೋಜನಗಳನ್ನು ನಿಷೇಧಿಸುವದು ಆತ್ಮೋನ್ನತಿಗೆ ಅತ್ಯವಶ್ಯಕ. ೩) ಒಬ್ಬನೇ ಒಬ್ಬ ಜಾಡಮಾಲಿ ಹಿಂದೂಧರ್ಮದಿಂದ ಹೊರಹೋದರೂ ನನಗೆ ನೋವಾಗುತ್ತದೆ. ಆದರೆ ಎಲ್ಲ ವರ್ಗ ವೈಷಮ್ಯಗಳು ಪರಿಹಾರಯೋಗ್ಯವಾದವುಗಳು ಎಂದು ನಾನು ನಂಬುವದಿಲ್ಲ. (೪) ಜಾತಿಪದ್ಧತಿಯೆಂಬುದು ವೈಜ್ಞಾನಿಕ ಆಧಾರವುಳ್ಳದ್ದು. ವೈಚಾರಿಕತೆ ಜಾತಿಗೆ ವಿರುದ್ಧವಾದುದಲ್ಲ. ಜಾತಿ ಎಂಬುದು ಹಿಂದೂಧರ್ಮದ ಮಹಾಶಕ್ತಿ ಹಾಗೂ ರಹಸ್ಯ. (Caste is the great power and secret of Hinduism, (೫) ಹಸುವಿನ ರಕ್ಷಣೆಯನ್ನು ತನ್ನ ಕರ್ತವ್ಯವೆಂದು ಪರಿಗಣಿಸದ ಬ್ರಾಹ್ಮಣ. ಕ್ಷತ್ರಿಯ. ಶೂದ್ರ ಯಾವನೇ ಆದರೂ 'ಹಿಂದೂ' ಎಂದು ಕರೆಸಿಕೊಳ್ಳುವದು ಸಾಧ್ಯವೇ ? (೬) That a person creates confusion of caste when he leaves his hereditory calling is obvious. When a brahmin begins to earn his bread by say following the profession of barber or engineer he does create confusion of caste, as much as when a barber or an engineer begins to import religious instructions as a means of livlihood [ಸ್ವತಃ ಬನಿಯಾ ಜಾತಿಗೆ ಸೇರಿದ ಗಾಂಧೀಜಿ. ವಕೀಲಿವೃತ್ತಿ, ರಾಜಕೀಯ ಮಾಡಿದ್ದು ತನ್ನನ್ನು ತಾನು ಧರ್ಮೋದ್ಧಾರಕ ಎಂದು ಕರೆದುಕೊಂಡು ತನ್ನ ಕುಲಕಸುಬಾದ ವ್ಯಾಪಾರವನ್ನು ಬಿಟ್ಟಿದ್ದು Confusion of caste ಅಲ್ಲವೇನೋ !] (೭) I do not believe in woman working for a living or uudertaking commercial enterprises......To introduce

English education in schools meant for women could only lead to prolong our helplessness.

ಒಟ್ಟಾರೆ ಗಾಂಧೀಜಿ ಗೊಂದಲಗಳ ರಾಜ. ಹಿಂದೂ Fanatic ಎನ್ನಬಹುದು. ಅಲ್ಲದೆ ಹಿಂದೂ ಉಚ್ಚಜಾತೀಯನೊಬ್ಬ ಪ್ರಗತಿಪರ, ಜನಪರ ಅಥವಾ ರ್‍ಯಾಡಿಕಲ್ ಆಗುವದು ಎಷ್ಟು ಕಷ್ಟ ಎಂಬುದು ಗಾಂಧೀಜಿಯ ವೃತ್ತಾಂತದಿಂದ ತಿಳಿದುಬರುತ್ತದೆ ಜಾರ್ಜ ಆರ್ವೆಲ್ಲರು ಗಾಂಧೀಜಿ ಕುರಿತು ಮಾಡಿದ ಕೆಲವು ಟಿಪ್ಪಣಿಗಳನ್ನು ಇಲ್ಲಿ ಸ್ಮರಿಸುವದು ಉಚಿತವೆನಿಸುತ್ತದೆ. 1) To what extent was Gandhi moved by vanity-by the consciousness of himself as a humble, naked old man sitting on a praying mat and shaking empires by sheer spiritual power ... 2) Gandhi called upon them (millionaires) to repent and naturally they preferred him to the socialists and communists who, given the chance, would actually have taken their money away........ 3) Whether he (Gandhi)was also a lovable man and whether his teachings can have much value for those who do not accept the religious beliefs on which they are founded, I have never felt certain.

ಗಾಂಧೀಜಿಯ ಬ್ರಹ್ಮಚರ್ಯ, ಸಂತತ್ವಗಳ ಬಗ್ಗೆ, ರಾಜಕೀಯದಲ್ಲಿ ಧರ್ಮವನ್ನು ಬೆರೆಸುವದು ಹಾಗೂ cloase friendships are dangerous ಎಂಬ ಗಾಂಧೀ ಸಿದ್ಧಾಂತ ಕುರಿತು ಜಾರ್ಜ ಆರ್ವೆಲ್ ಟಿಪ್ಪಣಿ ಮಾಡುತ್ತ...Sainthood is also a thing that human beings must avoid ಎನ್ನುತ್ತಾರೆ. ಯಾಕೆಂದರೆ ಸಂತರು ಮಾನವರ ಬಗ್ಗೆ ಈ ಬದುಕು, ಮಾನವ ಸಂಬಂಧಗಳ ಬಗ್ಗೆ ಚಿಂತಿಸದೆ ಯಾವಾಗಲೂ ಮೇಲಿನ (higher) 'ಪರ' ವಸ್ತು ಮುಂತಾದವುಗಳ ಬಗ್ಗೆ ತಲೆಕೆಡಿಸಿಕೊಂಡು 'ಇಹ' ದ ಬಗೆಗೆ ಅಮಾನುಷರಾಗುವದೇ ಹೆಚ್ಚು. ಗಾಂಧೀಜಿಯೂ ಹೆಚ್ಚುಕಡಿಮೆ ಇಂಥದೇ ಮನೋಭಾವ ತೋರಿದ್ದಾರೆ. ಜಾರ್ಜ ಆರ್ವೆಲ್ಲರ ಪ್ರಕಾರ ಇದಕ್ಕೆ ಕಾರಣವೆಂದರೆ: "ಸಾಮಾನ್ಯ ಜನರು ನಿಜವಾಗಿಯೂ ಸಂತರಾಗಲು ಇಚ್ಛಿಸುವದಿಲ್ಲ, ಸಂತರಾಗಲು ಬಯಸುವ ಬಹಳಷ್ಟು ಜನ ಬಹುಶಃ 'ಮಾನವ'ರಾಗಿಯೇ ಇರುವ ಪ್ರೀತಿ ಪ್ರೇರಣೆಯನ್ನು ಅನುಭವಿಸಿಲ್ಲ. ನಿರ್ಲಿಪ್ತತೆ (Non-attachment)ಗೆ ಕಾರಣವೆಂದರೆ ಮನುಷ್ಯ, ಜೀವಿಸುವ ನೋವು, ಪ್ರೀತಿಸುವ ನೋವುಗಳಿಂದ ಪಾರಾಗುವ ಹಂಬಲ. ಪ್ರೀತಿಯೆಂಬುದು-ಅದು ಲೈಂಗಿಕವಾಗಿರಲಿ ಅಥವಾ ಅಲೈಂಗಿಕವಾಗಿರಲಿ-ನಿಜವಾಗಿಯೂ ಕಠಿಣವಾದ ಪ್ರಕ್ರಿಯೆ. ಜೀವನದ ಪ್ರೀತಿಯನ್ನು ಅನುಭವಿಸಲಾರದ ಹೇಡಿ

ಗಳು ನಿರ್ಲಿಪ್ತತೆಯ ಮಾತನಾಡುತ್ತಾರೆ. ನಾವು ಮನುಷ್ಯ ಹಾಗೂ ದೇವರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗುತ್ತದೆ ಹಾಗೂ ಎಲ್ಲ ಸುಧಾರಣಾವಾದಿಗಳು, ಕ್ರಾಂತಿಕಾರರು, ಸೌಮ್ಯ ಪ್ರಗತಿಪರರಿಂದ ಹಿಡಿದು ತೀಕ್ಷ್ಣ ಅರಾಜಕತಾವಾದಿಗಳೂ ಸಹ 'ಮನುಷ್ಯ'ನನ್ನೇ ಆರಿಸಿಕೊಂಡಿರುವುದನ್ನು ಇತಿಹಾಸ ಸ್ಪಷ್ಟಪಡಿಸುತ್ತದೆ. ಗಾಂಧೀಜಿಯ ಆತ್ಮಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಸಂತರ ಅಮಾನುಷತೆಗೆ ತೆಗೆ ಉದಾಹರಣೆಯನ್ನು ಆರ್ವೆಲ್ಲರು ಎತ್ತಿತೋರಿಸಿದ್ದಾರೆ.... "On three occasions he (Gandhi) was willing to let his wife or a child die rather than administer the animal food prescribed by the doctor."

ಇಂಥದೇ ಇನ್ನೊಂದು ಪ್ರಸಂಗ: ಎರಡನೆ ಮಹಾಯುದ್ಧದ ಸಮಯ. ಹಿಟ್ಲರನಿಂದ ಲಕ್ಷಗಟ್ಟಲೆ ಯಹೂದಿಗಳು ಗ್ಯಾಸ್-ಛೇಂಬರಿನಲ್ಲಿ ಸಾಯುತ್ತಿದ್ದಾಗ ಅಹಿಂಸೆಯ ಮಹಾದೂತರಾದ ಗಾಂಧೀಜಿಯನ್ನು "ಯುದ್ಧ ಮಾಡದೆ ಈ ಯಹೂದಿಗಳನ್ನು ಉಳಿಸುವ ಬಗೆ ಹೇಗೆ?" ಎಂದು ಪ್ರಶ್ನಿಸಲಾಯ್ತು. "ಜರ್ಮನಿಯ ಯಹೂದಿಗಳೆಲ್ಲ ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳಬೇಕು. ಇದರಿಂದ ಜಗತ್ತಿನ ಹಾಗೂ ಜರ್ಮನಿಯ ಜನರನ್ನು ಹಿಟ್ಲರನ ಹಿಂಸೆಯ ವಿರುದ್ಧ ಎಚ್ಚರಿಸಬಹುದು" ಎಂದು ಗಾಂಧೀಜಿ ಉತ್ತರವಿತ್ತರು. ಯುದ್ಧ ಮುಗಿದ ನಂತರವೂ ಗಾಂಧೀಜಿ ತನ್ನ ಅಭಿಪ್ರಾಯವನ್ನು ಸಮರ್ಥಿಸುತ್ತ "ಅಂತೂ ಆ ಯಹೂದಿಗಳು ಸತ್ತದ್ದಂತೂ ನಿಜ. ಅದರ ಬದಲು ಅವರು ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡು ಪರಿಣಾಮಕಾರಿಯಾಗಿ ಸಾಯಬಹುದಿತ್ತು" ಎಂದರು. ಈ ಹೇಳಿಕೆಯ ಹಿಂದಿನ ಅಮಾನುಷತೆ ಒತ್ತಟ್ಟಿಗಿರಲಿ, ಗಾಂಧೀಜಿ ಇನ್ನೊಂದು ಮಹತ್ವದ ಅಂಶವನ್ನು ಇಲ್ಲಿ ಮರೆತಿದ್ದಾರೆ ಎಂಬುದನ್ನು ಜಾರ್ಜ್‌ಆರ್ವೆಲ್ ಒತ್ತಿತೋರಿಸಿದ್ದಾರೆ. ಎಲ್ಲಿ ಪ್ರಜಾಪ್ರಭುತ್ವವಿಲ್ಲವೋ, ಎಲ್ಲಿ ಪತ್ರಿಕಾಸ್ವಾತಂತ್ರ್ಯವಿಲ್ಲವೋ ಅಂಥ ದೇಶಗಳಲ್ಲಿ ಜನರನ್ನು "ಎಚ್ಚರಿಸುವುದು" ಹೇಗೆ? ಸರ್ಕಾರದ ವಿರೋಧಿಗಳು ಇದ್ದಕ್ಕಿದ್ದಂತೆ ನಡುರಾತ್ರಿಯಲ್ಲಿ ಕಣ್ಮರೆಯಾಗಿ ಮತ್ತೆಂದೂ ಕಾಣದಂತಾಗುವ ನಿರಂಕುಶಪ್ರಭುತ್ವವಿರುವಲ್ಲಿ ಬಲವಾದ ಜನಾಭಿಪ್ರಾಯವನ್ನು ಮೂಡಿಸುವುದು ಹೇಗೆ? ಸಾಮೂಹಿಕ ಚಳುವಳಿಗಳನ್ನು ಸಂಘಟಿಸುವುದು ಹೇಗೆ? "Is there a Gandhi in Russia at this moment? And if there is, what is he accomplishing?" ಎಂದು ಆರ್ವೆಲ್ ಕೇಳುತ್ತಾರೆ. ಆದ್ದರಿಂದ ಅಹಿಂಸೆಯಿಂದ ಎಲ್ಲವನ್ನೂ ಸಾಧಿಸಬಹುದು ಎಂಬುದು ಮೂರ್ಖತನದ ಮಾತಾದೀತು!

ಎರಡನೆ ಮಹಾಯುದ್ಧದ ಕಾಲದಲ್ಲಿ ಭಾರತದ ವ್ಹಾಯಿಸ್‌ರಾಯ್ ಆಗಿದ್ದ ಲಿತ್ ಲಿತ್‌ಗೋ ಅವರಿಗೆ ಗಾಂಧೀಜಿ ಅಹಿಂಸೋಪದೇಶ ಮಾಡುತ್ತ "ನೀವು (ಬ್ರಿಟಿಶರು) ಜರ್ಮನರ ವಿರುದ್ಧ ಶಸ್ತ್ರಾಸ್ತ್ರಗಳಿಂದ ಯುದ್ಧ ಮಾಡಬೇಡಿರಿ" ಎಂದರು. Spiritual force (Soul force) ನಿಂದ ಎಂಥವರನ್ನೂ ಗೆಲ್ಲಬಹುದು ಎಂಬುದು ಗಾಂಧಿ ವಾದ. ಲಿನ್‌ಲಿತ್‌ಗೊ ಅವರು ಈ ಗಾಂಧೀ ಎಂಬ ವಿಚಿತ್ರ ಮನುಷ್ಯನ ಮಾತು ಕೇಳಿ ಶಾಕ್ ಆಗಿ ಕುರ್ಚಿಯಲ್ಲಿ ಕುಸಿಳಿತು ಕುಬಿಟ್ಟರಂತೆ ! ಅಟಂಬಾಂಬ್ ದಾಳಿಯನ್ನು 'ಪ್ರಾರ್ಥನಾಭರಿತ ಕ್ರಿಯೆ' (Prayerful action) ಯಿಂದ ಎದುರಿಸಬೇಕು ಎಂದರು ಗಾಂಧೀಜಿ. ಆದರೆ ತಮ್ಮ ಎಲ್ಲ Soul force, ಅಹಿಂಸೆಗಳಿಂದ ಜಿನ್ನಾರನ್ನು ಗೆಲ್ಲುವದು ಗಾಂಧೀಜಿಗೆ ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯಾನಂತರ ಭಾರತ ತನ್ನೆಲ್ಲ ಸೈನ್ಯವನ್ನು ಕಳಚಿ ಕೈಬಿಡಬೇಕು ಎಂದರು.ಸೈನ್ಯವಿಲ್ಲದೇ ಭಾರತ ಪ್ರಾರ್ಥನಾ ಭರಿತಕ್ರಿಯೆಯಿಂದ ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕು !? ಗಾಂಧೀಜಿಯ ದೃಷ್ಟಿಯಲ್ಲಿ ಆಕಳು ಸ್ವಾತಂತ್ರ್ಯಕ್ಕಿಂತ ದೊಡ್ಡದು. ಆದರೆ ಹಾಲು ದೇಹದಲ್ಲಿನ ಲೈಂಗಿಕ ಆಸೆಗಳನ್ನು ಎಚ್ಚರಿಸುತ್ತದೆ ಎಂದು ದೂರಿದರು. ಆದರೂ ಸ್ವತಃ ಮೇಕೆಯ ಹಾಲನ್ನು ಕೊನೆಯವರೆಗೆ ಕುಡಿಯುತ್ತಿದ್ದರು. ಹಾಗೂ ಹರೆಯದ ತರುಣಿಯರೊಂದಿಗೆ ಬೆತ್ತಲೆ ಮಲಗಿ ಬ್ರಹ್ಮಚರ್ಯ ಪರೀಕ್ಷೆ (ಅಸಿಧಾರಾವೃತ?) ಮಾಡುತ್ತಿದ್ದರು. ಈ ಬ್ರಹ್ಮಚರ್ಯ ಪರೀಕ್ಷೆ ಮನೋವಿಜ್ಞಾನಿಗಳಿಗೆ ಒಳ್ಳೆಯ ವಸ್ತುವಾಗಬಹುದು. ಹರೆಯದಲ್ಲಿ ಹಟದಿಂದಾಗಿ ಪಾಲಿಸಿದ ಬ್ರಹ್ಮಚರ್ಯಕ್ಕೆ ಪ್ರಾಯಶ್ಚಿತ್ತವೆಂದು ಮುಪ್ಪಿನಲ್ಲಿ ತರುಣಿಯರೊಡನೆ ಮಲಗುತ್ತಿದ್ದರೇನೋ! ಗಾಂಧೀಜಿ ರೇಲ್ವೆ. ಹಡಗು.ಆಸ್ಪತ್ರೆಗಳು ಪಾಪಮಯ ಜೀವನವನ್ನು ಪ್ರೋತ್ಸಾಹಿಸುತ್ತವೆ ಎಂದು ನಂಬಿದ್ದರು. ಹಿಂಸೆ ಅಹಿಂಸೆಯ ಬಗೆಗಿನ ಗಾಂಧೀವ್ಯಾಖ್ಯಾನಗಳಂತೂ ಗೊಂದಲದ ಪರಮಾವಧಿಗೆ ನಿದರ್ಶನಗಳು. ತನ್ನನ್ನೇ ತಾನು ಹಿಂಸೆಗೊಳಪಡಿಸಿಕೊಳ್ಳುವ 'ಆತ್ಮಾರ್ಪಣ' ವು ಹಿಂಸೆಯಲ್ಲ: ಹಾಗೂ Mercy Killing ಹಿಂಸೆಯಲ್ಲ ಎಂದವರು Ahimsa means not to hurt any living creature by thought, word or deed even for the suppo:ed benefit of that creature ಎನ್ನುತ್ತಾರೆ. ಹಿಂಸೆಯನ್ನು ಬೋಧಿಸುವ 'ಭಗವದ್ಗೀತೆ' ಗಾಂಧೀಜಿಗೆ ಮಹಾಪವಿತ್ರ ಗ್ರಂಥವಾಗಿ ಕಂಡಿದೆ.

ಗಾಂಧೀಜಿ ಜನನ ನಿಯಂತ್ರಣದ ಕೃತಕ ವಿಧಾನಗಳನ್ನು ಪಾಪವೆಂದು ಕರೆಯುತ್ತಾರೆ. ಗುಹ್ಯರೋಗ (Veneral diseases)ಗಳಿಗೆ ಚಿಕಿತ್ಸೆ ನೀಡಬಾರದು ಯಾಕೆಂದರೆ ಆ ರೋಗಗಳು ವ್ಯಭಿಚಾರ ಹಾಗೂ ಅವಿವಾಹಿತರ ಮಿಲನದಿಂದ ಜನಿಸಿದ ಪಾಪಗಳು ಎಂಬುದು ಗಾಂಧೀಜಿಯ ಅಂಬೋಣ. ಗುಹ್ಯರೋಗಗಳು ವ್ಯಭಿಚಾರದಿಂದ ಮಾತ್ರ ಬರುತ್ತವೆಂಬುದು ಮೊದಲನೆಯ Fallacy. ವ್ಯಭಿಚಾರದಿಂದ ಗುಹ್ಯರೋಗ ಬರಲೇಬೇಕೆಂಬ ನಿಯಮವೇನೂ ಇಲ್ಲವಲ್ಲ ! ಜಗತ್ತಿನ ಅನೇಕ ಮೇಧಾವಿಗಳು ಗುಹ್ಯರೋಗದಿಂದ ಬಳಲಿದ್ದಾರೆ (ಉದಾ : ಟಾಲ್‌ಸ್ಟಾಯ್‌ನಿಗೆ

ಗನೊರಿಯಾ ಹಾಗೂ ಸಿಫಿಲಿಸ್ ರೋಗಗಳಿದ್ದವು.) ಅಂಥವರಿಲ್ಲದೆ ಹೋಗಿದ್ದರೆ ಜಗತ್ತು ನೂರು ಪಟ್ಟು ಬಡವಾಗುತ್ತಿತ್ತು ಅಥವಾ ಇತಿಹಾಸ ಬೇರೆಯೇ ಆಗಿರುತ್ತಿತ್ತು. ಅಲ್ಲದೆ ಗಾಂಧೀಜಿ ನಂಬುವ ಪೂರ್ವಾರ್ಜಿತ ಕರ್ಮದ ಥಿಯರಿ ಪ್ರಕಾರ ಎಲ್ಲ ರೋಗಗಳೂ ಪಾಪದ ಪರಿಣಾಮಗಳು ಎಂದು ಯಾವುದಕ್ಕೂ ಮದ್ದು ನೀಡ ಬಾರದು, ಎನ್ನಬಹುದಲ್ಲವೇ ?

ನಿಮಗೆ ಎರಡು ಮಕ್ಕಳು ಬೇಕು ಎಂದು ನಿರ್ಧರಿಸಿದರೆ ನೀವು ಜೀವನದಲ್ಲಿ ಎರಡೇ ಸಲ ಸಂಭೋಗ ಮಾಡಬೇಕು ಎಂದು ಗಾಂಧೀಜಿಯ ನಿಯಮ. ಈ ಬಗ್ಗೆ ಗಂಡಹೆಂಡಿರಲ್ಲಿ ಒಮ್ಮತವಿಲ್ಲದಿದ್ದರೆ ಅಂಥ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಗಾಂಧೀಜಿ ವಿವರಿಸುವದಿಲ್ಲ. ವಿಧವಾ ವಿವಾಹಕ್ಕೆ ಗಾಂಧೀಜಿ ಸಮ್ಮತಿ ಸಿದ್ದಾರೆ; ಆದರೆ ಅವರ ಪ್ರಕಾರ "ವಿಧವೆ" ಎಂದರೆ ಬಾಲವಿಧವೆ ಮಾತ್ರ. ಇಂಥ ಬಾಲವಿಧವೆ (Child-widows) ಯರನ್ನು ಮಾತ್ರ ಮದುವೆ ಮಾಡಿಕೊಳ್ಳಿ ಎಂದು ಯುವಕರಿಗೆ ಕಿವಿಮಾತು ಹೇಳಿದ್ದಾರೆ. ಆದರೆ ಬಾಲವಿಧವೆಯರಲ್ಲದ ಇತರ ವಿಧವೆ ಯರು ಮದುವೆಯಾಗುವದು ಗಾಂಧೀಜಿಗೆ ಅಷ್ಟೇನೂ ಪ್ರೀತಿಯ ವಿಷಯವಲ್ಲ. "The word 'widow' In Hinduism has a sacred odour about it. I am a worshipper of true widow...." "I do believe that a real Hindu widow is a treasure. She is one of the gifts of Hinduism to humanity" ಎಂದು ಉದ್ಗಾರವೆತ್ತಿದ್ದಾರೆ.

ಮಹಿಳಾ ಶಿಕ್ಷಣದ ಬಗ್ಗೆ ಗಾಂಧೀಜಿಯ ವಿಚಾರಗಳು ಸಂಪ್ರದಾಯ ಬಿಟ್ಟು ಮೇಲೇರುವದಿಲ್ಲ. ಮಹಿಳೆಗೆ ಮನೆ, ಮಕ್ಕಳು, ಮನೆಗೆಲಸಗಳ ಬಗ್ಗೆ ಶಿಕ್ಷಣ ಕೊಡ ಬೇಕು; ಮಹಿಳೆಯರು ಅನ್ನ ಸಂಪಾದನೆಗಾಗಿ ಹೊಲಗೆಲಸ ಕಾರ್ಖಾನೆಗಳಲ್ಲಿ ದುಡಿ ಯುವದು ತಪ್ಪು. ಆದರೆ ಮನೆ, ಮಕ್ಕಳು ಇದರ ಜೊತೆಗೆ ಹೊರಗೆಲಸವನ್ನೂ ನಿಭಾಯಿಸಲು ಸಾಧ್ಯವಾದರೆ ಮಾತ್ರ ಮಹಿಳೆ ಹೊರಗೆ ದುಡಿಯಬಹುದು ಎಂಬುದು ಗಾಂಧೀಜಿಯ ಅಭಿಪ್ರಾಯ. "If millions of women are forced to forsake the hearth and become bread-winners, it is wrong... their (women's) primary function is to look after the home" ಮಹಿಳೆಯರು ಯಾವದೇ ಕಾರಣಕ್ಕೆ ರೈಫಲ್ ಹಿಡಿಯುವದಂತೂ ಮಹಾ ಪಾಪ ! "It is a reversion to barbarity and the beginning of the end" ಎನ್ನುತ್ತಾರೆ ಗಾಂಧೀಜಿ, ತಮ್ಮ ದೇಶ ರಕ್ಷಣೆಗಾಗಿ ಗಂಡಸರಷ್ಟೇ ಜವಾಬ್ದಾರಿಯಿಂದ ರೈಫಲ್ ಹಿಡಿದು ಹೋರಾಡುವ ಇಸ್ರೇಲಿ ಯುವತಿಯರು ಗಾಂಧೀಜಿಗೆ ಉತ್ತರ ಹೇಳಬಹುದು,

ಕತ್ತಲ ಕರ್ಮಕಾರಿಗಳು

ಆರ್. ಸುವರ್ಣ ಕಾಡನಕುಪ್ಪೆ

ಸಂಜೆಗತ್ತಲ ಬಯಲಿನಾಳದಲೆಲ್ಲೋ
ಹೆಸರರಿಯದ ಹಕ್ಕಿಯ ಒಂಟಿ ಕೂಗು
ನಿರಂತರ
ಮೌನದೊಂದಿಗೆ ಮಾತು, ನಡುವೆ
ತಪ್ಪೆಣಿಸಿದಂತೆ ಎಷ್ಟೋ ವೇಳೆ ಸುಮ್ಮನಿದ್ದು
ಮತ್ತದೇ ಪ್ರಾರಂಭಿಸಿ ಕತ್ತಲ ಕುಟುಕುತ್ತಿದೆ.
ಅದೇ ತಾನೆ ಗೋವುಗಳ ಬೀಳ್ಕೊಟ್ಟ ನೀಳ ರಸ್ತೆ
ಗೋಳು ಕರೆಯುತ್ತಿದೆ.

ಕತ್ತಲ ಗರ್ಭಕೆ ಜಾರಿದಂತೆಲ್ಲ
ಮಸಲತ್ತಿನ ಮುಸುಕು ಪೊರೆ ಕಳಚುತ್ತಾ
ಕಳಚುತ್ತಾ ಕತ್ತರಿಸಿ
ಕೊಂಬು, ಕೊಂಬೆ-ರೆಂಬೆಗಳಲೆಲ್ಲ ಋಣಗುಡುವ ಸಂಪತ್ತು
ಸಾಗಿಸುವ ತರಾತುರಿ.
ಬೆಳಗಿಂದ ಬಳಲಿ ಗಾಢ ನಿದ್ರೆಗೆ ಜಾರಿರುವ ಪಕ್ಷಿಗಳ
ಅಣಕಿಸುವಂತೆ ಕಿತ್ತೆಸೆದು ಮೌನವ,
ಕರಾಳ ವಿಕರಾಳ ಕೃತ್ಯಗಳ
ಕತ್ತಲಲ್ಲೇ ಲೀಲಾ
ಜಾಲವಾಗಿ ನಿರ್ವಹಿಸುವ ಕರ್ಮ
ಕಾರಿಗಳ ಹೆಸರೇನೆಂದು ಹೇಳಬೇಕೆ ?

ಅಭಿವ್ಯಕ್ತಿ ಸ್ವಾತಂತ್ರ್ಯ : ಚೆರಬಂಡರಾಜು ಬಲಿ

ಮಂಗ್ಳೂರ ವಿಜಯ

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಇಂಡಿಯಾದ ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಒಂದೆಂಬುದಾಗಿ ಸೇರಿಸಿರುವುದು ಅತ್ಯಂತ ನಿಚ್ಚಳವಾಗಿದ್ದರೂ ಸಹ ಇಂಡಿಯಾದ ಹಿಂದಿನ ಅಳರಸರು ಹಾಗೂ ಇಂದಿನ ಆಡಳಿತಗಾರರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಮೇಲಿಂದ ಮೇಲೆ ಯತ್ನ ನಡೆಸುತ್ತಲೇ ಬಂದಿದ್ದಾರೆ. ಆಡಳಿತವನ್ನು ಅತ್ಯಂತ ಅಸಮರ್ಪಕವಾಗಿ ನಡೆಸುವವರೇ ಅಭಿವ್ಯಕ್ತಿ—ಪತ್ರಿಕಾ ಸ್ವಾತಂತ್ರ್ಯಗಳಂಥವುಗಳನ್ನು ಹತ್ತಿಕ್ಕಲು ಯೋಚಿಸುತ್ತಾರೆಂಬುದನ್ನು ನಾವು ಮನಗಂಡಿದ್ದೇವೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣಕ್ಕಾಗಿ ದೇಶಕ್ಕೆ 'ಪೂರ್ವಭಾವಿಯೆಂದು ಬಿಹಾರದಲ್ಲಿ ತಂದಿರುವ ಪತ್ರಿಕಾ ವಿಧೇಯಕ ಮಸೂದೆ ವಿರುದ್ಧ ದೇಶಾದ್ಯಂತ ಉಗ್ರವಾದ ಸಂಘಟಿತ ಪ್ರತಿಭಟನೆ ನಡೆದಿರುವ ಸರಿ ಸುಮಾರು ಕಾಲಾವಧಿಯಲ್ಲೇ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಕುಠಾರಾ ಘಾತದ ವಿರುದ್ಧ ಹೋರಾಟ ನಡೆಸುತ್ತಲೇ ಆಂಧ್ರ ಪ್ರದೇಶದ ಸುವಿಖ್ಯಾತ ದಿಗಂಬರ ಕವಿ ಚೆರಬಂಡರಾಜು ಮೃತರಾಗಿದ್ದಾರೆ.

ಹೈದರಾಬಾದ್ ಜಿಲ್ಲೆಯ ಅಂಕುಶಪುರಂ ಗ್ರಾಮದ ಬಡ ರೈತ ಬಿ. ಶಿವಯ್ಯ ಅವರ ಮಗ ಬದ್ದಂ ಭಾಸ್ಕರ ರೆಡ್ಡಿ. ಬಡತನದಲ್ಲೇ ಬೆಳೆದ ಭಾಸ್ಕರ ರೆಡ್ಡಿ ಹಳ್ಳಿಗಾಡು ವಾತಾವರಣದ ಪ್ರಭಾವಕ್ಕೊಳಗಾಗಿ ಸಹಜವಾಗಿಯೇ ಬಾಲ್ಯದಿಂದಲೂ ದುಡಿವ ಜನತೆಯ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದ್ದರು. ಇಂಡಿಯಾದ ದುಡಿಯುವ ಜನತೆ ಮೂಲಭೂತ ಅವಶ್ಯಕತೆಗಳಿಗಾಗಿಯೂ ಸಹ ಒದ್ದಾಡುತ್ತಿರುವುದನ್ನು ಕಂಡು ವಿಷಣ್ಣರಾಗುತ್ತಿದ್ದರು: ಕ್ರುದ್ಧರಾಗುತ್ತಿದ್ದರು. ಹೈದರಾಬಾದಿನ ಮಲಕಪೇಟೆಯಲ್ಲಿಯ ಸರಕಾರಿ ಪ್ರೌಢ ಶಾಲೆಯಲ್ಲಿ ಅಧ್ಯಾಪಕರಾದ ಭಾಸ್ಕರ ರೆಡ್ಡಿ ಶೋಷಿತ ಜನತೆಯನ್ನು ಕವನ–ಕಥೆ–ಹಾಡುಗಳ ಮೂಲಕ ಎಚ್ಚರಿಸತೊಡಗಿದರು. ತಮ್ಮ ೨೧ನೇ ವಯಸ್ಸಿನಲ್ಲೇ "ಬಿಡಿ ನನ್ನ ಕಟಕಟೆಗೆ" ಎನ್ನುವ ಕ್ರಾಂತಿಕಾರೀ ಕವಿತೆಯ ಮೂಲಕ ತೆಲುಗು ಭಾಷಾ ಸಾಹಿತ್ಯಾಭ್ಯಾಸಿಗಳ, ವಿಶೇಷವಾಗಿ ಜನಪರ ಚಳುವಳಿಗಳೊಂದಿಗಿರುವವರ

ತೀವ್ರ ಗಮನ ಸೆಳೆದರು. ವರ್ದ್ಧಂ ಭಾಸ್ಕರರೆಡ್ಡಿ ಹೆಸರಿನ ಬದಲಾಗಿ ಚೆರಬಂಡರಾಜು ಹೆಸರಿನಿಂದ ಬರವಣಿಗೆ ಮುಂದುವರೆಸಿದರು. ಇದೇ ಕಾಲದಲ್ಲಿ ತೆಲುಗು ದಿಗಂಬರ ಪಂಥದಲ್ಲಿ ಮುಂದೆ ಪ್ರಖ್ಯಾತರಾದ ಕೆ. ಯಾದವರೆಡ್ಡಿ (ನಿಖಿಲೇಶ್ವರ) ಅವರ ಪರಿಚಯ ಚೆರಬಂಡರಾಜು ಅವರಿಗಾಯಿತು.

೧೯೬೫ರಲ್ಲಿ ಚೆರಬಂಡರಾಜು ಮುಂದಾಳುತನ ವಹಿಸಿ ದಿಗಂಬರ ಪಂಥ ಕಟ್ಟುವಲ್ಲಿ ತೊಡಗಿದರು. ಈ ಕ್ರಾಂತಿಕಾರೀ ಪಂಥ, ಸಾಹಿತ್ಯ ಸಾಮಾನ್ಯ ಜನರಿಗಾಗಿಯೇ ಹೊರತು ಹೊತ್ತು ಕಳೆಯಲು ಇರುವ ಸಾಧನವಲ್ಲ; ಸಾಹಿತ್ಯ ರಾಜಾಧಿರಾಜರ ಅಕಾಡೆಮಿ–ಪೀಠಗಳಿಂದ ಹೊರಗೆ ಬಂದು ದುಡಿಯುತ್ತ ತನ್ನ ಬೆವರು–ರಕ್ತದಿಂದ ದೇಶದ ಉತ್ಪಾದನೆಯಲ್ಲಿ ತೊಡಗಿರುವವರ ಜೀವನದೊಂದಿಗೆ ಬೆರೆಯುವ ಮೂಲಕ ಅವರ ದುಃಖ-ದುಮ್ಮಾನಗಳಿಗೆ ಸಂತೋಷ–ಆನಂದಗಳಿಗೆ ಮುಖವಾಣಿಯಾಗಬೇಕು ಎಂಬುವದನ್ನು ಪ್ರತಿಪಾದಿಸುತ್ತಿತ್ತು. ದಿಗಂಬರ ಪಂಥ ತೆಲಗು ಸಾಹಿತ್ಯ ಚರಿತ್ರೆಯಲ್ಲಿ ಗಮನಿಸಲೇಬೇಕಾದಂಥ ಮೆಟ್ಟಿಲಾಗಲು ಅದರ ಪ್ರಸಿದ್ಧ–ಮಹತ್ವದ ಕವಿಗಳಾದ ಜ್ವಾಲಾಮುಖಿ, ನಿಖಿಲೇಶ್ವರ, ನಗ್ನಮುನಿ, ಭೈರವಯ್ಯ, ಮಹಾಸ್ವಪ್ನ ಮತ್ತು ಚೆರಬಂಡರಾಜು ಅವರೇ ಕಾರಣ. ಆ ಪಂಥದ ಸಾಹಿತ್ಯದ ಮೌಲ್ಯಮಾಪನ ಮಾಡಿದಾಗ ಇಂದು ಅವರ ಮುಖಾಂತರ ಅರಾಜಕತಾವಾದವನ್ನು, ಉಗ್ರಗಾಮಿ ವಿಚಾರಗಳನ್ನು ಹರಡಲಾಗಿರುವುದು, ದಿಗಂಬರ ಕವಿಗಳಿಗೆ ದೇಶದ ಸಾಮಾಜಿಕ ಆರ್ಥಿಕ ಸಮಸ್ಯೆಗಳ ಬಗೆಗಿನ ಚಾರಿತ್ರಿಕ ಜ್ಞಾನದ ಕೊರತೆ ಇತ್ಯೆಂಬುದು ಕಂಡು ಬರುವುದಾದರೂ ಆ ಕಾಲದಲ್ಲಿ ದಿಗಂಬರ ಕವಿಗಳು 'ಸಾಹಿತ್ಯ ಜನರಿಗಾಗಿ' ಎಂದು ಪ್ರತಿಪಾದಿಸಿದುದು, ವ್ಯವಸ್ಥೆಯ ವಿರುದ್ಧ ತಮ್ಮ ಉಗ್ರ ಸಿಟ್ಟನ್ನು ವ್ಯಕ್ತಪಡಿಸಿರುವುದು, ಪ್ರಸ್ಥಾಪಿತಮೌಲ್ಯಗಳ ವಿರುದ್ಧ ಬಂಡಾಯ ಹೂಡಲು ಜನತೆಗೆ ಕರೆನೀಡಿರುವುದು ಇತ್ಯಾದಿ ಅತ್ಯಂತ ಮಹತ್ವದ ಅಂಶಗಳನ್ನು ತಳ್ಳಿ ಹಾಕಲು ಸಾಧ್ಯವೇ ಇಲ್ಲ. ೧೯೬೭-೧೯೭೦ ರ ಸುಮಾರಿಗೆ ನಡೆದ ನಕ್ಸಲ್‌ಬಾರಿ ಆಂದೋಲನ ಹಾಗೂ ಆಂಧ್ರದ ಶ್ರೀಕಾಕುಲಂ ರೈತ ಚಳವಳಿ ಆಂಧ್ರದ ಜನಪರ ಬರಹಗಾರರನ್ನು ತಟ್ಟದೇ ಇರಲಿಲ್ಲ. ಪರಿಣಾಮವೆಂಬಂತೆ ದಿಗಂಬರ ಪಂಥದ ಕವಿಗಳು ತಮ್ಮ ವೇದಿಕೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಗಮನ ಹರಿಸಿ ಕಾರ್ಯೋನ್ಮುಖರಾದರು. ೧೯೭೦ರಲ್ಲಿ ಆಂಧ್ರದಲ್ಲಿ ವಿಪ್ಲವಿ ರಚಯಿತಾಲ ಸಂಘಮು (ಕ್ರಾಂತಿಕಾರೀ ಲೇಖಕರ ಸಂಘ) ರಚನೆಯಾಗಿ ಆಂಧ್ರದ ಪ್ರಖ್ಯಾತ ಜನಪರ ಲೇಖಕರಾದ ಶ್ರೀ ಕೋಟಾಪತಿ ಗಂತಿ, ರಚಕೊಂಡಾ, ರಮಣಾ ರೆಡ್ಡಿ ಕೆ.ವಿ. ಮುಂತಾದವರೂ ಸಹ ಕಲೆತು ಜನಜಾಗೃತಿಗಾಗಿ ಸಭೆ–ಕಾರ್ಯಕ್ರಮ-ಹಾಡು ಇತ್ಯಾದಿಗಳಲ್ಲಿ ತೊಡಗಿದರು. ಇಂದಿಗೂ ಸಹ ಆಂಧ್ರದಲ್ಲಿ ಈ ಲೇಖಕರ ಸಂಘದೊಂದಿಗೆ ನೂರಾರು ಜನ ಜನಪರ ಲೇಖಕರು ಇದ್ದಾರೆ. ದಿಗಂಬರ ಪಂಥ ದಂಥ ಸಾಹಿತ್ಯ ಜನಪರ ಆಶಯಗಳೊಂದಿಗೆ ಬೆಳೆಯುತ್ತಿರುವುದರಿಂದ 'ಸಾಹಿತ್ಯಕ

ಮೌಲ್ಯಗಳು ಇಂಥ ಸಾಹಿತ್ಯದಲ್ಲಿ ಇರದು' ಎಂಬಂಥ ಆಪಾದನೆಯನ್ನು ಸಾಮಾನ್ಯವಾಗಿ 'ಪ್ಯೂರ್ ಲಿಟರೇಚರ್' ಪ್ರತಿಪಾದಕರು ಮಾಡುತ್ತಾರೆ, ಆದರೆ ಇಂಥ ಆಪಾದನೆಯಲ್ಲಿ ಎಳ್ಳಷ್ಟೂ ಸತ್ವವಿಲ್ಲವೆಂಬುದನ್ನು, ದಿಗಂಬರ ಕಾವ್ಯವೇ ಮೊದಲಾದ ಜನಪರ ಆಶಯಗಳ ಪರವಾದ ಎಲ್ಲಾ ಸಾಹಿತ್ಯಗಳು ಖಂಡಿತಕ್ಕೂ ಒಳಗೊಂಡಿರುತ್ತವೆಂಬುದನ್ನು ಇಂದಿನವರೆಗಿನ ಎಲ್ಲಾ ಜನಪರ ಸಾಹಿತ್ಯಗಳು ತೋರಿಸಿವೆ.

ಚೆರಬಂಡರಾಜು ಬರವಣಿಗೆಯ ಜೀವಾಳ ಜನಪದ ಆಶಯ. ಜಾನಪದ ಅಂತಃಸತ್ವದ ಕಾರಣದಿಂದಲೇ ಇಂದಿಗೂ ಸಹ ಹಳ್ಳಿಗಾಡುಗಳಲ್ಲಿಯೂ ಚೆರಬಂಡರಾಜು ವಚನಗಳನ್ನು ಹಾಡುತ್ತಿದ್ದಾರೆ. ಹತ್ತಾರು ಭಾಷಣಗಳು ಮಾಡಲಾರದ ಪರಿಣಾಮವನ್ನು ಚೆರಬಂಡರಾಜು ಅವರ ಒಂದೆರಡು ಗೀತೆಗಳು ಮಾಡುತ್ತವೆ.

ಚೆರಬಂಡರಾಜು ಇದುವರೆಗೆ ಗಮ್ಯಂ, ಗೌರಮ್ಮ ಕಲಲು, ಮುಟ್ಟಡಿ, ಪಲ್ಲವಿ, ದಿಕ್ಸೂಚಿ, ಎಂಬ ಕವನ ಸಂಕಲನಗಳನ್ನು, ಮಾ ಪಲ್ಲೆ, ಮರೋ ಪ್ರಸ್ಥಾನಂ ಎಂಬ ಎರಡು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ಇಪ್ಪುಡು ವಿಸ್ತುನಾಗಾಲಿ' ಎಂಬ ಕಥಾ ಸಂಕಲನದಲ್ಲಿಯ 'ಚಿರಂಜೀವಿ' ಕತೆಯ ಸಲುವಾಗಿಯೇ ಎಲ್ಲಾ ಮುದ್ರಿತ ಪುಸ್ತಕಗಳನ್ನು ಸರ್ಕಾರ ವಶಪಡಿಸಿಕೊಂಡಿತು. ಚೆರಬಂಡರಾಜು ಬರೆದಿರುವ ಮೂರು ಏಕಾಂಕಗಳನ್ನು ಹಾಗೂ ಒಂದು ದೀರ್ಘ ನಾಟಕವನ್ನು ಕ್ರಾಂತಿಕಾರೀ ಲೇಖಕರ ಸಂಘ ಪ್ರಕಟಿಸಲಿದೆ. ಅವರ ಇನ್ನೂ ಎರಡು ಕಾದಂಬರಿಗಳು ವಿವಿಧ ಹಂತಗಳಲ್ಲಿ ಪ್ರಕಟವಾಗುತ್ತಿವೆ. ಚೆರಬಂಡರಾಜು ವಿಶೇಷತೆಯೆಂದರೆ ತಮ್ಮ ಬಹುತೇಕ ಪುಸ್ತಕಗಳನ್ನು ತಾವೇ ಪ್ರಕಟಿಸಿದ್ದಾರೆ.

ಚೆರಬಂಡರಾಜು ಕಳೆದ ೧೦ ವರುಷಗಳಿಂದ ವಿವಿಧ ಜೈಲುಗಳಲ್ಲಿ ಹಾಗೂ ವಿವಿಧ ಕೋರ್ಟುಗಳ ಅಂಗಳದಲ್ಲಿ ಕಳೆದಿದ್ದಾರೆ. ಒಬ್ಬ ಮಗ, ಒಬ್ಬ ಮಗಳು, ವಯಸ್ಸಾದ ತಾಯಿ ಮತ್ತು ಪತ್ನಿ ಶಾಮಲಾ ಇರುವ ಚೆರಬಂಡರಾಜು ಪರಿವಾರ ಬಡತನದಲ್ಲೇ ಕೈ ತೊಳೆಯುತ್ತಿರುವಾಗಲೇ ೧೯೭೧ ರಲ್ಲಿ ಚೆರಬಂಡರಾಜು ಅವರನ್ನು ಬಂಧಿಸಲಾಯ್ತು-ಸುರಕ್ಷಣಾ ಮುಂಜಾಗರೂಕತಾ ಕಾನೂನಿನನ್ವಯ. ೧೯೭೩ರಲ್ಲಿ ಮತ್ತೊಮ್ಮೆ ಇದೇ ಕಾನೂನಿನನ್ವಯ ಬಂಧಿಸಲಾಯಿತು. ೧೯೭೪ ರಲ್ಲಿ ಹೈದರಾಬಾದ್‌ನಲ್ಲಿ ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ವಿಶ್ವ ತೆಲುಗುಸಮ್ಮೇಳನ ನಡೆಸಿದಾಗ ಚೆರಬಂಡರಾಜು ಮತ್ತಿತರ ಗೆಳೆಯರು "ಪ್ರತಿಗಾಮಿ ಶಕ್ತಿಗಳು ಅಧಿಕಾರದಲ್ಲಿರುವ ಜನರನ್ನು ಓಲೈಸಲು ಏರ್ಪಡಿಸಿದ ಸಮ್ಮೇಳನವಿದು" ಎಂದು ಬಹಿರಂಗವಾಗಿ ಸಾರಿದ್ದರು. ಆಗ ಮತ್ತೆ ಬಂಧಿತರಾದ ಚೆರಬಂಡರಾಜು ತಮ್ಮ ಸ್ನೇಹಿತರೊಂದಿಗೆ ತುರ್ತು ಪರಿಸ್ಥಿತಿ ಮುಗಿಯುವವರೆಗೆ ಜೈಲಿನಲ್ಲಿದ್ದರು. ೧೯೭೧ ರಿಂದ ೧೯೮೨ ರವರೆಗೆ ಚೆರಬಂಡರಾಜು ಸರಿಸುಮಾರು ೫ ವರುಷಕ್ಕಿಂತ ಹೆಚ್ಚಿಗೆ ಜೈಲಿನಲ್ಲಿದ್ದರು.

೧೯೭೪ರಲ್ಲಿ ಇವರ ಮೇಲೆ ನಡೆಸಲಾದ ಸಿಕಂದರಾಬಾದ್ ಷಡ್ಯಂತ್ರ ಪ್ರಕರಣವು ಭಾರತೀಯ ನ್ಯಾಯಾಲಯದ ಇತಿಹಾಸದಲ್ಲಿ ಅಪೂರ್ವವಾದುದು. ಈ ಪ್ರಕರಣದಲ್ಲಿ ಆಪಾದಿತರಾಗಿ CPI (ML) ನ ಕೊರಡಪಲ್ಲಿ ಸೀತಾರಾಮಯ್ಯ, ಕೆ.ಜಿ. ಸತ್ಯಮೂರ್ತಿ, ಬರಹಗಾರರಾದ ವರವರರಾವ್, ತ್ರಿಪ್ಪುರನ್ನೈನಿ, ಎಂ.ಟಿ. ಖಾನ್, ಚೆರಬಂಡರಾಜು, ಟಿ. ಮಧುಸೂದನ ರಾವ್, ಕೆ.ವಿ. ರಮಣಾ ರೆಡ್ಡಿ, ರಂಗನಾಥಂ ಇವರು ಸೇರಿದ್ದರು. ಈ ಪ್ರಕರಣದಲ್ಲಿ ೬೦೦ ಜನ ಸಾಕ್ಷಿಗಳಿರುವರೆಂದು ಉಲ್ಲೇಖಿಸಲಾಗಿರುವುದಾದರೂ ಒಂದು ವಿಶೇಷ ಕೋರ್ಟಿನಲ್ಲಿ ಈ ಪೈಕಿ ೫೦ಸಾಕ್ಷಿಗಳನ್ನೂ ಸಹ ಹಾಜರುಪಡಿಸುವುದು ಕಳೆದ ಏಳು ವರುಷಗಳಲ್ಲಿ ಸಾಧ್ಯವಾಗಿಲ್ಲ.

ಚೆರಬಂಡರಾಜು ಅವರನ್ನು ಸರ್ಕಾರಿ ಶಾಲೆಯ ಅಧ್ಯಾಪಕ ಹುದ್ದೆಯಿಂದ ಕಿತ್ತು ಹಾಕಲಾದಾಗ ಆಂಧ್ರಪ್ರದೇಶದ ರಾಜ್ಯಪಾಲರು "ನೀವು. ಶ್ರೀ ವದ್ದಂ ಭಾಸ್ಕರರೆಡ್ಡಿ ಅಲಿಯಾಸ್ ಚೆರಬಂಡರಾಜು. ಅಧ್ಯಾಪಕ, ಸರ್ಕಾರಿ ಪ್ರೌಢಶಾಲೆ, ಮಲಕಪೇಟೆ, ಹೈದರಾಬಾದ್, ರಾಜ್ಯ ಸರ್ಕಾರದ ನೌಕರಿಯಲ್ಲಿರಲು ಯೋಗ್ಯರಿಲ್ಲ; ನಿಮ್ಮನ್ನು ತಕ್ಷಣದಿಂದ ನೌಕರಿಯಿಂದ ಕಿತ್ತು ಹಾಕಬೇಕೆಂಬುದು ರಾಜ್ಯಪಾಲರ ವಿಚಾರವಾಗಿದೆ. ರಾಜ್ಯದ ಸುರಕ್ಷಿತತೆಗಾಗಿ ಭಾರತ ಸಂವಿಧಾನದ ೩೧೧ನೇ ಕಲಮು (೨ನೇ ಪರಿಚ್ಛೇದ) ಪ್ರಕಾರ ನಿಮ್ಮ ಪ್ರಕರಣದ ಇಲಾಖಾ ತನಿಖೆಯು ಆಗಬೇಕಿಲ್ಲ ಎಂಬುದೂ ಸಹ ರಾಜ್ಯಪಾಲರ ವಿಚಾರವಾಗಿದೆ. ಆದ್ದರಿಂದ ತಕ್ಷಣದಿಂದ ನಿಮ್ಮನ್ನು ನೌಕರಿಯಿಂದ ಕಿತ್ತು ಹಾಕಲು **ರಾಜ್ಯಪಾಲರಿಗೆ ಸಂತೋಷವೆನಿಸುತ್ತದೆ.**" ಎಂಬ ಆದೇಶ ನೀಡಿದರು. ಇದೇ ರೀತಿಯ ಆದೇಶವನ್ನು ಆಂಧ್ರದ ರಾಜ್ಯಪಾಲರ ಕಚೇರಿಯಿಂದ ವರಂಗಲ್‌ನ ಅಧ್ಯಾಪಕ ಶ್ರೀ ಲೋಚನ ಅವರಿಗೂ ಕೂಡ ಬಂದಿದೆ. ಚೆರಬಂಡರಾಜು ೧೫ ವರುಷ ಸರ್ಕಾರಿ ಸೇವೆ ಸಲ್ಲಿಸಿದ್ದಾರೆ. ಅಧಾಪಕ ಹುದ್ದೆಯಲ್ಲಿರುವ ಇವರು ಏನಾದರೂ ತಪ್ಪುಮಾಡಿದ್ದರೆ ಇಲಾಖಾ ಮುಖ್ಯಾಧಿಕಾರಿಗಳು ಕಾರಣ ಕೇಳುವ ಮೆಮೋ (Show Cause Notice) ಕೊಡಬಹುದಿತ್ತು. ಇಲಾಖಾ ತನಿಖೆ (Departmental Enqulry) ನಡೆಸಬಹುದಿತ್ತು. ಕನಿಷ್ಟ ಚೆರಬಂಡರಾಜು ಮಾಡಿರುವ ಅಪರಾಧವಾದರೂ ಏನು ಎಂಬುದನ್ನು ತಿಳಿಸಿ ಈ ಬಗ್ಗೆ ಅವರು ತಮ್ಮ ವಿವರಣೆ (Explanation) ನೀಡುವ ಅವಕಾಶ ನೀಡಬೇಕಾಗಿತ್ತು. ಸರ್ಕಾರಿ ನೌಕರರನ್ನು ಸೇವೆಯಿಂದ ಕಿತ್ತು ಹಾಕುವ ಮುನ್ನ ಸಂವಿಧಾನದ ೩೧೧ ನೇ ಕಲಮು ೨ನೇ ಪರಿಚ್ಛೇದದ ಪ್ರಕಾರ ಇಲಾಖಾ ತನಿಖೆ ನಡೆಸುವುದು ಅವಶ್ಯ. ಲಂಚಕೋರ ಅಧಿಕಾರಿಗಳೂ ಸಹ ಈ ಕಲಮಿನ ಲಾಭ ಪಡೆಯುತ್ತಾರೆ. ಚೆರಬಂಡರಾಜು ಕ್ರಿಮಿನಲ್ ಅಪರಾಧ ಎಸಗಿದ್ದರೆ ಅವರನ್ನು ಅಂಥ ಪ್ರಕರಣದನ್ವಯ ಬಂಧಿಸಬೇಕಿತ್ತು; ಕೋರ್ಟಿನ ಮುಂದೆ ಹಾಜರ್‌ಪಡಿಸಿ ತಮ್ಮ ಪರ ವಾದಿಸುವ–ಪೋಲೀಸ್

ಸಾಕ್ಷಿಗಳನ್ನು ಪಾಟೀ ಸವಾಲಿಗೆ ಗುರಿಪಡಿಸುವ ಅವಕಾಶ ಒದಗಿಸಬೇಕಾಗಿತ್ತು. ಆದರೆ ಇದಾವುದೂ ನಡೆಯದೇ ನೇರವಾಗಿ ರಾಜ್ಯಪಾಲರು ಇವರ ಸೇವೆಯನ್ನು ಕಿತ್ತು ಹಾಕಿದರು. ರಾಜ್ಯಪಾಲರ ಈ ಆದೇಶದ ವಿರುದ್ಧ ಆಂಧ್ರ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಕಳೆದ ವರ್ಷಗಳಿಂದ ಚೆರಬಂಡರಾಜು ನಿರುದ್ಯೋಗಿಯಾಗಿದ್ದರು. ಸಾಮಾಜಿಕ ಜೀವನದಲ್ಲಿ ಬಿಡುವಿಲ್ಲದಂತೆ ಮಗ್ನರಾದ ಕಾರಣದಿಂದ ಹಾಗೂ ಪದೇ ಪದೇ ಜೈಲುವಾಸದ ಕಾರಣದಿಂದ ಅವರ ದೇಹಸ್ಥಿತಿ ಹದಗೆಡುತ್ತ ನಡೆಯಿತು. ೧೯೭೭ರಲ್ಲಿ ಅವರಿಗೆ ಎರಡು ಬಾರಿ ಬ್ರೈನ್ ಟ್ಯೂಮರ್ ಆಪರೇಷನ್ ಮಾಡಲಾಯಿತು. ಅವರ ಬಲಗಣ್ಣು ನಿರುಪಯುಕ್ತವಾಗಿತ್ತು. ಸರಿಯಾಗಿ ನಡೆದಾಡಲು ಬರುತ್ತಿರಲಿಲ್ಲ. ೧೯೮೦ ರಲ್ಲಿ ಅವರನ್ನು ಮತ್ತೊಂದು ಆಪರೇಷನ್‌ಗೆ ಈಡು ಮಾಡಲಾಯಿತು. ಇದರಿಂದ ಅವರು ನಿಧಾನವಾಗಿ ನಡೆದಾಡತೊಡಗಿದರು. ಈ ನಡುವೆ ಒಂದು ದಿನ ಆಸ್ಪತ್ರೆಯಲ್ಲಿ ತನ್ನ ಪತಿ ಬ್ರೈನ್ ಟ್ಯೂಮರ್ ಆಪರೇಷನ್ ಗೊಳಗಾಗುತ್ತಿದ್ದಾನೆಂಬ ಆತಂಕದಿಂದ ಅಳುತ್ತಿದ್ದ ಮಹಿಳೆಯೊಬ್ಬಳನ್ನು ಸಾಂತ್ವನಗೊಳಿಸುತ್ತಾ "ನೋಡು, ನಾನು ಇದೇ ಖಾಯಿಲೆಗೆ ಮೂರು ಸಲ ಆಪರೇಷನ್ ಮಾಡಿಸಿಕೊಂಡು ಚೆನ್ನಾಗಿ ತಿರುಗಾಡುತ್ತಿರುವೆ" ಎಂದು ಹಸನ್ಮುಖಿಯಾಗಿ ಹೇಳಿದ್ದರು.

ಮನೆ ಕಡೆಯ ಬಡತನ, ದುಡಿಯುತ್ತಿರುವವರೇ ಕೆಲಸದಿಂದ ವಜಾ ಮಾಡಲ್ಪಟ್ಟುದು ಚೆರಬಂಡರಾಜು ಅವರ ಮನೆಯವರಿಗೇ ದಿಕ್ಕೇ ತೋಚದಂತಾಗಲು ಕಾರಣವಾಗಿದ್ದವು. ಉಸ್ಮಾನಿಯಾ ವಿಶ್ವವಿದ್ಯಾಲಯದ ಹಲವು ಪ್ರಾಧ್ಯಾಪಕರು-ತೆಲಗು ಬರಹಗಾರರು-ಯುವಜನರು—ಹಳ್ಳಿಗಾಡಿನ ರೈತ-ಕೂಲಿಕಾರರು ಅಕ್ಕಿ ಹಣದ ರೂಪದಲ್ಲಿ ಸಹಾಯಧನ ಸಂಗ್ರಹಿಸಿದರು. ತನ್ನ ಸಹಾಯವೂ ಇರಲಿ ಎಂಬಂತೆ ೧೦೦೦ ರೂಪಾಯಿಗಳನ್ನು ನೀಡ ಬಂದ ಆಂಧ್ರ ಸಾಹಿತ್ಯ ಅಕಾಡೆಮಿ ಹಣವನ್ನು ಚೆರಬಂಡರಾಜು "ನಮ್ಮ ಮೇಲೆ ಸರ್ಕಾರ ಕಳೆದ ೧೦ ವರ್ಷಗಳಿಂದ ಹುರುಳಿಲ್ಲದ ಆಪಾದನೆ ಹೊರಿಸಿದೆ; ನನ್ನನ್ನು ಕಾರಣವೇ ಇಲ್ಲದೇ ನೌಕರಿಯಿಂದ ಕಿತ್ತು ಹಾಕಲಾಗಿದೆ; ಆಗ ಯಾವ ಸಭೆಯನ್ನೂ ನಡೆಸದ, ಗೊತ್ತುವಳಿಯನ್ನು ಸಹ ಪಾಸು ಮಾಡಿ ಸರ್ಕಾರಕ್ಕೆ ಸಲ್ಲಿಸದ ಅಕಾಡೆಮಿ ಈಗ ೧೦೦೦ ರೂ. ಹಣ ಕೊಡುವುದು ನಾಚಿಗೆಗೇಡಿತನದ್ದು" ಎಂದು ತಿರಸ್ಕರಿಸಿದ್ದರು.

ಮೂರನೇ ಬ್ರೈನ್ ಟ್ಯೂಮರ್ ಆಪರೇಷನ್ ನಡೆದ ಕೆಲವೇ ದಿನಗಳಲ್ಲಿ ಚೆರಬಂಡ ರಾಜು ಮೃತರಾದರು. ಕಡೇ ದಿನದವರೆಗೂ ಹಸನ್ಮುಖಿಯಾಗೇ ಇದ್ದ ಚೆರಬಂಡ ರಾಜು ಮಗ-ಮಗಳು—ಪತ್ನಿ—ವೃದ್ಧ ತಾಯಿಯರನ್ನು ಅಗಲಿದ್ದಾರೆ. ಆಂಧ್ರ ಪ್ರದೇಶದ ಜನಪರ ಬರಹಗಾರ—ಕ್ರಾಂತಿಕಾರೀ ವಿಚಾರವಂತ-ಅಗಲಿ ಹೋಗಿರುವ.

ತನ್ನ ೩೮ನೆಯ ವಯಸ್ಸಿನಲ್ಲಿ ಮೃತನಾದ ಚೆರಬಂಡರಾಜು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ, ದುಡಿವ ಜನತೆಯ ವಿಮೋಚನೆಗಾಗಿ, ಸಾಮಾಜಿಕ-ಆರ್ಥಿಕ ಸಮಾನತೆಗಾಗಿ ಸಂಘರ್ಷ ನಡೆಸುತ್ತಿರುವ ಜನತೆಗೆ, ಜನತೆಗಾಗಿ ಸಾಹಿತ್ಯ ಎಂಬುದನ್ನು ಒಪ್ಪುವ ಬಂಡಾಯ ಸಾಹಿತಿಗಳಿಗೆ ಸದಾ ನೆನಪಿನಲ್ಲಿರುವ ಹೆಸರು. ವದ್ದಂ ಭಾಸ್ಕರ ರೆಡ್ಡಿಯಾಗಿ ಜನಿಸಿ ಚೆರಬಂಡರಾಜುವಾಗಿ ಸಾಮಾಜಿಕ ಜೀವನ ನಡೆಸಿ 'ಕ್ರಾಂತಿಯ ಬಿತ್ತನೆಗಾಗಿ/ಚೆಲ್ಲುವೆ ರಕ್ತವನ್ನು/ ತೊಟ್ಟು ತೊಟ್ಟಾಗಿ' ಎಂದು ಹೇಳಿದ್ದನ್ನು, ಜನಪರ ಆಶಯಗಳನ್ನು ಜನತೆ ಮುಂದುವರೆಸ ಬೇಕಾಗಿದೆ.

○

ಕುಮಾರವ್ಯಾಸನ ಶ್ರೀಕೃಷ್ಣ ಪರಮಾತ್ಮನೇ?

ಚೆ. ರಾಮಸ್ವಾಮಿ

ರಾಮಾಯಣ, ಮಹಾಭಾರತಗಳನ್ನು 'ಇತಿಹಾಸ' (ಅಥವಾ ಅತಿಹಾಸ ಪ್ರೋ !) ಗಳೆನ್ನುತ್ತಾರೆ. ಆದರೆ ಈ ಕಾವ್ಯಗಳ ಇವತ್ತಿನ ಸ್ಥಿತಿಯಲ್ಲಿ ಇವುಗಳನ್ನು ಇತಿಹಾಸ ಗಳೆನ್ನುವುದು ಹಾಸ್ಯಾಸ್ಪದವೆನಿಸುತ್ತದೆ. ಇವುಗಳನ್ನು ಮೂಲ ಲೇಖಕರು ಯಾವುದೇ ಉದ್ದೇಶದಿಂದ ಹೇಗೇ ಬರೆದಿರಲಿ, ನಂತರ ಮಾತ್ರ ಇವು ಆದರ್ಶಪ್ರಿಯ ಕವಿಗಳಿಂದ ಸತತ ಅತ್ಯಾಚಾರಕ್ಕೊಳಗಾಗಿ ಇವತ್ತಿನ 'ಪುರಾಣ' ಅವಸ್ಥೆಯನ್ನು ತಲುಪಿವೆ. ಈ ಸತತ ಆದರ್ಶೀಕರಣದ ಫಲವಾಗಿ ಈ ಕಾವ್ಯಗಳ ಪಾತ್ರಗಳೂ ತಮ್ಮ 'ಪಾತ್ರ' ಗುಣವನ್ನು ಕಳೆದುಕೊಂಡು ಇತ್ತ ಮಾನವರೂ ಅಲ್ಲದ ಅತ್ತ ದೈವತ್ವವೂ ಇಲ್ಲದ ವೇಷ ಧಾರಿಗಳಾಗಿ ಅರ್ಥವಾಗದ, ಹುಚ್ಚುಚ್ಚಾದ ನಡವಳಿಕೆಯ ವಿದೂಷಕ ರಾಗಿ ಗೋಚರಿಸುತ್ತಾರೆ. ವಿದ್ಯಾರ್ಥಿಗಳಿಗೆ ಈ ಕಾವ್ಯಗಳನ್ನು ಪಾಠ ಹೇಳುವಾಗ ಇಂತಹ ಪಾತ್ರಗಳ ಕನ್ನಡ ವಿಮರ್ಶೆ ಹೇಳಬೇಕಾದ ದುರ್ದೆಸೆ ನನ್ನಂತಹ ಕನ್ನಡ ಅಧ್ಯಾಪಕನಿಗೆ ಅನಿವಾರ್ಯ. ಇತ್ತ ನೆಲದ ಮೇಲೂ ನಿಲ್ಲದ ಅತ್ತ ಸ್ವರ್ಗ (!)ದಲ್ಲೂ ನಿಲ್ಲ ಲಾಗದ ಕಪ್ಪೆಯಂತಹ (ಎಡಬಿಡಂಗಿ) ಈ ಪಾತ್ರಗಳನ್ನು ಯಾವ ಚೌಕಟ್ಟಿ ನೊಳಗೂ, ಯಾವ ನೆಲೆಯಲ್ಲಿಯೂ ವಿಮರ್ಶಿಸಲಾಗದೆ ತಲೆಕೆರೆದುಕೊಳ್ಳುವಂತೆ ಮಾಡಿದ ಕ್ಷಣಗಳು ಈ ಲೇಖನಕ್ಕೆ ಸ್ಫೂರ್ತಿ.

ಪುರಾಣಗಳ ಮೇಲೆ ಹೇಳಿದಂತಹ ಬಲೂನ್‌ಗಳಲ್ಲಿ ಪ್ರಧಾನನಾದ-ನಮ್ಮ ಅಗ್ರಮಾನ್ಯ ಕವಿಗಳಲ್ಲೊಬ್ಬನಾದ, ಮಹಾಭಾರತವನ್ನು ಹರಿ ಕಥೆಯನ್ನಾಗಿಸಿದ ಕುಮಾರ ವ್ಯಾಸನ-ಶ್ರೀ ಕೃಷ್ಣನನ್ನೇ ಮೇಲಿನ ನನ್ನ ವಾದಕ್ಕೆ ಉದಾಹರಣೆಯನ್ನಾಗಿ ತೆಗೆದು ಕೊಳ್ಳಬಹುದು. ಕುಮಾರವ್ಯಾಸನ ಇಡೀ ಶ್ರೀ ಕೃಷ್ಣನನ್ನು ವಿಮರ್ಶಿಸುವುದು ಇಲ್ಲಿ ಅವಶ್ಯಕ. ಉದ್ಯೋಗ ಪರ್ವದ ಕಥಾ ಭಾಗದಲ್ಲಿ ಶ್ರೀ ಕೃಷ್ಣ ಹೇಗೆ ವರ್ತಿಸುತ್ತಾನೆ ಎಂಬುದನ್ನು ಮಾತ್ರ ಪ್ರಯೋಗಾತ್ಮಕವಾಗಿ ವಿಮರ್ಶಿಸಲು ಪ್ರಯತ್ನಿಸಿದ್ದೇನೆ.

ಹನ್ನೆರಡುವರ್ಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸದಿಂದ ಪಾಂಡವರು ಮರಳಿ ಬಂದು ವಿರಾಟ ನಗರದಲ್ಲಿ ಬಿಡಾರ ಹೂಡಿ, ತಮಗ ನ್ಯಾಯವಾಗಿ ಬರ ಬೇಕಾದ ರಾಜ್ಯ ಭಾಗವನ್ನು ಪಡೆಯುಲಿಕ್ಕೆ ದುರ್ಯೋಧನನಲ್ಲಿಗೆ ಸಂಧಿಗೆ ರಾಯಭಾರಿ ಯಾಗಿ, ದೂತನಾಗಿ ಶ್ರೀಕೃಷ್ಣನನ್ನು ಧರ್ಮರಾಯ ಕಳಿಸುತ್ತಾನೆ. ಸಂಧಿಗಾಗಿ ಕಳಿಸಲ್ಪಟ್ಟ ದೂತ ಶ್ರೀಕೃಷ್ಣ ಹಸ್ತಿನಾವತಿಗೆ ಹೋಗಿ ಸಂಧಿಯನ್ನು ಮುರಿದು (ಅಥವಾ ಮುರಿವಂತೆ ಮಾಡಿ) ಯುದ್ಧವನ್ನು ನಿಶ್ಚಯಿಸಿಕೊಂಡು ಬರುವುದು ಕಥಾಭಾಗ.

ಕೊಟ್ಟ ಮಾತಿಗಾಗಿ ಕುರುಕ್ಷೇತ್ರದಲ್ಲಿ ಬಿಲ್ಲೆತ್ತದೆ ಪ್ರಾಮಾಣಿಕನೆನಿಸಿಕೊಂಡ ಕೃಷ್ಣ, ದೂತನಾಗಿ ಎಷ್ಟು ಪ್ರಾಮಾಣಿಕನಾಗಿ ನಡೆದುಕೊಂಡ ? ರಾಜನಾದವನು ಹೇಳಿದುದನ್ನು ಅಕ್ಷರಶಃ ಚಾಚೂತಪ್ಪದೆ ಮಾಡ ಬೇಕಾದದ್ದು ದೂತನ ಕೆಲಸ. ಶ್ರೀಕೃಷ್ಣನಿಗೆ ಧರ್ಮಜ ವಹಿಸಿದ ಕೆಲಸ ಸಂಧಿ ಮಾಡಿಕೊಂಡು ಬಾ ಎಂದು. ಆದರೆ ಕೃಷ್ಣ ಇದಕ್ಕೆ ವಿರುದ್ಧವಾಗಿ ಧರ್ಮಜನ ತಮ್ಮಂದಿರನ್ನು ಕೆರಳಿಸುತ್ತಾನೆ. ಕೊನೆಗೆ ಅದರ ಫಲ ಏನೂ ಇಲ್ಲದಾಗ, ಎಲ್ಲರೂ ಸಂಧಿಗೆ (ಅಣ್ಣನ ಅಭಿಪ್ರಾಯಕ್ಕೆ ವಿರುದ್ಧ ಹೋಗಲಾರದೆ) ಒಪ್ಪಿದಾಗ ನಿರಾಶನಾದ ಕೃಷ್ಣ, ದ್ರೌಪದಿಗೆ ಸಮಾಧಾನ ಹೇಳುವಲ್ಲಿ ತಾನು ಯುದ್ಧವನ್ನೇ ನಿಶ್ಚಯಿಸಿ ಕೊಂಡು ಬರುತ್ತೇನೆ ಎಂದು ಹೇಳಿ ರಾಜನೀತಿಗೆ ಎಳ್ಳು ನೀರು ಬಿಟ್ಟಿದ್ದಾನೆ. ಇಂತಹವನು ಮುಂದೆ ದುರ್ಯೋಧನನಿಗೆ ರಾಜನೀತಿ ತಿಳಿಸುವುದು ಶುದ್ಧ ಹಾಸ್ಯಾಸ್ಪದ. ಶುದ್ಧ ಅಪ್ರಾಮಾಣಿಕವಾಗಿ ರಾಜನನ್ನು ಮೀರಿ ಅವನ ಅಭಿಪ್ರಾಯಕ್ಕೆ ವಿರುದ್ಧ ನಿರ್ಣಯವನ್ನು ತಳೆದು ಮೂರನೆ ದರ್ಜೆ ರಾಜಕಾರಣಿ (ಅಂದರೆ ಇಂದಿನ ಯಾವನೇ ರಾಜಕಾರಣಿ)ಯಂತೆ ವರ್ತಿಸುತ್ತಾನೆ. ಈ ಅಭಿಪ್ರಾಯದೊಂದಿಗೆ ಹಸ್ತಿನಾವತಿಗೆ ಬರುತ್ತಾನೆ. ಅಲ್ಲಿ ದುರ್ಯೋಧನ ಒಬ್ಬ ರಾಜನಿಗೆ ಸಲ್ಲಬೇಕಾದ ಗೌರವದೊಂದಿಗೆ ಕೃಷ್ಣನನ್ನು ಬರಮಾಡಿಕೊಳ್ಳಲು ಏರ್ಪಾಡುಗಳನ್ನು ಮಾಡಿರುತ್ತಾನೆ. (ಇಲ್ಲಿ ಕೃಷ್ಣನಿಗಿಂತ ದುರ್ಯೋಧನನೇ ಹೆಚ್ಚು ಉದಾತ್ತ ವ್ಯಕ್ತಿಯಾಗಿ ಕಾಣಿಸುತ್ತಾನೆ). ಆದರೆ ಕೃಷ್ಣ ಕೌರವನ ಮನೆಗೆ ಹೋಗದೆ ವಿದುರನ ಮನೆಗೆ ಹೋಗುತ್ತಾನೆ. ಅಲ್ಲಿ ಅವನನ್ನು ಕಾಣಲು ಬಂದ ಕುಂತಿಯ (ಅತ್ತೆ) ಕಾಲಿಗೆ ಬಿದ್ದು ನಮಸ್ಕರಿಸಿ 'ಲೌಕಿಕ ನಾಟಕ'ವನ್ನು ಸಮರ್ಥವಾಗಿ ನಟಿಸುತ್ತಾನೆ. ಮರುದಿನ ಆಸ್ಥಾನಕ್ಕೆ ಕೃಷ್ಣ ಬರುತ್ತಾನೆ. ಆಗ ಭೀಷ್ಮ ದ್ರೋಣ ಈ ಮೊದಲಾಗಿ ಎಲ್ಲ ಹಿರಿಯರೂ ಕೃಷ್ಣನ ಕಾಲಿಗೆರಗಿ ನಮಸ್ಕರಿಸುತ್ತಾರೆ. ಕೃಷ್ಣನೂ ಆಶೀರ್ವದಿಸುತ್ತಾನೆ. ಮೊದಲ ದಿನ ಕುಂತಿಯ ಕಾಲಿಗೆರಗಿ ನಮಸ್ಕರಿಸಿ ಲೌಕಿಕ ನಾಟಕವನ್ನು ಸಮರ್ಥವಾಗಿ ನಟಿಸಿದ ವ್ಯಕ್ತಿ ಮರುದಿನ ಆ ಕುಂತಿಯ ಮಾವನನ್ನೇ ತನ್ನ ಕಾಲಿಗೆ ಬೀಳಿಸಿಕೊಂಡದ್ದು ಎಂತಹ ಲೌಕಿಕ ನಾಟಕವೋ ?

ವಿಪರ್ಯಾಸ ಈ ಪ್ರಸಂಗ. ಎಲ್ಲರೂ ನಮಸ್ಕರಿಸಿದರೂ ದುರ್ಯೋಧನ ಮಾತ್ರ ಸಿಂಹಾಸನದಲ್ಲಿ ಕುಳಿತೇ ಇದ್ದ. ಇದು ಕೃಷ್ಣನಿಗೆ ಸಹಿಸಲಿಲ್ಲ. ಅವನ 'ಗರ್ವ'ವನ್ನು ಮುರಿಯಲು ಈ ಪರಮಾತ್ಮ ತನ್ನ ಅಂಗುಷ್ಠದಿಂದ ನೆಲ ಒತ್ತಲು, ಸಿಂಹಾಸನದ ಗೋರಸು ಮುರಿದು ದುರ್ಯೋಧನ ಕೆಳಗುರುಳಿ ಕೃಷ್ಣನ ಕಾಲಬಳಿ ಬೀಳುತ್ತಾನೆ. ಹೀಗೆ ತನ್ನ 'ಈಗೊ' ಪ್ರದರ್ಶನದಿಂದ ಕೃಷ್ಣ ತಾನೊಬ್ಬ ಕ್ಷುಲ್ಲಕ ವ್ಯಕ್ತಿಯೆಂಬುದನ್ನು ಸಾಬೀತು ಮಾಡಿದ್ದಾನೆ. ಇಲ್ಲಿ ದುರ್ಯೋಧನನ ವರ್ತನೆಯನ್ನು 'ಗರ್ವ'ವೆಂದು ವ್ಯಾಖ್ಯಾನಿಸುವ ಕವಿ, ತನಗೆ ಎಲ್ಲರೂ ನಮಸ್ಕರಿಸಬೇಕು, ತನಗಿಂತ ಮಿಗಿಲಾದವರಿಲ್ಲ ಎಂಬ ಕೃಷ್ಣನ 'ಅಹಂಭಾವ'ದ ಬಗ್ಗೆ ಮೌನ ತಾಳುತ್ತಾನೆ, ಜಿತೇಂದ್ರಿಯನಾದ, ಪರಮಾತ್ಮನೆನಿಸಿಕೊಂಡ ಇವನಿಗೇ ಇಷ್ಟು ಅಹಂ ಇದ್ದರೆ ಇಡೀ ಭರತ ಖಂಡದ ಚಕ್ರವರ್ತಿಯಾಗಿ (ಹಾಗೆ ನೋಡಿದರೆ ಕೃಷ್ಣನೂ ಒಬ್ಬ ಸಾಮಂತನೆ, ಬಂದಿರುವುದು ದೂತನಾಗಿ) ಮೆರೆಯುತ್ತಿದ್ದ ಕೌರವನಿಗೆ ಎಷ್ಟು ಅಹಮ್ಮಿರಬೇಡ? ಅಷ್ಟೇ ಅಲ್ಲ ಮುಂದೆ ಕೃಷ್ಣ ತನ್ನ ಮನೆಗೆ ಬಾರದೆ ವಿದುರನ ಮನೆಗೆ ಹೋದ ಬಗ್ಗೆ ದುರ್ಯೋಧನ ಆಕ್ಷೇಪವೆತ್ತಿದಾಗ, ಅರಿರಾಜನ ಮನೆಯಲ್ಲಿ ದೂತನಾದವನು ಉಣ್ಣಬಾರದು; ಈ ಸಾಮಾನ್ಯ ರಾಜನೀತಿ ಕೂಡ ದುರ್ಯೋಧನನಿಗೆ ಗೊತ್ತಿಲ್ಲವೆಂದು ಕೃಷ್ಣ ಹೇಳುತ್ತಾನೆ. ಒಬ್ಬ ದೂತ ಆ ಸ್ಥಾನಕ್ಕೆ ಬಂದರೆ ಚಕ್ರವರ್ತಿ ಎದ್ದು ಬಂದು ನಮಸ್ಕರಿಸಿ ಬರಮಾಡಿ ಕೊಳ್ಳಬೇಕೆಂಬುದು ಯಾವ ರಾಜನೀತಿ ? ಬಲವಂತವಾಗಿ ಕೌರವನನ್ನು ತನ್ನ ಕಾಲಿಗೆ ಬೀಳಿಸಿಕೊಂಡು ತನ್ನ 'ಈಗೋ' ಶಮನ ಮಾಡಿಕೊಂಡ, ರಾಜನೀತಿಯ ಒಟ್ಟು ಮೊತ್ತದ ಗುತ್ತೇದಾರನಂತೆ ಮಾತನಾಡುವ ಕೃಷ್ಣನಿಗೆ ಈ ಸಾಮಾನ್ಯ ರಾಜನೀತಿ ಗೊತ್ತಿರಲಿಲ್ಲವೇ ? ಕೃಷ್ಣ ಎಂತಹ ಧೂರ್ತ (ದೂತ ಅಲ್ಲ) ನೆಂಬುದು ಈ ಪ್ರಸಂಗದಿಂದ ಮನದಟ್ಟಾಗುತ್ತದೆ.

ಹೀಗೆ ರಾಜನೀತಿಯನ್ನು ತನ್ನ ಸ್ವಾರ್ಥಕ್ಕೆ, ತನ್ನ ಸೌಕರ್ಯಕ್ಕೆ ತಕ್ಕಂತೆ ಬಗ್ಗಿಸಿಕೊಳ್ಳುವ ಕೃಷ್ಣ ಒಬ್ಬ ಕಿಡಿಗೇಡಿ ವಕೀಲನಂತೆ, ರಾಜನ ನಿರ್ಣಯಕ್ಕೆ ವಿರೋಧವಾದ ನಿರ್ಣಯವನ್ನು ಅವನ ಅಂತಃಪುರದಲ್ಲಿಯೇ ತೆಗೆದುಕೊಳ್ಳುವ ಸ್ವಾಮಿದ್ರೋಹದ (ಕರ್ತವ್ಯಹೀನ) ಮೂಲಕ ಅವನೊಬ್ಬ ಧೂರ್ತ ರಾಜಕಾರಣಿಯಂತೆ, ದುರ್ಯೋಧನನ (ಮನುಷ್ಯ) ಗರ್ವವನ್ನು ಮುರಿಯುತ್ತೇನೆಂದು, ಚಕ್ರವರ್ತಿಯೊಬ್ಬನನ್ನು ತುಂಬಿದ ಸಭೆಯಲ್ಲಿ ಕೆಳಗುರುಳಿಸಿ ಅವಮಾನ ಮಾಡಿ ತನ್ನ ಅಹಂಭಾವವನ್ನು ಪ್ರದರ್ಶಿಸುವುದರ ಮೂಲಕ ಅಲ್ಪ ಮನುಷ್ಯನಾಗಿ ನಮಗೆ ಗೋಚರಿಸುತ್ತಾನೆ. ಇಂತಹವನನ್ನು ಕುಮಾರವ್ಯಾಸ ಕೇವಲ ವೈಭವಯುತ ಪದಗಳ, ಪೊಳ್ಳು ನಾಮಾವಳಿಗಳ ಸಹಾಯದಿಂದ 'ದೇವದೇವ' ನಾಗಿ, 'ಪರಮಾತ್ಮ'ನಾಗಿ ಸ್ಥಾಪಿಸಲು ಮಾಡಿದ ಪ್ರಯತ್ನ ಹಾಸ್ಯಾಸ್ಪದವಾಗಿ ಕಾಣುತ್ತದೆ.

ಸಾಮಾನ್ಯವಾಗಿ ಎಲ್ಲಜೀವಿಗಳಿಗೂ ಆತ್ಮವಿದೆ. ಇದೇ ಜೀವಾತ್ಮ. ಮಿಕ್ಕವರ ವಿನಾಶದ ಬಗ್ಗೆಯೂ, ಮಿಕ್ಕವರಿಗೆ ಕೆಡುಕನ್ನು ಬಗೆವುದರಲ್ಲಿ ತೊಡಗಿರುವವರನ್ನು 'ದುರಾತ್ಮ'ರೆಂದೂ, ಯಾರಿಗೂ ಕೆಡುಕೆಣಿಸದೆ. ಸಮಾಜದಲ್ಲಿ ಯೋಗ್ಯರಾಗಿ ಬಾಳುವವರನ್ನು 'ಸದಾತ್ಮ'ರೆಂದೂ. ನಿಸ್ವಾರ್ಥಿಯಾಗಿ, ಸಮಾಜದಲ್ಲಿ ಎಲ್ಲರಿಗೂ ಬೇಕಾಗಿ ಎಲ್ಲರ ಕಷ್ಟಗಳಿಗೂ ನೆರವಾಗುತ್ತ ಬರುವವರನ್ನು 'ಮಹಾತ್ಮ' ರೆಂದೂ. ಸೃಷ್ಟಿಯ ಸಕಲ ಜೀವಿಗಳೂ ಸಮಾನವಾದವು, ಎಲ್ಲವೂ ಅವುಗಳ ನಿಯಮ ಪ್ರಕಾರ ನಡೆಯುತ್ತದೆ, ಯಾರೂ ಹೆಚ್ಚಲ್ಲ ಯಾರು ಕಡಿಮೆಯಿಲ್ಲ ಎಂಬ ಸಮತಾ ಭಾವದಿಂದ 'ತನ್ನ'ನ್ನೇ ಮರೆತು ಲೋಕ ಕಲ್ಯಾಣಾರ್ಥ ದುಡಿವವರನ್ನು 'ಪರಮಾತ್ಮ'ರೆಂದೂ ನಾವು ವ್ಯಾಖ್ಯಾನಿಸಬಹುದಾದರೆ ಇಲ್ಲಿಯ ಕೃಷ್ಣನನ್ನು ದುರಾತ್ಮನೆನ್ನಬೇಕೇ ಹೊರತು ಖಂಡಿತವಾಗಿಯೂ ಪರಮಾತ್ಮನೆಂದಲ್ಲ.

ವಿಶ್ವಕಥಾಕೋಶ : ನಾಲ್ಕನೆಯ ಕಂತು

ಸಿ.ವಿ. ವೇಣುಗೋಪಾಲ

ಅದೃಷ್ಟ, ಸಜ್ಜನನ ಸಾವು, ಡೇಗೆ ಹಕ್ಕಿ ಮತ್ತು ಅವಸಾನ—ಇವು ವಿಶ್ವ ಕಥಾಕೋಶದ ನಾಲ್ಕನೇ ಕಂತಿನ ಕೊಡುಗೆ. **ಅದೃಷ್ಟ** ಅಮೆರಿಕ, ಕೆನಡ ಮತ್ತು ಮೆಕ್ಸಿಕೊಗಳ ಹದಿಮೂರು ಕಥೆಗಳನ್ನೂ, **ಸಜ್ಜನನ ಸಾವು** ಐಸ್‌ಲೆಂಡ್, ಡೆನ್‌ಮಾರ್ಕ್, ನಾರ್ವೆ, ಸ್ವೀಡನ್! ಮತ್ತು ಫಿನ್‌ಲೆಂಡ್‌ಗಳ ಹನ್ನೆರಡು ಕಥೆಗಳನ್ನೂ **ಡೇಗೆ ಹಕ್ಕಿ** ಇಟಲಿ ಮತ್ತು ಆಸ್ಟ್ರಿಯಗಳ ಹನ್ನೆರಡು ಕಥೆಗಳನ್ನೂ ಮತ್ತು **ಅವಸಾನ** ಗ್ರೀಸ್, ಸೈಪ್ರಸ್ ಮತ್ತು ಟರ್ಕಿಯ ಹತ್ತು ಕಥೆಗಳನ್ನೂ ಪ್ರೌಢ ಅನುವಾದಗಳ ಮೂಲಕ ನಮಗೆ ಪರಿಚಯಿಸುತ್ತವೆ. ಈ ಎಲ್ಲ ದೇಶಗಳಲ್ಲಿಯೂ, ಅದರಲ್ಲೂ ನಮಗೆ ಹೆಚ್ಚು ಪರಿಚಿತ ಇರುವ ಅಮೆರಿಕ, ಕೆನಡ ಮತ್ತು ಇಟಲಿಗಳಲ್ಲಿ, ಅನೇಕ ವಿಖ್ಯಾತ ಕಥೆಗಾರರಿದ್ದು ಅವರಲ್ಲಿ ಹಲವರಾದರೂ ಈ ಸಂಕಲನಗಳಲ್ಲಿ ಬರದಿರುವುದು ಒಂದು ನ್ಯೂನತೆಯೇ ಇರಬಹುದಾದರೂ, ಸಂಕಲನಗಳ ಗಾತ್ರ, ಒಂದು ರೀತಿಯ ಅಪ್ರಕಟಿತ ಆದರೆ ನಿಶ್ಚಿತ ಉದ್ದೇಶಗಳನ್ನು ಪ್ರತಿಫಲಿಸುವ ಕಥೆಗಳ ಆಯ್ಕೆಯ ಹಿನ್ನೆಲೆಯಲ್ಲಿ ಈ ನ್ಯೂನತೆ ಅಷ್ಟೇನೂ ಗಂಭೀರವಾಗಿ ತೆಗೆದುಕೊಳ್ಳಬೇಕಾದಂಥ ದಲ್ಲ ಎಂಬುದನ್ನು ಒಪ್ಪಿಕೊಳ್ಳುವುದು ಒಳಿತು.

ಈ ಕಂತಿನ ಮೊದಲನೆಯ ಸಂಪುಟ **ಅದೃಷ್ಟ**ವನ್ನು ಮಗುಚಿಹಾಕಿದಾಗ ಥಟ್ಟನೆ ನಮ್ಮ ಗಮನ ಸೆಳೆಯುವ ಸಂಗತಿ. ಇಲ್ಲಿಯ ಕಥೆಗಳು ಸಾವಿನ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಡುವ ಬಗೆ. ಅಮೆರಿಕೆಯ ಹನ್ನೊಂದು ಕಥೆಗಳಲ್ಲಿ ಹತ್ತು ಸಾವಿನ ಬಗೆಗೇ ಇವೆ. ಅಮೆರಿಕೆಯ ಕಥೆಗಳಲ್ಲಿ ಸಾವನ್ನುಳಿದು ಇತರ ಯಾವುದೇ ವಸ್ತುವಿಗೆ ಪ್ರಾಶಸ್ತ್ಯವೇ ಇಲ್ಲವೇನೋ ಅನ್ನುವ ಮಟ್ಟಿಗೆ ಈ ಕಥೆಗಳು ನಮ್ಮಲ್ಲಿ ಸಂಶಯ ಮೂಡಿಸಿದರೆ ಆಶ್ಚರ್ಯವೇನಿಲ್ಲ. ಜೀವನದ ಈ ಅಂತಿಮ ಘಟ್ಟದ ಬಗ್ಗೆ ಇಲ್ಲಿರುವ ವಿವಿಧ ಚಿತ್ರಣಗಳು ಜೀವನದ ಬಗ್ಗೆ ಒಂದು ನಿರ್ಲಿಪ್ತ ಮನೋಭಾವವನ್ನು ಬೆಳೆಸಲು ಸಹಕರಿಸುವುದರೊಂದಿಗೇ ಇದೇ ಘಟನೆಗೆ ಸಂಬಂಧಿಸಿದಂತೆ ಮಾನವ ತನ್ನ

ಉಚ್ಚ ಹಾಗೂ ನೀಚತಮ ಮನೋಭಾವಗಳೆರಡನ್ನೂ ಪ್ರದರ್ಶಿಸಬಲ್ಲ ಎಂಬ ಸತ್ಯದ ಸ್ವರೂಪವನ್ನೂ ನಮ್ಮ ಕಣ್ಣ ಮುಂದಿಡುತ್ತವೆ.

ಎಡ್ಗರ್ ಅಲೆನ್‌ಪೋರ 'ಕತೆ ಹೇಳಿದ ಹೃದಯ' ಕೊಲೆಗಾರನೊಬ್ಬನ ಮನೋವೈಜ್ಞಾನಿಕ ದಾಖಲೆ. ಕೊಲೆಗಾರ ತನ್ನ ಕೃತಿಯನ್ನು ವರ್ಣಿಸುವಾಗಿನ ನಿರ್ಲಿಪ್ತತೆ ಸ್ವಲ್ಪ ಸಮಯದಲ್ಲಿಯೇ ಭಯಕ್ಕೆಡೆಕೊಡುತ್ತದೆ. ಅದರ ಹಿಡಿತದಲ್ಲಿಯ ಕೊಲೆಗಾರನ ಚಿತ್ರ ಸಣ್ಣಕತೆಗಳ ಪ್ರಪಂಚದಲ್ಲಿಯೇ ಒಂದು ಉಚ್ಚಮಟ್ಟದ ಸಾಧನೆ : 'ನನಗೀಗ ನಿಜವಾಗಿ ಭಯವಾಗತೊಡಗಿತು. ಅದನ್ನು ಕಡೆಗಣಿಸಲು, ನಾನಿನ್ನೂ ಹೆಚ್ಚು ಗಟ್ಟಿಯಾಗಿ ಮಾತಾಡತೊಡಗಿದೆ. ಆ ಸದ್ದು ಇನ್ನೂ ಹೆಚ್ಚಾಯಿತು. ಇನ್ನೇನು ಮಾಡುವುದು ? **ನಿಧಾನವಾದ ಮಂದವಾದ–ನಿಶ್ಯಕ್ತವಾದಸದ್ದು–ಕೈಗಡಿಯಾರವೊಂದನ್ನು ಬಟ್ಟೆಯಲ್ಲಿ ಸುತ್ತಿಟ್ಟಾಗ ಕೇಳಿಬರುವಂತಹ ಸದ್ದು**. ನನಗೆಉಸಿರು ಕಟ್ಟಿದಂತೆನಿಸಿತು' (ಪು.೩೦). ಜಾಕ್ ಲಂಡನ್‌ರ 'ಜೀವನನಿಯಮ' ಸಾವನ್ನು ಎದುರು ನೋಡುತ್ತಿರುವವನ ಮನಸ್ಥಿತಿಯ ವಿಶ್ಲೇಷಣೆಯಾದರೆ ಓ ಹೆನ್ರಿಯ 'ಕೊನೆಯ ಎಲೆ' ಒಬ್ಬ ಹೆಂಗಸನ್ನುಳಿಸಲು ತನ್ನ ಅಮೋಘ ಕೃತಿಯೊಂದನ್ನು ರಚಿಸಿ ತಾನೇ ಸಾವಿಗೆ ತುತ್ತಾದ ಕಲಾಕಾರನೊಬ್ಬನ ಚಿತ್ರ. 'ಬದುಕಿರುವ ಪ್ರತಿಯೊಬ್ಬ ಮನುಷ್ಯನ ಕತೆಯೂ ದುಃಖದ ಕತೆಯೇ' ಎಂದು ಸಾರುವ ವಿಲಿಯಂ ಸರೋಯಾನನ 'ಅಕ್ಷೌರಿಕ–' ದಲ್ಲಿಯ ದುರಂತ–ಜೀವನೋಪಾಯಕ್ಕಾಗಿ ಸರ್ಕಸ್ ಹುಲಿಯ ಬಾಯಿಗೆ ತಲೆಕೊಟ್ಟ ಮಿಸಾಕ್ ಓಹೋನ ಜೀವನ–ಕತೆಯ ಪ್ರಾರಂಭದ ಲಘುಹಾಸ್ಯದಿಂದ ಮತ್ತಷ್ಟು ಮೊನಚಾಗಿ ಮೂಡಿ ಬರುತ್ತದೆ. 'ದಾರಿಯಲ್ಲಿ ಕಂಡವನು' (ಆಲ್ಬರ್ಟ್ ಮಾಲ್ಟ್ಸ್) ಕತೆಯ ಕೇಂದ್ರದಲ್ಲಿ ಬರುವ ಜಾನ್‌ಪಿಕೆಟ್ ತನ್ನ ಹೆಂಡತಿಗೆ ಬರೆದ ಪತ್ರ ವಿಶಿಷ್ಟವಾಗಿ ಬಳಸಲ್ಪಟ್ಟಿರುವ ತಂತ್ರ. ಗಣಿಕಾರ್ಮಿಕರ ಶೋಷಣೆ, ಅವರ ಆರೋಗ್ಯದ ಬಗ್ಗೆ ಮಾಲೀಕರ ದಿವ್ಯನಿರ್ಲಕ್ಷ್ಯಗಳಿಗೆ ವಸ್ತುವಾಗಿ ಸಿಲಿಕೋಸಿಸ್‌ನಿಂದ ನರಳುತ್ತಾ ನಿಶ್ಚಿತ ಸಾವನ್ನು ಎದುರು ನೋಡುತ್ತಿರುವ ಪಿಕೆಟ್ ತನ್ನ ಪತ್ನಿಗೆ ಬೇರೆಂದು ಮದುವೆಯಾಗಿ ಸುಖಿಯಾಗಿರು ಎಂದು ಬರೆಯುತ್ತಾನೆ. ಮಗನ್ನ ಗಣೀ ಕೆಲ್ಸಕ್ಕೆ ಎಂದೂ ಕಳಿಸಬೇಡ-ಎಂದು ಒತ್ತಿ ಹೇಳುತ್ತಾನೆ.

'ವಸಂತ ನಿನಗೆ ನಮನ' (ಮೆರಿದೆಲ್ ಲಸೂಅ) ದಲ್ಲಿ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಕುಟುಂಬದ ಮಗು ಕುಡಿಯಲು ಹಾಲಿಲ್ಲದೆ ಕೊನೆಯುಸಿರೆಳೆಯುವ ದೃಶ್ಯವಿದ್ದರೆ, 'ಕಣ್ಮರೆಯಾದ ಫೀಬೀ' (ಥಿಯೋಡೋರ್ ಡ್ರೈಸರ್) ನಲ್ಲಿ ಮುನ್ಸೂಚನೆಯೇ ಇಲ್ಲದೇ ಬರುವ ಸಾವಿನ ಆಘಾತದ ಪರಿಚಯ ಇದೆ. 'ಇನ್ನೇನು ಗಂಡಸಾಗಲಿದ್ದ ಒಬ್ಬ ಗಂಡಸು' (ರಿಚರ್ಡ್‌ರೈಟ್) ಒಂದು ನೇಸರಗತ್ತೆಯ ಸಾವನ್ನು ಚಿತ್ರಿಸುತ್ತದಾದರೂ ಅದರ ಹಿನ್ನೆಲೆಯಲ್ಲಿ ಬೆಳೆಯುತ್ತಿರುವ ಹುಡುಗನ ಗಂಡಸುತನ

ವನ್ನೇ ತಮ್ಮರಿವಿಲ್ಲದೆಯೇ ಕೊಲ್ಲಲು ಪ್ರಯತ್ನಿಸುತ್ತಿರುವ ಅವನ ತಂದೆ ತಾಯಿಗಳ ಅಂದರೆ ಎಲ್ಲ ತಂದೆ ತಾಯಿಗಳ ಅಜ್ಞಾನದ ವಿಡಂಬನೆ ಇದೆ. ಕಡೆಯದಾಗಿ ಡೊನಾಲ್ಡ್ ಬಾರ್ಥೆಲ್ಮೆಯ 'ವರದಿ' ಯುದ್ಧದಲ್ಲಿಯ ಅರ್ಥಹೀನ ಸಾವಿನ, ತಾಂತ್ರಿಕ ಜ್ಞಾನದ ಭಯಾನಕ ಸ್ವರೂಪದ ದರ್ಶನ ಮಾಡಿಸುತ್ತದೆ. ಮುಖ್ಯ ಇಂಜಿನಿಯರ್ ಹೆಮ್ಮೆಯಿಂದ ಹೇಳುವ ಮಾತುಗಳನ್ನು ಕೇಳಿ: ವಾಯುಮಂಡಲದ ಮೇಲ್ಪಾತಳಿಯಲ್ಲಿ ನಾವು ನಮ್ಮ ಹೊಸದಾಗಿ ಪರಿಷ್ಕರಿಸಿದ ಊದು ಮೀನಿನ ವಿಷಾಣುಗಳನ್ನು ಬಿಟ್ಟರೆ ಯಾರಿಗೂ ಯಾರ ಗುರುತೂ ಹತ್ತಲಾರದಷ್ಟು ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದು. ಅವರಲ್ಲಾವ ತಾಂತ್ರಿಕ ಸಮಸ್ಯೆಗಳೂ ಇಲ್ಲ. ಎಲ್ಲ ತೀರಾ ಸುಲಭ. ಬೇಕಾದರೆ ನಾವು ಇಪ್ಪತ್ನಾಲ್ಕು ಗಂಟೆಗಳಲ್ಲಿ ಅವರು ತಿನ್ನುವ ಅಕ್ಕಿಯಲ್ಲಿ ಎರಡು ಕೋಟಿಗಳಷ್ಟು ಕೀಟಗಳನ್ನು ಸೇರಿಸಬಹುದು. ವೈರಿಗಳ ಮೈ ಬಣ್ಣವನ್ನು ಅರ್ಧ ಕಪ್ಪು ಅರ್ಧ ಬಿಳಿಯದಾಗಿ ಪರಿವರ್ತಿಸಬಲ್ಲ ಅಸ್ತ್ರಗಳಿವೆ' ಇತ್ಯಾದಿ.

ಅದೃಷ್ಟದಲ್ಲಿ ಮೆಕ್ಸಿಕೋ, ಕೆನಡಾಗಳ ಒಂದೊಂದೇ ಕತೆಯನ್ನಾರಿಸಿರುವುದು ಅಷ್ಟು ಸರಿಯೆನಿಸದಿದ್ದರೂ ಆರಿಸಿರುವ ಎರಡೂ ಉತ್ತಮ ಕತೆಗಳೇ. ವೈಜ್ಞಾನಿಕ ಸತ್ಯಗಳನ್ನು ಒಪ್ಪಲು ಸಿದ್ಧನಿಲ್ಲದೆ, ಮೂಢನಂಬಿಕೆಗೇ ಅಂಟಿಕೊಂಡು 'ಇಡೀ ಜಗತ್ತನ್ನೇ ಸೈತಾನ ಆಕ್ರಮಿಸಿಬಿಟ್ಟಿದ್ದಾನೆ' ಎಂದೊರಲುವ ಮುದುಕ ಸೋಲ್ಜಕ್ ('ಮುರಿದು ಹೋದ ಭೂಮಂಡಲ' – ಕೆನಡಾ) ಅಜ್ಞಾನದ ಪ್ರತೀಕವಾದರೆ, ಹನ್ನೆರಡು ಮೇಳಗಳನ್ನು ರಾಕ್ಷಸೀ ರೀತಿಯಲ್ಲಿ ಕೊಂದೂ ಉಳಿದ ಒಂದೇ ಮೇಳವನ್ನು ಕೊಲ್ಲುವ ಸಮಯ ಸಿಕ್ಕಿದಾಗ ಅದನ್ನು ಕೊಲ್ಲದೇ ಬಿಟ್ಟು ಮಾನಸಿಕವಾಗಿ ಪುನರ್ಜನ್ಮವನ್ನೇ ಪಡೆಯುವ ಯು ಆನ್ ('ಹದಿಮೂರನೆಯ ಮೇಳ' ಮೆಕ್ಸಿಕೋ) ಮಾನವೀಯತೆಯ ಒಂದು ಹೊಸ ತಿರುವನ್ನು ಪ್ರತೀಕಿಸುತ್ತಾನೆ.

ಅದೃಷ್ಟಕ್ಕೆ ಹೋಲಿಸಿದರೆ ಈ ಕಂತಿನ ಎರಡನೆಯ ಸಂಪುಟವಾದ **ಸಜ್ಜನನ ಸಾವು** ಸಾಕಷ್ಟು ವೈವಿಧ್ಯಮಯ ಕತೆಗಳ ಸಂಕಲನವೆಂದೇ ಹೇಳಬೇಕು. ಮೊದಲನೆಯ ಕತೆ 'ಸಜ್ಜನನ ಸಾವು' ಐಸ್‌ಲೆಂಡಿನ ದೇವಗಣಗಳಿಗೆ ಸಂಬಂಧಿಸಿದ್ದಾದರೂ ಅದರಲ್ಲಿಯ ಸಂದೇಶ ಮಾನವಲೋಕಕ್ಕೆ ಸೇರಿದುದೇ ಆಗಿದೆ. ಸಜ್ಜನನಾದ ಬಾಲ್ಡರ್ ದೇವನ ಪುನರ್ಜನ್ಮಕ್ಕಾಗಿ 'ಸಕಲ ಮಾನವರು ಮಾತ್ರವಲ್ಲದೆ ಜಡವಸ್ತುಗಳು, ನೆಲ, ಕಲ್ಲು, ಮರ, ಲೋಹಗಳೆಲ್ಲವೂ ಅತ್ತರೂ ಥೊಕ ಎಂಬ ಒಬ್ಬ ರಾಕ್ಷಸಿಯ ಅಸೂಯೆಯಿಂದ ಅವನನ್ನು ಉಳಿಸಿಕೊಳ್ಳಲಾಗುವುದಿಲ್ಲ. ಅಸೂಯಾಪರನು ಎಷ್ಟು ವಿನಾಶಕಾರಿಯಾಗಬಹುದೆಂಬುದನ್ನು ಈ ಕತೆಗಿಂತ ಉತ್ತಮವಾಗಿ ಚಿತ್ರಿಸುವುದು ಸುಲಭ ಸಾಧ್ಯವಲ್ಲ.

ಈ ಸಂಕಲನದ ಇತರ ಅನೇಕ ಕತೆಗಳಲ್ಲಿ ನಮಗೆ ಕಂಡುಬರುವ ವಿಶೇಷ, ಸಮಕಾಲೀನ ಸ್ಥಿತಿಯ ಬಗೆಗಿನ ವಿಡಂಬನೆ 'ಬಲೆಬೆಸ್ತರು' ವಿನ ಈ ವಾಕ್ಯವನ್ನು ನೋಡಿ ಜಾಗತಿಕ ಆರ್ಥಿಕ ಕುಸಿತ ಮತ್ತು ಅದರ ಪರಿಣಾಮವಾಗಿ ಸಂಕಷ್ಟಗಳು ಬಂದವು. ಹಳ್ಳಿಯ ಜನ ಉಪವಾಸದ ಅಂಚನ್ನು ತಲುಪಿದರು. ಅಧಿಕಾರಿಗಳು ಆಗಾಗ ಉಚಿತ ಆಹಾರ ಹಂಚುತ್ತಿದ್ದರು' (೩೩). 'ಬುಲ್ ಬುಲ್ ಹಕ್ಕಿಯಲ್ಲಂತೂ ಹೆಜ್ಜೆಹೆಜ್ಜೆಗೂ ಇದನ್ನು ಕಾಣುತ್ತೇವೆ;' (ಪ್ರಧಾನಿ) ಎಂಥವನೆಂದರೆ ತನಗಿಂತ ಕೆಳಗಿನವರ ಜೊತೆ ಅವನು ಮಾತಾಡುತ್ತಲೇ ಇರಲಿಲ್ಲ '(೪೪); 'ಸಂಗೀತ ವಿದ್ವಾಂಸ ಆ ಕೃತಕ ಹಕ್ಕಿಯನ್ನು ಕುರಿತು ಇಪ್ಪತ್ತೈದು ಸಂಪುಟಗಳ ಪುಸ್ತಕ ಬರೆದ ಈ ಪುಸ್ತಕದಲ್ಲಿ ಚೀನಿ ಭಾಷೆಯ ಅತಿದೊಡ್ಡ ಹಾಗೂ ಅತಿಕ್ಲಿಷ್ಟ ಪದಗಳನ್ನು ಅವನು ಬಳಸಿದ್ದ. ಆದ್ದರಿಂದ ಎಲ್ಲರೂ ನಾವದನ್ನು ಓದಿದ್ದೇವೆ ಮತ್ತು ಅರ್ಥಮಾಡಿಕೊಂಡಿದ್ದೇವೆ ಎಂದರು' (೫೭): ತನ್ನ ಕಲೆಗಿಂತಲೂ ಸ್ವಾತಂತ್ರ್ಯವನ್ನು ಹೆಚ್ಚು ಪ್ರೀತಿಸುತ್ತಿದ್ದ, ಕುಶಲಕರ್ಮಿ ನೆಬಕಡ್ನೆಜರ್ ಪ್ರಪಂಚ ಪರ್ಯಟನ ಮಾಡುತ್ತ ಸ್ವತಂತ್ರ ವ್ಯಕ್ತಿಯಾಗಿದ್ದಾಗ 'ಅವನ ಜೊತೆಯವರು ಮಾತ್ರ ಗುಲಾಮರಾಗಿ ಮುಂದುವರಿದಿದ್ದರು' ('ಹಾದಿಯ ಹಕ್ಕಿಗಳು' ೬೬) ಇತ್ಯಾದಿ

ಯೇನ್ಸ್ ಪೇಟರ್ ಯಾಕಬ್‌ಸನ್‌ರ 'ಎರಡು ಪ್ರಪಂಚಗಳು' ವಿನಲ್ಲಿಯ ಮೂಢನಂಬಿಕೆಯ ವಿಡಂಬನೆ ಬಹು ಗಂಭೀರ ಸ್ವರೂಪದ್ದು. ಗುಣಪಡಿಸಲಾಗದ ಬೇನೆಯಿಂದ ನರಳುತ್ತಿದ್ದ ಒಬ್ಬ ಹೆಂಗಸು 'ಪ್ರಾಜ್ಞರ' ಸಲಹೆಯಂತೆ 'ಶ್ವೇತಪುಷ್ಪದ ಒಂದು ಗುಚ್ಛ. ಒಂದು ಗಾಜಿನಚೂರು, ಸ್ವಲ್ಪಧಾನ್ಯ, ಶ್ಮಶಾನದಲ್ಲಿರುವ ಕೆಲವು ಗಿಡದ ಎಲೆಗಳ ಇತ್ಯಾದಿಗಳನ್ನು ಗಂಟುಕಟ್ಟಿ 'ನದಿಯಲ್ಲಿ ಸಾಗಿ ಹೋಗುತ್ತಿರುವ ಆರೋಗ್ಯಶಾಲಿ, ನವತರುಣ ಸ್ತ್ರೀಯೊಬ್ಬಳ' ಕಡೆ ಎಸೆದು ತನ್ನ ಬೇನೆ ಅವಳಿಗೆ ಸೇರಿ ತಾನು ಆರೋಗ್ಯವಂತಳಾಗುತ್ತೇನೆಂದು ಭಾವಿಸುತ್ತಾಳೆ. ಮಾನಸಿಕ ರೋಗಿ ಒಂದು ರೀತಿಯಲ್ಲಿ ನದಿಯ ದಂಡೆಯಲ್ಲಿರುವಾಗ ಅದೇ ಯುವತಿ ಹಿಂದಿಗಿಂತ ಹೆಚ್ಚು ಸಂತೋಷಭರಿತಳಾಗಿ, ಯಾವ ಅನಾರೋಗ್ಯದ ಕುರುಹೂ ಇಲ್ಲದ ದೇಹಿಯಲ್ಲಿ ಅವಳ ಮುಂದೆಯೇ ಸಾಗಿ ಹೋಗುತ್ತಾಳೆ !

ಹೆನ್ ರಿಕ್ ಇಬ್ಸೆನ್, ಸ್ಟ್ರಿಂಡ್‌ಬರ್ಗ್‌‌ರ ನಾಟಕಗಳನ್ನು ನೆನಪಿಗೆ ತರುವ 'ತಂದೆ' (ಬ್ಯೋರ್ನ್‌ಸ್ಟೈರ್ನೆ ಬ್ಯೋರ್ನ್‌ಸೋನ್-ನಾರ್ವೆ) ಈ ಸಂಕಲನದಲ್ಲೇ ಅತಿ ಚಿಕ್ಕದಾದರೂ ಅತ್ಯುತ್ತಮ ಕತೆ. ಕತೆ ಎನ್ನುವುದಕ್ಕಿಂತ ಒಂದು ದರ್ಶನ ಎನ್ನಬಹುದು ಇದನ್ನು. ತನ್ನ ಮಗನನ್ನು ತನ್ನ ಜೀವವೆಂದೇ ಬೆಳೆಸಿದ (ಒಂದು ವಿಶಿಷ್ಟ ತಂತ್ರವನ್ನು ಬಳಸಿ ತನ್ನ ಮಗನ ಬಗೆಗೆ ಅವನ ಜೀವನದ ಮೂರು ಘಟ್ಟಗಳಲ್ಲಿ ಪಾದ್ರಿಯನ್ನು ಸಂದರ್ಶಿಸುವಾಗಿನ ಅಲ್ಪ ಸಂಭಾಷಣೆಯ ಮೂಲಕ—ಇದರ ಅರಿವನ್ನು ನಮ್ಮಲ್ಲಿ ಮೂಡಿಸ

ಲಾಗುತ್ತದೆ.) ಟೋರ್ಡ್ ಮಗನ ಮದುವೆಯು ಸಿದ್ಧತೆಯಲ್ಲಿರುವಾಗಲೇ ಆಕಸ್ಮಿಕವೊಂದರಲ್ಲಿ ಅವನನ್ನು ಕಳೆದುಕೊಂಡು ಕ್ರಮೇಣ ತನ್ನ ಮಗನ ಮೇಲಿನ ಪ್ರೀತಿಯನ್ನು ಬಡಬಗ್ಗರಲ್ಲಿ ಹಂಚಿಕೊಳ್ಳುತ್ತಾನೆ. ಸ್ವೀಡನ್ನಿನ ಕತೆ 'ಪ್ರೇಮ ಮತ್ತು ರೊಟ್ಟಿ' (ಆಗಸ್ಟ್ ಸ್ಟ್ರಿಂಡ್‌ಬರ್ಗ್) ಪ್ರೇಮಿಗಳಿಬ್ಬರು ತಮ್ಮ ಅಗಾಧ ಪ್ರೇಮದೆದುರು ಯಾವುದೇ ಲೌಕಿಕ ಸಮಸ್ಯೆ–ಮುಖ್ಯವಾಗಿ ರೊಟ್ಟಿಯ ಸಮಸ್ಯೆಯನ್ನು 'ನಿನ್ನ ವಿವಾಹ ಪೂರ್ವದ ಈ ಅವಧಿಯನ್ನು ಸರಿಯಾಗಿ ಉಪಯೋಗಿಸಿ ನಿನ್ನ ಸಂಪಾದನೆ ಹೆಚ್ಚಿಸೋದಕ್ಕೆ ಪ್ರಯತ್ನಿಸು–ಅಲಕ್ಷಿಸಿ, ವಿವಾಹದ ಪ್ರಥಮ ದಿನಗಳನ್ನು ಸ್ವರ್ಗಸುಖದಲ್ಲಿ ನಿಶ್ಚಿಂತೆಯಾಗಿ ಕಳೆದು ಮುಂದೆ ಸಾಲ ಸೋಲಕ್ಕೀಡಾಗಿ ಮರಗುವ ಸಾಮಾನ್ಯಕತೆಯಾದರೂ ಈ ವಸ್ತುವನ್ನು ಬೆಳೆಸಿರುವಲ್ಲಿ ಅದನ್ನು ನೋಡುವ ದೃಷ್ಟಿಕೋನದಲ್ಲಿ, ಈ ಕತೆಯ ವಿಶಿಷ್ಟತೆ ಇದೆ. ಉದಾಹರಣೆಗೆ ಮದುವೆಯಾಗಿ ವರ್ಷದ ನಂತರ ಅಳಿಯನ ಮನೆ ಜಪ್ತಾಗಿ ತನ್ನ ಮಗಳು, ಮೊಮ್ಮಗಳು ಬೀದಿ ಪಾಲಾಗುವುದನ್ನು ಸಹಿಸಲಾರದೆ ಅವರನ್ನು ಮನೆಗೆ ಕರೆತರುವಾಗಿನ ಮುದುಕನ ಭಾವನೆಯ ತೀವ್ರತೆ ನೋಡಿ : 'ಒಂದು ವರ್ಷಕಾಲ ತನ್ನ ಮಗಳನ್ನು ತರುಣನೊಬ್ಬನಿಗೆ ಬಾಡಿಗೆಗೆ ಕೊಟ್ಟಿದ್ದೆ: ಆತ ಅವಳ ಮಾನಭಂಗ ಮಾಡಿ ಈಗ ಹಿಂದಿರುಗಿಸುತ್ತಿದ್ದಾನೆ ಎಂದು ಗಾಡಿಯಲ್ಲಿ ಹಿಂತಿರುಗುವಾಗ ಮುದುಕನಿಗನ್ನಿಸಿತು' (೧೨೧).

ಸ್ವೀಡನ್ನಿನದೇ ಇನ್ನೊಂದು ಕತೆ 'ವಿಚಿತ್ರ ಪ್ರವಾಸಿ' (ಪೇರ್ ಓಲಾಫ್ ಸುಂಡ್ಮಾನ್) ಸಾಕಷ್ಟು ವಿಶಿಷ್ಟತೆಯನ್ನು ಹೊಂದಿದೆ. ನಿಲ್‌ಫೆರ್ತ್ ಸದೃಢಕಾಯದ ಆಕರ್ಷಕ ಹಾಗೂ ಬಿಚ್ಚು ಮನಸ್ಸಿನ ವ್ಯಕ್ತಿ. ಆದರೂ ಈತ ಹೋದ ಹೋಟಲಲ್ಲೆಲ್ಲಾ ಇವನ ಬಗ್ಗೆ ಇತರರು ಆತಂಕಪಡುತ್ತಾರೆ. ಅವರ ಮನಶಾಂತಿ ಕದಡುತ್ತದೆ. ಹೋಟಲ ಮಾಲೀಕ ಅವನನ್ನು ಯಾವುದಾದರೂ ರೀತಿಯಿಂದ ಸಾಗಹಾಕಲು ಪ್ರಯತ್ನಿಸುತ್ತಾನೆ. ಕಾರಣ—'ಅವನು ಊಟಕ್ಕೆ ತನ್ನದೇ ತಟ್ಟೆ, ಚಮಚಗಳನ್ನು ಬಳಸ್ತಾನೆ. ಅದನ್ನು ಆಮೇಲೆ ತನ್ನ ಕೋಣೆಗೆ ತೆಗೆದುಕೊಂಡು ಹೋಗಿ ಲಾಷಬೇಸಿನ್‌ನಲ್ಲಿ ತೊಳೆದು ಬಿಡ್ತಾನೆ. ಅಷ್ಟೇ ಅವನು ಕೊಡೋ ತೊಂದರೆ' (೧೩೧). ನಿಲ್‌ಫೆರ್ತ್ ಸಭ್ಯತೆಯ ಪ್ರತೀಕವೂ ಹೌದು. ತಾನು ಎಂದೂ ಬೇಡವಾಗುತ್ತೇನೆಂಬ ಅರಿವು ಅವನಿಗೆ ಮೊದಲೇ ಆಗುತ್ತದೆ, ಹೋಟೆಲ್ ಮಾಲೀಕನನ್ನು ಯಾವ ಮುಜುಗರಕ್ಕೂ ಸಿಲುಕಿಸದೆ ತಾನೇ ಮುಂದಾಗಿ ಬೇರೊಂದು ಹೋಟಲಿಗೆ ಹೋಗಬಯಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಸ್ವಾವಲಂಬಿಯಾದ ಬಿಚ್ಚು ವ್ಯಕ್ತಿ, ಇತರರ ಯಾವ ಗೊಡವೆಗೂ ಹೋಗದ ವ್ಯಕ್ತಿ. ಆ ಕಾರಣದಿಂದಲೇ ಇಂದಿನ ಪರಿಸರದಲ್ಲಿ ಎಷ್ಟು ಅಸಹ್ಯನಾಗುತ್ತಾನೆ ಎಂಬುದರ ಸುಂದರ ವಿಡಂಬನೆ 'ವಿಚಿತ್ರ ಪ್ರವಾಸಿ'.

ಫಿನ್‌ಲೆಂಡಿನ 'ಪರಿಶುದ್ಧಮಾನವ ಕುಲ' (ಮಾರ್ತಿ ಲಾರ್ನಿ) ವರ್ಣಭೇದವನ್ನು ಅತ್ಯಂತ ಮೊನಚು ಮಾತುಗಳಿಂದ ವಿಡಂಬಿಸಿದರೂ ಕಲಾತ್ಮಕವಾಗಿ ಪರಿಪೂರ್ಣ ವಾಗಿರುವ ಒಂದು ಉತ್ಕೃಷ್ಟ ಕತೆ. ವರ್ಣದ್ವೇಷವನ್ನು ನಿರ್ನಾಮ ಮಾಡಲು ಪಣತೊಟ್ಟ ಸಮಾಜ ವಿಜ್ಞಾನಿಯ ಅದ್ಭುತ ಯೋಜನೆ ಹೀಗಿದೆ...ಆದ್ದರಿಂದ ಶ್ರೇಷ್ಠ ಜೀವರಸಾಯನ ಶಾಸ್ತ್ರಜ್ಞರು ಹಿತಕರವಾದ ಪಾಮ್ ಪಾಮ್ ಪಾನೀಯವನ್ನು ತಯಾರಿಸಲು ತಡ ಮಾಡಬಾರದೆಂದು ನಾನು ಸೂಚಿಸುತ್ತೇನೆ. ಅದನ್ನು ಪ್ರಪಂಚದ ಎಲ್ಲಾ ಕರಿಯರಿಗೆ ಪ್ರಕ್ಕಟೆಯಾಗಿ ಒದಗಿಸಬೇಕು...ಅದರಿಂದಾಗುವ ಪ್ರಯೋಜನ ವೇನೆಂದರೆ, ಅದನ್ನು ಸೇವಿಸಿದವರೆಲ್ಲಾ ಸಂತಾನ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ, ಕಪ್ಪು ಚರ್ಮದ ಜನರಿಗೆ ಮಕ್ಕಳಾಗುವುದು ನಿಂತು ಹೋದರೆ ಜಗತ್ತು ಇನ್ನೂ ಅರವತ್ತು ವರ್ಷಗಳಲ್ಲಿ ತನ್ನ ಬಂಧಮುಕ್ತ ಗುಲಾಮರಿಂದ ವಿಮೋಚನೆ ಪಡೀತದೆ. ನಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ ಎಂಥ ಭವ್ಯ ಭವಿಷ್ಯ ಕಾದಿದೆ ! ಅನಂತರ ಅಮೇರಿಕದಲ್ಲಿ ವರ್ಣದ್ವೇಷ ಇರುವುದೇ ಇಲ್ಲ' ಇತ್ಯಾದಿ. (೧೪೫).

ಇಟಲಿ, ಆಸ್ಟ್ರಿಯಾ ಕತೆಗಳನ್ನೊಳಗೊಂಡ **'ಡೇಗೆ ಹಕ್ಕಿ'** ಸಂಪುಟದಲ್ಲಿಯೂ ವಿಡಂಬನಾತ್ಮಕ ಕತೆಗಳು ನಮ್ಮನ್ನು ಆಕರ್ಷಿಸುತ್ತವೆ. ಜೊತೆಗೇ ನಾಜೀ ಅತ್ಯಾ ಚಾರ, ಬಡತನ, ಶೋಷಣೆಗಳನ್ನು ವಾಸ್ತವವಾಗಿ ಬಿಂಬಿಸುವ ಕತೆಗಳೂ ಇಲ್ಲಿವೆ.

ಬೊಕಾಚ್ಚೊನ 'ಡೇಗೆ ಹಕ್ಕಿ' ಜಗತ್ಪ್ರಸಿದ್ಧವಾಗಿರುವ ಕತೆ. ತಾನು ಮನಸಾರೆ ಪ್ರೇಮಿಸಿದ ಹೆಣ್ಣು ತನ್ನನ್ನು ಧಿಕ್ಕರಿಸಿ ಇನ್ನೊಬ್ಬನನ್ನು ಮದುವೆಯಾದಾಗಲೂ ತನ್ನ ಪ್ರೇಮ ಎಳ್ಳಷ್ಟೂ ಅಳಿಯದೆ, ಮುಂದೆ ವಿಧವೆಯಾಗಿ ತನ್ನ ಬಳಿ ಖಾಯಿಲೆ ಯಿಂದ ಬಳಲುತ್ತಿದ್ದ ಅವಳ ಮಗನ ಪರವಾಗಿ ತನ್ನ ಜೀವನ ಸರ್ವಸ್ವವೇ ಆಗಿದ್ದ ಡೇಗೆ ಹಕ್ಕಿಯನ್ನು ಬೇಡಲು ಬಂದ ಮೊನ್ನಾಜೊಕಾನ್ನಳಿಗೆ ಅವಳು ಬಂದುದರ ಕಾರಣವರಿಯದೆ ಅವಳ ಆತಿಥ್ಯಕ್ಕಾಗಿ ತನ್ನ ಜೀವವೇ ಆದ ಡೇಗೆ ಹಕ್ಕಿಯನ್ನೇ ಅಡುಗೆ ಮಾಡಿ ಬಡಿಸುತ್ತಾನೆ ಫೆದರಿಗೊ. ಭಿಕಾರಿಯಾದ ಅವನನ್ನೇ ಮುಂದೆ ಅವಳು ವಿವಾಹವಾಗಲಿಚ್ಛಿಸಿ ತನ್ನನ್ನು ಹೀಗಳೆದ ಜೊವಾನ್ನ ಹೇಳುತ್ತಾಳೆ. "ಸಂಪತ್ತು ಅಗತ್ಯವಿರುವ ಮನುಷ್ಯನನ್ನು ನಾನು ಆಯ್ದುಕೊಳ್ಳುವೆನೇ ಹೊರತು ಮನುಷ್ಯನ ಅಗತ್ಯವಿರುವ ಸಂಪತ್ತನ್ನಲ್ಲ." (೬೦)

'ಜ್ಯೋತಿಷಿ ಮತ್ತು ಕತ್ತೆ' ತತ್ವಜ್ಞಾನಿ ಜ್ಯೋತಿಷಿಯೊಬ್ಬ ಅತಿ ಸಾಮಾನ್ಯ ಪ್ರಾಣಿ ಯಾದ ಕತ್ತೆಯೊಂದರ ಸಾಮಾನ್ಯ ಜ್ಞಾನವನ್ನೂ ಹೊಂದಿರುವುದನ್ನು ಹೊರಗೆಡ ಹುವ ಹಾಸ್ಯಮಯ ಸನ್ನಿವೇಶವನ್ನು ಚಿತ್ರಿಸಿದರೆ, ಪೈಥಾಗೊರಾಸನ ಪ್ರಮೇಯ ಜಾಣಮಗನ ಎದುರು ಶತದಡ್ಡನಾದ ತಂದೆಯ ಭಾವನೆಯ ಚಿತ್ರಣವಿದೆ :

"ನೀನು ಗಣಿತದಲ್ಲಿ ನಿನ್ನ ತರಗತಿಯಲ್ಲೆಲ್ಲ ಮೊದಲಿಗ ಅಂತ ಕಾಣ್ತದೆ."

"ಇಲ್ಲ, ಇಲ್ಲ, ನನಗಿಂತಲೂ ಉತ್ತಮ ದರ್ಜೆಯವರು ಇಬ್ಬರಿದ್ದಾರೆ. ಇದಲ್ಲದೆ ನಿಮಗೆ ಚೆನ್ನಾಗಿ ಗೊತ್ತಿರೋ ಹಾಗೆ ಕಟ್ಟಾ ಕತ್ತೆಗಳ ಹೊರತು ಎಲ್ಲರೂ ನಲವತ್ತೇಳನೆಯ ಪ್ರಮೇಯವನ್ನು ಅರ್ಥ ಮಾಡಿಕೊಳ್ಳುತ್ತಾರೆ" ಎಂದ ಅವನು.

...ಮರೆಯಲಾಗದ, ದುರಂತ ಪರೀಕ್ಷೆಯ ದಿನದಂದು ಪ್ರೊಫೆಸರ್ ರೊಲೇನಿ ಉಪಯೋಗಿಸಿದ್ದ ಮಾತುಗಳನ್ನೇ ಇಪ್ಪತ್ತೇಳು ವರ್ಷಗಳ ಅನಂತರ ನನ್ನ ಮಗನ ಬಾಯಿಯಿಂದಲೇ ಕೇಳುತ್ತಿದ್ದೇನೆ! ಅಲ್ಲದೆ "ನಿಮಗೆ ಚೆನ್ನಾಗಿ ಗೊತ್ತಿರೋ ಹಾಗೆ" ಎಂಬ ಮಾತಿನ ಭಯಾನಕ ವ್ಯಂಗ್ಯವೂ ಈಗ ಬೆರೆತಿತ್ತು.

ತಾಯಿಯಿದ್ದರೂ ಒಂದು ರೀತಿಯಲ್ಲಿ ಅನಾಥನೇ ಆಗಿ ಒಬ್ಬನೇ ಏನೂ ಮಾಡಲು ತೋಚದೆ ತುಂಟತನಗಳ ಗೂಡಾಗಿ, ತನಗರಿವಿಲ್ಲದೆಯೇ ಒಂದು ಕೊಲೆಯನ್ನೇ ಮಾಡುವ ಸಣ್ಣ ಬಾಲಕ 'ಚೆನ್ನಿ'-ಪಿರಾಂದೆಲ್ಲೋ ಸಮಕಾಲೀನ ಸಮಾಜದ ಕಟುವಾಸ್ತವದ ಭಯಾನಕ ಸತ್ಯವೊಂದನ್ನು ಇಲ್ಲಿ ನಮ್ಮ ಮುಂದಿಟ್ಟಿದ್ದಾರೆ. 'ಲೂಲುಕಿನ ವಿಜಯ' ತಾನು ಪ್ರೀತಿಸಿ ವಿವಾಹ ನಿಷ್ಕರ್ಷೆಯೂ ಆಗಿದ್ದ ಯುವಕ ತನ್ನ ಅಕ್ಕನತ್ತ ಒಲಿದಿದ್ದಾನೆಂದು ತಿಳಿದಾಗ ತನ್ನ ದುಗುಡವನ್ನು ಹತ್ತಿಕ್ಕಿ ನಗುನಗುತ್ತಲೇ ಅಕ್ಕನಿಗಾಗಿ ಅವನನ್ನು ತ್ಯಾಗ ಮಾಡುವ ಲೂಲು ಪ್ರೀತಿಯ ಪರಾಕಾಷ್ಠೆಯನ್ನೇ ಮೆರೆಯುತ್ತಾಳೆ. ವಸ್ತುವಿನಲ್ಲಿ ಹೊಸದೇನಿರದಿದ್ದರೂ ಹೇಳುವ ರೀತಿ ಹೊಸದಿದೆ.

'ನನ್ನ ಸಾವಿನ ಕಥೆ' (ಲಾ ಉರೊ ದೆ ಬೋಸಿಸ್) ಮತ್ತು 'ಗುಪ್ತದಾಳಿ' (ಬೆಪ್ಪೆ ಫೆನೋಲ್ಯೋ)ನಾಜಿ ಜರ್ಮನಿಯ ಅತ್ಯಾಚಾರಗಳ ಹಿನ್ನೆಲೆಯಲ್ಲಿ ಬರೆದವು. 'ವಿಮಾನ ವಿರಲಿ, ಮೋಟಾರು ಸೈಕಲ್ಲನ್ನೂ' ನಡೆಸಲು ಬರದವ ವಿಮಾನವನ್ನು ನಡೆಸಿ 'ಸಂಕೋಲೆಯಲ್ಲಿ ಸಿಕ್ಕಿಕೊಂಡಿರುವ ಒಂದು ದೇಶದ ಜನತೆಗೆ ಸ್ವಾತಂತ್ರ್ಯದ ಸಂದೇಶವನ್ನು ಮುಟ್ಟಿಸಲು ಸಮುದ್ರ ದಾಟಿ' ಹೋಗಲೆಳೆಸುವ ಧೀರನ ಕತೆ. ಯುದ್ಧ ಕಾಲಗಳಲ್ಲಿ ಸಹಜವಾಗಿಯೇ ಉಪಯೋಗಿಸಲ್ಪಡುವ ಕರಪತ್ರಗಳನ್ನೂ ಕತೆಯ ತಂತ್ರದಲ್ಲಿ ಉಪಯೋಗಿಸಿಕೊಂಡಿರುವುದು ಇಲ್ಲಿ ಹೊಸತು.

ಆಸ್ಟ್ರಿಯದ ಕತೆಗಳಿಂದ ಇಲ್ಲಿ ಆಯ್ದಿರುವುಗಳಲ್ಲಿ 'ಸ್ಟೆಪ್‌ಫೀಲ್ಡ್' ಫ್ಯಾಂಟಸಿಯನ್ನು ಅದ್ಭುತವಾಗಿ ಉಪಯೋಗಿಸಿ ಮಾನವನ ವಿಲಕ್ಷಣ ಸ್ವಭಾವಗಳನ್ನು ಗುರುತಿಸುತ್ತದೆ. 'ಬಿಳಿಯ ಭಾವಿ' ನಾಜಿಪಿಶಾಚರುಗಳಿಗೆ ಬಲಿಯಾಗಲ್ಪಡುತ್ತಿದ್ದ ಯಹೂದಿಗಳ ಮನಃಸ್ಥಿತಿಯ ಮನಕಲಕುವ ಚಿತ್ರ. ಯಹೂದಿಗಳೊಡನೆ ನಾಜಿ ಚೆಕ್ಕಿನ ಚೆಲ್ಲಾಟದ ಒಂದು ನೋಟ: 'ಹದಿನಾರು ವರ್ಷದ ಚಿಕ್ಕ ಹುಡುಗ ಅಬ್ರಾಹಮ್, ಗಾಡಿಯ ಪಕ್ಕದಿಂದ ಹೊರಗೆ

ನೆಗೆದು ಓಡಾಡಲಾರಂಭಿಸಿದ. ಮೂರ್ಖ ಹುಡುಗ, ಏನಾದರೂ ಮಾಡುವ ಮೊದಲು ಯೋಚಿಸಬಾರದೇ ? ಎಲ್ಲವೂ ಪ್ರಶಾಂತ. ನಾವು ಉಸಿರು ಹಿಡಿದು ಕಿವಿಗೊಟ್ಟೆವು. ಆ ಮೇಲೆ ಎಲ್ಲ ಕಡೆಯಿಂದಲೂ ಗುಂಡಿನ ಶಬ್ದ, ಇಲಿಯೊಡನೆ ಬೆಕ್ಕು ಆಡುವಂತೆ ಅವರೂ ಅವನನ್ನು ಓಡಲು ಬಿಟ್ಟಿದ್ದರು, ಖಾಇಮ್‌ಗೆ ಬುದ್ಧಿಗೆಟ್ಟಿರ ಬೇಕು—ಅವನ ಬೇಟೆ ಅವರಿಗೆ ಖುಷಿಯಾಗಿ ಕಾಲ ಕಳೆಯಲು ಒದಗಿದ ಅವಕಾಶ. ಸೈನಿಕರು ಅವನನ್ನು ಸಾವಿಗೆ ದೂಡುತ್ತಾ ವಿನೋದದಿಂದ ನಗುವುದು ನಮಗೆ ಕೇಳಿ ಸಿತು. ಖಾಇಮ್...ಓಡುತ್ತಾನೆ, ಅವನ ಮೈಗೆ ಕಟ್ಟಿಕೊಂಡ ಹುರಿ ಸಡಿಲವಾಗು ತ್ತದೆ, ಷರಾಯಿ ಕೆಳಗೆ ಜಾರುತ್ತದೆ, ಅವನು ಒಂದು ಸಣ್ಣ ಹೊಂಡಕ್ಕೆ ಬೀಳುತ್ತಾನೆ, ಅವರ ಮೇಲಣ ಮಂಜುಗಡ್ಡೆ ಗಂಟೆ ಹೊಡೆದಂತೆ ಸಿಡಿಯುತ್ತದೆ. ಗುಡುಗಿನಂತಹ ನಗು. ಆಗ ರೈಲು ಹೊರಡುತ್ತದೆ. ಇನ್ನು ವ್ಯರ್ಥವಾಗಿ ಕಳೆಯಲು ಹೊತ್ತಿಲ್ಲ. ಬೇಟೆಯನ್ನು ಕೊನೆಯಲ್ಲಿ ಗುಂಡು ಹೊಡೆದು ಮುಗಿಸುತ್ತಾರೆ' (೧೨೦–೧೨೧)

ಆಸ್ಟ್ರಿಯದ ಇನ್ನುಳಿದ ಕತೆಗಳಲ್ಲಿ 'ಸತ್ತವರು ಮೂಕರು' (ಆರ್ಟುರ್ ಶ್ನಿಕ್‌ಸ್ಲರ್) ಮತ್ತು 'ಚಂದ್ರಕಿರಣದ ಓಣಿ' ಎರಡೂ ಪ್ರೇಮಕ್ಕೆ ಸಂಬಂಧಿಸಿದವು. ವಿವಾಹ ವಾಗಿದ್ದೂ, ತನ್ನ ಗಂಡ ಮತ್ತು, ಮುಖ್ಯವಾಗಿ ತನ್ನ ಮಗುವನ್ನು ಪ್ರೀತಿಸುತ್ತಿದ್ದೂ, ಯುವಕ ಫ್ರಾನ್ಸ್‌ನನ್ನು ಪ್ರೀತಿಸಿ ಆತನೊಡನೆ ಓಡಿಹೋಗಲೂ ನಿಶ್ಚಯ ಮಾಡುವ ಎಮ್ಮಾ ಫ್ರಾನ್ಸ್ ಆಕಸ್ಮಿಕವೊಂದರಲ್ಲಿ ಸತ್ತಾಗ ನಿಜಸ್ಥಿತಿಯ ಅರಿವಾಗಿ ಮನೆಗೆ ಮರುಳುವುದು 'ಸತ್ತವರು ಮೂಕರು'ವಿನ ವಸ್ತುವಾದರೆ ತನ್ನನ್ನು ಧಿಕ್ಕರಿಸಿ ತನ್ನೆದುರಿಗೆ ಪರಪುರುಷರೊಂದಿಗೆ ಮಲಗುವ ಪತ್ನಿಯನ್ನ ಮನಸಾರೆ ಪ್ರೀತಿಸುವ, ಅವಳನ್ನು ಸಧ್ಯದ ಶೋಚನೀಯ ಪರಿಸ್ಥಿತಿಯಲ್ಲಿಯೂ ಮತ್ತೆ ಸ್ವೀಕರಿಸಲು ಸಿದ್ಧನಿರು ವವನ ಕತೆ 'ಚಂದ್ರಕಿರಣದ ಓಣಿ'. ಮನೋವಿಶ್ಲೇಷಣೆಯೇ ಮುಖ್ಯವಾಗುಳ್ಳ ಈ ಕತೆಗಳಲ್ಲಿ ಘಟನೆಗಳು ಗೌಣ.

●

ಗಾತ್ರದಲ್ಲಿ ಪುಟ್ಟದಾದರೂ, ಗ್ರೀಕ್, ಸೈಪ್ರಸ್, ಟರ್ಕಿ ಕತೆಗಳಿಂದ ಕೂಡಿದ ಅವಸಾನ ಸಣ್ಣಕತೆಗಳ ಪ್ರಪಂಚದಲ್ಲೇ ಅತ್ಯುತ್ತಮವೆನ್ನಬಹುದಾದ ಹಲವು ಕತೆಗಳನ್ನು ನಮಗೆ ನೀಡುತ್ತದೆ. ಮೊದಲ ಕತೆ 'ಅವಸಾನ'ವೇ (ದೆಮೆತ್ರಿಯೊಸ್ ಬಿಕಿಲಾಸ್) ಇಂತಹ ದೊಂದು. ತನ್ನ ಕುರಿಗಳನ್ನು ಕಾಪಾಡಲು ಹುಚ್ಚು ತೋಳದಿಂದ ಕಚ್ಚಿಸಿಕೊಂಡು, ಸಮಾಜದ ಮೂಢ ನಂಬಿಕೆ ಅಮಾನವೀಯತೆಗಳಿಗೆ ಬಲಿಯಾಗಿ ತಾನು ಪಾರು ಮಾಡಿದ ಜನವೇ ತನ್ನನ್ನು ಗುಂಡಿಕ್ಕಿ ಕೊಲ್ಲುವ ಪ್ರಸಂಗವನ್ನೆದುರಿಸುವ ಅಮಾಯಕ ಖ್ರಿಸ್ತೋಫನ ಅವಸಾನ ಎಂಥ ಕಠಿಣ ಹೃದಯದವನ ಮನವನ್ನೂ ಕದಡುತ್ತದೆ.

'ಅಖಾಲಿಯ ರಾತ್ರಿ' (ಯೂಲಿಯಾ ಇಯಾತ್ರಿದಿಸ್) ಯಲ್ಲಿ ತನ್ನ ಪ್ರೀತಿಯ ಗಂಡ ಪರಸ್ತ್ರೀ ಸಂಗಮಾಡುವ ಆಘಾತಕರ ದೃಶ್ಯವನ್ನು ಕಂಡು ತನ್ನ ಅಸಹನೀಯ ದುಃಖವನ್ನು ನುಂಗಿಕೊಳ್ಳುವ ಜಿಲಿಯೋಳನ್ನು ಚಿತ್ರಿಸಿದರೆ, ಮಾತೃತ್ವ ಎಂಬುದು ಜನಾಂಗಗಳ ರಾಷ್ಟ್ರಗಳ ವೈರತ್ವವನ್ನು ಮೀರಿ ಯಾವ ಎತ್ತರಕ್ಕೆ ಏರಬಹುದೆಂಬುದರ ಮನೋಜ್ಞ ಚಿತ್ರಣ. ಸೈತಾನನ ಸ್ವರೂಪದಂತೆಯೇ ಇದ್ದು ಸ್ವಜನರಿಂದಲೆ ಅನಿಷ್ಟಕಾರಿ ಎಂದು ದೂಡಲ್ಪಟ್ಟ ಆರ್ಮೀನಿಯನ್ ಅನಾಥ ಮಗುವಿಗೆ ಬಡ ಚೀನೀ ಹೆಂಗಸು ಮೊಲೆ ಯೂಡಿಸುವ ದೃಶ್ಯ ಈ ಸಂಪುಟದಲ್ಲಿಯೇ ಕಣ್ಣಿಗೆ ಎದ್ದು ಕಾಣಿಸುವಂತಹದು : 'ಆಕೆಯ ಗಂಡ ಅವಳನ್ನು ಹತ್ತಿರ ಕರೆದು ಚಾಪೆಯಲ್ಲಿ ಕುಳಿತುಕೊಳ್ಳುವಂತೆ ಹೇಳಿದ. ಒಂದೇ ಒಂದು ಮಾತನ್ನು ಹೇಳದೆ ಹಸಿವೆಯಿಂದ ಚೀರುತ್ತಿದ್ದ ಮಗುವನ್ನು ಅವಳ ತೊಡೆಯ ಮೇಲಿರಿಸಿದ, ಆಶ್ಚರ್ಯಚಕಿತಳಾದ ಅವಳು ಮಗುವಿನ ಹೊದಿಕೆ ಸರಿಸಿ ನೋಡಿದಳು, ಅಲ್ಲಿ ಕಾಣಿಸಿತು ಅಸ್ಥಿಪಂಜರದ ಭಯಾನಕತೆ. ಅವಳ ಬಾಯಿಂದ ಅಪಾರ ಕರುಣೆ ಉಕ್ಕುವ ಉದ್ಗಾರವೊಂದು ಹೊರಬಿತ್ತು. ಆಕೆ ಮಗುವನ್ನು ಎದೆಗೊತ್ತಿಕೊಂಡು ಅದರ ಬಾಯನ್ನು ತನ್ನ ಮೊಲೆಗೆ ಹಚ್ಚಿದಳು. ಆ ಬಳಿಕ ಲಜ್ಜೆಯಿಂದ ಹಾಲುಕ್ಕಿ ಹರಿಯುತ್ತಿದ್ದ ತನ್ನ ಸ್ತನವನ್ನು ಒತ್ತಿ ಒತ್ತಿ ಹಾಲು ಹೀರುತ್ತಿದ್ದ ಮಗುವನ್ನು ಬಟ್ಟೆಯಿಂದ ಮರೆ ಮಾಡಿದಳು : (೫೨)

'ವೆಸ್ಟ್‌ಮಿನ್‌ಸ್ಟರ್' (ಗ್ರೀಸ್–ಯೋರ್ಯಿಸ್ ಥೆಪ್ರೊತೊಕಾಸ) ಮತ್ತು 'ಬಂಡಾಯ' (ಸಾಯಪ್ರಸ್– ಆಂದ್ರಿಆಸ್ ರೊಡಿತಿಸ್) ಫ್ಯಾಂಟಸಿಯನ್ನು ಬಳಸಿ ಬರೆದಿರುವ ಉತ್ತಮ ಕತೆಗಳು. ವೆಸ್ಟ್‌ಮಿನ್‌ಸ್ಟರ್‌ನ ಕೆಳಗೇ ಸುತ್ತಿ ಸುತ್ತಿ ಹೋಗುತ್ತಿರುವ ರೈಲಿನಲ್ಲಿಯ ಅಪರಿಚಿತ ಕ್ಷಣಕ್ಷಣಕ್ಕೂ ಗೂಢವಾಗಿ ಕಂಡುಬರುತ್ತಾ ಕೊನೆಗೊಮ್ಮೆ ತನ್ನ ಭೀಕರ ಸ್ಪಷ್ಟತೆಯನ್ನು ತೋರುತ್ತಾನೆ. 'ಈಬಾರಿ ಅವನಕಣ್ಣುಗಳು ನನ್ನವನ್ನು ಕೊರೆದಾಗ ನಾನು ದೃಷ್ಟಿ ಬದಲಿಸಲಿಲ್ಲ. ಸೋತು, ಸಮ್ಮೋಹನಗೊಂಡು, ಕಣ್ಣು ಕದಲಿಸಲಾರದೆ ನಾನು ಅವನನ್ನು ನೋಡಿದೆ. ಇದ್ದಕ್ಕಿದ್ದಂತೆ ಅವನ ಕೈ ಉಗುರುಗಳು ಉದ್ದಕ್ಕೆ ಬೆಳೆಯಲಾರಂಭಿಸಿದವು. ಅವನ ಪಾದಗಳೆಡೆಯಿಂದ ನೀಳವಾದ ತಲೆಯಿಲ್ಲದ ಹಂದಿಯ ಬಾಲದಂಥ ಅಂಗ ಹೊರ ಬಂತು. ಅವನ ಕಿವಿಗಳು ಚೂಪಾಗಿ ಮೊನಚಾಗಿ ಹೊಂದಿದವು' (೪೬). ' ಅನ್ಯಾಯದ ವಿರುದ್ಧ ಬಂಡಾಯವೆದ್ದಾಗ, ಆ ಬಂಡಾಯ ಸಂಪೂರ್ಣ ಬಂಡಾಯವಾದಾಗ ಆಗುವ ಗಲಿಬಿಲಿ, ಅಸ್ತವ್ಯಸ್ತತೆ, ಮತ್ತು ಸಂಪ್ರದಾಯದ ಅಸಹಾಯಕತೆಯನ್ನು ಬಿಂಬಿಸುವ 'ಬಂಡಾಯ'ದಲ್ಲಿ ಕಟ್ಟಡಗಳು ಬಂಡಾಯವೆದ್ದು ಸಮುದ್ರದೊಳಕ್ಕೆ ಸಾಗಿ ಹೋಗುತ್ತವೆ. ಹಡಗುಗಳನ್ನು ಢಿಕ್ಕಿ ಹೊಡೆದು ಮುಳುಗಿಸುತ್ತವೆ. ವಿಮಾನ ನಿಲ್ದಾಣಗಳ ಬಳಿ ಅವಿತು ವಿಮಾನಗಳು ಬಂದಾಗ ನೇರ ಎದ್ದುನಿಂತು ಅವುಗಳ ಮೇಲೆ ಬಿದ್ದು ಅವನ್ನು ಧ್ವಂಸ ಮಾಡು

ತ್ತವೆ. ಪರಿಣಾಮ : 'ಪರಿಸ್ಥಿತಿ ಹತೋಟಿ ಮೀರಿ ದೇಶದಲ್ಲೊಂದು ವಿಭ್ರಾಂತ ವಾತಾವರಣ ನೆಲೆಸಿದ್ದು ನಿಜ. ಇನ್ನೂ ಸ್ಥಿರವಾಗಿ ನಿಂತಿದ್ದ ಕಟ್ಟಡಗಳಿಗೆ ಜನರು ರೊಚ್ಚಿನಿಂದ ಬಡಿಯುತ್ತಿರುವುದು ಕಾಣಿಸಿತು. ಇನ್ನೂ ಕೆಲವರು ಬಂಡಾಯದ ಹುಮ್ಮಸ್ಸು ತಗ್ಗುವಂತೆ ಕಟ್ಟಡಗಳ ಮೇಲೆ ತಣ್ಣೀರು ಸುರಿಯುತ್ತಿದ್ದರು. ಈ ಕೆಡುಕನ್ನು ಉಚ್ಚಾಟಿಸುವುದಕ್ಕಾಗಿ ಮಂತ್ರವಾದಿಗಳನ್ನು, ಸಂತರ ಎಲುಬುಗಳನ್ನು ತರಲಾಯಿತು. ಪ್ರಾರ್ಥನೆ, ಪೂಜೆ ನಡೆಯಿತು. ಯಾವುದೂ ಫಲಕಾರಿಯಾಗ ಲಿಲ್ಲ.' (೧೧೩)

'ಮನೆಯನ್ನು ಕೊಳ್ಳುವ ಬಗೆ' (ಸೈಪ್ರುಸ್–ಲಾರೆನ್ಸ ಡರೆಲ್) ಉತ್ತಮ ಹಾಸ್ಯ ಪ್ರಜ್ಞೆಗೆ ನಿದರ್ಶನ. ವ್ಯಾಪಾರವನ್ನು ಕುದುರಿಸುವ ಏಜಂಟರನ್ನು ಇಲ್ಲಿ ವಿಡಂಬ ನೆಗೆ ಗುರಿಮಾಡಿದ್ದರೂ, ತುರ್ಕಿ ಕತೆ 'ವಿಚಿತ್ರ ಜನರು' (ಅಜಿಜ್ ನೆಸಿಸ್) ನಲ್ಲಿಯ ವಿಡಂಬನೆಯಂತೆ ಅರ್ಥಪೂರ್ಣವಾಗಿಲ್ಲ. ಕತೆಯ ಹೆಸರೇ ವ್ಯಂಗ್ಯ ವಿಡಂಬನೆಯನ್ನು ಸೂಚಿಸುತ್ತದೆ. ತನ್ನ ಜನರಿಗಾಗಿ ಎಲ್ಲವನ್ನೂ ತ್ಯಜಿಸಿ ಇತ್ತೀಚೆಗೆ ಸೆರೆಮನೆಯಿಂದ ಹೊರಬಂದ ನಾಯಕ ತನ್ನ ವಾಸಕ್ಕೆ ಪ್ರಶಾಂತ ಜಾಗವೊಂದನ್ನು ಆರಿಸಿಕೊಂಡಾಗ ಸ್ವಲ್ಪಕಾಲದಲ್ಲಿಯೇ ಆ ಜಾಗದಲ್ಲಿ ಒಂದು ಸಂತೆಯೇ ಬೆಳೆಯುತ್ತದೆ. ಅವನನ್ನು ಅಲ್ಲಿಯ ಜನ ಅಲ್ಲಿಂದ ಅಗಲಿ ಹೋಗಲು ಬಿಡುವುದೇ ಇಲ್ಲ. ತನ್ನ ಜನ ಇನ್ನೂ ತನ್ನ ಮೇಲಿಟ್ಟಿರುವ ವಿಶ್ವಾಸ, ಪ್ರೀತಿ ಅವನನ್ನು ಕರಗಿಸುತ್ತದೆ. ಆದರೆ ನಿಜ ಸ್ಥಿತಿ ಅರಿವಾದಾಗ! ಅವನ ಸೇವೆಗಾಗಿ ಅವನನ್ನು ಅವರು ಹಚ್ಚಿಕೊಂಡಿಲ್ಲ. ಅವನನ್ನು ಹಿಂಬಾಲಿಸಿ ಬಂದ ಪೋಲೀಸರು ಮಾರು ವೇಷದಲ್ಲಿ ಬಂದು ಅಲ್ಲೇ ನೆಲಸಿದರು. ಮತ್ತೆ ಕೆಲವು ಪೋಲೀಸರು ವ್ಯಾಪಾರಿಗಳಂತೆ ಬಂದರು. ಅವರೆಲ್ಲರ ಮೇಲೆ ಕಣ್ಣಿ ಡಲು ಮತ್ತಷ್ಟು ಜನ ಮಾರು ವೇಷದಲ್ಲಿ. ಕಿರಾಣಿಯವನ, ಹಣ್ಣಿನವನ, ತಿಂಡಿ ಮಾರುವವನ ಎಲ್ಲರ ವ್ಯಾಪಾರ ಕುದುರಿತು. ಈಗ ಈ ನಾಯಕ ಅಗಲಿದರೆ ನಮ್ಮ ವ್ಯಾಪಾರಕ್ಕೆ ಧಕ್ಕೆ! "ನೀವು ಹೋಗಲೇಬೇಕು ಅಂತಿದ್ದರೆ ನಾವು ಒಂದಿಷ್ಟು ಬಂಡ ವಾಳ ಮಾಡಿಕೊಂಡಮೇಲೆ ಹೋಗಿ" ! (೧೨೨)

'ಬೂದು ಬಣ್ಣದ ಕತ್ತೆ' (ರಫೀಕ್ ಹಲೀದ್) ಯೂ ಸರ್ಕಾರೀ ಅಧಿಕಾರಿಗಳ ವಿಡಂಬ ನೆಯಾದರೂ ಯಾವ ರೀತಿಯಿಂದಲೂ ಅಷ್ಟೇನೂ ವೈಶಿಷ್ಟ್ಯವಿಲ್ಲದ ಕತೆ ಅಥವಾ ರೀತಿಯ ಕತೆಗಳನ್ನೂ ಸಾಕಷ್ಟು ಈಗ ಕಾಣುತ್ತಿರುವುದರಿಂದ ನಮಗೆ ಹಾಗನ್ನಿಸು ವುದು ಸಹಜವೇನೋ !

●

ವಿಶ್ವಕಥಾಕೋಶದ ಸಂಪುಟಗಳ ಮೂಲಕ ನವ ಕರ್ನಾಟಕದವರು ಅತ್ಯಂತ ಸ್ತುತ್ಯ ಕಾರ್ಯಮಾಡುತ್ತಿದ್ದಾರೆಂದು ಹೇಳುವುದು ಪುನರುಕ್ತಿಯಾದರೂ ಅವನ್ನು ಒತ್ತಿ ಹೇಳುವುದು ಅವಶ್ಯಕ. ಪುಸ್ತಕಗಳ ಪ್ರಕಟನೆಯೇ ಒಂದು ಸಾಹಸವಾಗಿರುವಾಗ ಪೂರ್ವ ಯೋಜನೆಗೆ ತಕ್ಕಂತೆ ಅವುಗಳನ್ನು ಹೊರತರುತ್ತಿರುವುದು ಅಭಿನಂದನಾರ್ಹನೇ ಸರಿ. ನಿರಂಜನರ ಪ್ರಸ್ತಾವನೆಗಳನ್ನು ಪ್ರತ್ಯೇಕ ಸಂಪುಟದಲ್ಲಿಯೇ (ಷಾರವರ Prefaces ರೀತಿ) ಪ್ರಕಟಿಸುವ ಬಗ್ಗೆ ನವಕರ್ನಾಟಕದವರು ಯೋಚಿಸಬಹುದು.

DEVU PATTAR
GUTTIPETH
HANAPUR-585223

ಜೀವಿಸಿದ್ದಕ್ಕೆ ಸಾಕ್ಷಿ

ರಘು ಕುಲಕರ್ಣಿ

ಇಂಡಿಯಾದಲ್ಲಿ ಗಾಳಿ ಬೀಸುವುದಿಲ್ಲ
ಅಂದರೆ ಬೀಸುವದೇ ಇಲ್ಲವೆಂದಲ್ಲ
ಬೀಸುತ್ತದೆ.
ಆದರೆ ಪ್ರಾಣವಾಯುವಿರುವದಿಲ್ಲ.
ಕೇವಲ ಕಾರ್ಬನ್ ಡೈ ಆಕ್ಸಾಯಿಡೇ
ತಿಳಿಯಲಿಲ್ಲವೇ?
ಆದೇ ಬೀಸುತ್ತಿದೆಯಲ್ಲ ನಮ್ಮಮ್ಮನಗಾಳಿ
ಹೀಗಿದ್ದರೂ ನಾವು ಸರಾಗವಾಗಿ ಉಸಿರಾಡಿಸುತ್ತಿದ್ದೇವೆ.
ಅಂದರೆ ನಾವು ಜೀವಂತವಲ್ಲವೇ?
ಇದಕ್ಕೆ ಸಾಕ್ಷಿ ಅಂತೀರಾ?
ನಾವು ಊಟ ಮಾಡುತ್ತಿದ್ದೇವೆ
ಮಲಗುತ್ತಿದ್ದೇವೆ ಮಕ್ಕಳ ಹಡಿಯುತ್ತಲೇ ಇದ್ದೇವೆ
ನೋಡಿ ಸ್ವಾಮಿ ಇದೆಲ್ಲ ಸತ್ತವರು ಮಾಡುವುದು
ಸಾಧ್ಯವೇ? ಯೋಚಿಸಿ, ತಲೆ ತುರಿಸಿ
ಇದಕ್ಕೂ ಹೆಚ್ಚಿನ ಸಾಕ್ಷಿ ಪುರಾವೆ ಬೇಕೆನ್ನುತ್ತೀರಾ
ಅದನ್ನು ಸಾಬೀತು ಪಡಿಸುತ್ತೇನೆ
ಆ ಮಹಾತಾಯಿ ಹೋದರೆ ಗಾಳಿ
ಬೀಸುವುದೇ ಇಲ್ಲ ಎಂಬುದು ಖಂಡಿತ ಎಂಬಂತ್ರೆ
ಅವಳು ಭಾಯಿಯೋ ಬೆಹನೋ ಎನ್ನುವದೊಂದೇ
ತಡ ಜಯಜಯಕಾರ ಮಾಡಿ ಹಾಡಿ
ಆ ಐದು ಜೂರಿಯುಗುರಿನ ಕೈಗೇ ಮುದ್ರೆ
ಒತ್ತಿಯೇ ಮುಂದಿನ ಕೆಲಸ.

ಬೆಸಗರಹಳ್ಳಿ ರಾಮಣ್ಣನವರ 'ಒಂದು ಹುಡುಗನಿಗೆ ಬಿದ್ದ ಕನಸು'

ಎಸ್. ಶಿವಾನಂದ

ಬೆಸಗರಹಳ್ಳಿ ರಾಮಣ್ಣ ಸಂಕಲನದಿಂದ ಸಂಕಲನಕ್ಕೆ ಬೆಳೆಯುತ್ತಿರುವ ಕತೆಗಾರರು. ನವ್ಯಸಾಹಿತ್ಯ ಪ್ರಬಲ ನೆಲೆಯಾಗಿ ಮೆರೆಯುತ್ತಿದ್ದ ಕಾಲದಲ್ಲಿಯೆ ರಾಮಣ್ಣ ಆ ನೆಲೆಯಿಂದ ಸಂಪೂರ್ಣ ಭಿನ್ನವಾಗಿ ನಿಂತು ಕಥಾರಚನೆಗೆ ತೊಡಗಿದ ವಿಶಿಷ್ಟ ಕತೆಗಾರರು. ಅನಾಥಪ್ರಜ್ಞೆ, ಪರಕೀಯಪ್ರಜ್ಞೆ, ಅಂತರ್ಮುಖತೆ, ಸಂಕೀರ್ಣತೆ, ವಿಕ್ಷಿಪ್ತತೆ, ದ್ವಂದ್ವ ಮೊದಲಾದ ನಗರಜೀವನದ ಮಧ್ಯಮ ವರ್ಗದ ಅಭಿವ್ಯಕ್ತಿಯಾಗಿದ್ದ ನವ್ಯಕಥಾಮಾರ್ಗದಿಂದ ಇವರ ಕಥಾಸೃಷ್ಟಿಯ ಆಶಯಗಳು ೧೯೬೮-೬೯ರಲ್ಲಿ ಪ್ರಕಟವಾದ 'ನೆಲದ ಒಡಲು' ಸಂಕಲನದಿಂದಲಾಗಾಯ್ತು ಸಂಪೂರ್ಣ ವಿಭಿನ್ನ. ಇವರ ಕಥಾಸೃಷ್ಟಿಯ ಬೇರುಗಳು ಹಳ್ಳಿಯ ಬದುಕಿನ ನೆಲದಲ್ಲಿ ಚಿಗುರೊಡೆಯುತ್ತವೆ. ಕರುಳುಬಳ್ಳಿಯ ಸಂಬಂಧಗಳು ಅಥವ ತುಂಬಿ ನಲಿಯುವ ಅವಿಭಕ್ತ ಕುಟುಂಬ ಒಡೆದುಕೊಳ್ಳುವಂಥ ಪ್ರಸಂಗಗಳಲ್ಲಿಯೂ ಕಂಟಕಗಳಿಂದ ಪಾರಾಗಿ ಪೂರ್ವಸ್ಥಿತಿಗೆ ಹಿಂದಿರುಗುವ ಪಾತ್ರರಚನೆ-ಸನ್ನಿವೇಶಗಳನ್ನು ಇವರ ಪ್ರಾರಂಭದ ರಚನೆಗಳಲ್ಲಿ ಕಾಣಬಹುದು. ಗ್ರಾಮೀಣ ಸಮಾಜದ ಆದರ್ಶ ಜೀವನ ಎಂದು ತೋರುವ ಇಂಥ ಚಿತ್ರಣ ವಾಸ್ತವತೆಯ ಸರಳೀಕರಣವಾಗಿದ್ದರೂ ಮೂಲತಃ ಊಳಿಗ ಮಾನ್ಯ ವ್ಯವಸ್ಥೆಯ ಮೌಲ್ಯಗಳನ್ನು ಮತ್ತು ಸಂಬಂಧಗಳನ್ನು ತಳಹದಿಯನ್ನಾಗಿ ಮಾಡಿಕೊಂಡಿರುತ್ತದೆ. ಕೈಗಾರೀಕರಣ, ಬಂಡವಾಳಶಾಹೀ ಬೆಳವಣಿಗೆಗಳ ಪರಿಣಾಮವಾಗಿ ನಗರ ಜೀವನದ ಮಧ್ಯಮವರ್ಗ ರೂಪುಗೊಂಡು, ಸಾಂಸ್ಕೃತಿಕವಾಗಿ ನವ್ಯಸಾಹಿತ್ಯವನ್ನು ಸೃಷ್ಟಿಸಿದರೆ, ಗ್ರಾಮೀಣ ಜೀವನ ಊಳಿಗಮಾನ್ಯ ಸ್ವರೂಪದಲ್ಲೇ ಇದ್ದುದನ್ನು ಗಮನಿಸಿದಾಗ ರಾಮಣ್ಣ ಯಾಕೆ 'ನವ್ಯಮಾರ್ಗ' ದಿಂದ ಹೊರಗುಳಿದರು ಎಂಬುದನ್ನು ಸೂಕ್ಷ್ಮವಾಗಿ ಗ್ರಹಿಸಬಹುದು.

ಕರುಳುಬಳ್ಳಿಯ ಕೌಟುಂಬಿಕ ಸಂಬಂಧಗಳಿಂದ ಕುಡಿಯೊಡೆದ ಇವರ ಕಥಾಸೃಷ್ಟಿಯ ನೆಲೆ ಮನುಷ್ಯ ಮತ್ತು ಸಮಾಜದ ಹಾಗೂ ಇಡೀ 'ವ್ಯವಸ್ಥೆಯ' ಸ್ವರೂಪದವರೆಗೆ ವಿಸ್ತರಿಸಿಕೊಳ್ಳುತ್ತಾ ಬಂದಿದೆ. 'ಹರಕೆಯ ಹಣ' ಕಥಾಸಂಕಲನದಿಂದ ವಿಶೇಷವಾಗಿ ಗಮನ ಸೆಳೆದ ಇವರು ಪ್ರಸ್ತುತ 'ಒಂದು ಹುಡುಗನಿಗೆ ಬಿದ್ದ ಕನಸು' ಸಂಕಲನದ ಮುಖಾಂತರ (ನೆಲಮನೆ ಪ್ರಕಾಶನ: ಮೈಸೂರು) ನಮ್ಮ ಪ್ರಮುಖ ಕತೆಗಾರರಲ್ಲಿ ಒಬ್ಬರಾಗಿದ್ದಾರೆ.

ಈ ಸಂಕಲನದಲ್ಲಿ ಏಳು ಕತೆಗಳಿವೆ. 'ವ್ಯವಸ್ಥೆ'ಯ ಸಾಮಾಜಿಕ ರಾಜಕೀಯ ಶಕ್ತಿಗಳ ಕ್ರೌರ್ಯ, ಕಾಠಿಣ್ಯ, ಕೊಲೆಗಡುಕತನವನ್ನು ಈ ಕತೆಗಳು ಸ್ಫೋಟಿಸುತ್ತವೆ. ಸ್ವತ್ತಣ ಬದುಕಿನ ನೋವು, ಅಸಹಾಯಕತೆ, ಅವಮಾನ, ದುಃಖದುಮ್ಮಾನ: ಈ ಜೀವಸೆಲೆಗಳಿಗೆ ಸ್ಪಂದಿಸುವ ಜೀವಪರ ಆಶಯಗಳು ಈ ಕತೆಗಳಲ್ಲಿವೆ. ಇಂಥ ಜೀವಪರ ನಿಲುವು ಮತ್ತು ವಾಸ್ತವತೆಯ ಭೀಕರಸತ್ಯ ನಿಷ್ಠುರತೆಗಳನ್ನು ಒಡಲಲ್ಲಿ ತುಂಬಿಕೊಂಡ ಇಲ್ಲಿನ ಆಶಯಗಳು ಕತೆಗಾರನ ಶಕ್ತಿಸಾಮರ್ಥ್ಯಗಳನ್ನೇ ಅಗ್ನಿಪರೀಕ್ಷೆಗೆ ಒಡ್ಡುವಂಥವು. ಹಾಗಾಗಿ ಈ ಕತೆಗಳು ರಾಮಣ್ಣನವರ ಸಾಮರ್ಥ್ಯ ಹಾಗೂ ದೌರ್ಬಲ್ಯಗಳನ್ನು ಒಟ್ಟಿಗೇ ಹೊಮ್ಮಿಸುವುದರಿಂದಾಗಿ ಇವತ್ತಿನ ಕನ್ನಡ ಸಣ್ಣಕತೆಯ ಬಂಡಾಯ ನೆಲೆಯನ್ನೂ ಪ್ರತಿನಿಧಿಸುತ್ತವೆ.

●

ಎರಡು ಕುಟುಂಬಗಳ ನಡುವಿನ ವೈಮನಸ್ಯಕ್ಕೆ ಪ್ರಣಯಿಗಳಿಬ್ಬರು ಬಲಿಯಾಗುವುದನ್ನು 'ಶೂಲ' ಕತೆ ಅತ್ಯಂತ ಆಪ್ತವಾಗಿ ಚಿತ್ರಿಸುತ್ತದೆ. ಮಾಸ್ತಿಕಲ್ಲು ಅಮರಪ್ರೇಮ ಮತ್ತು ತ್ಯಾಗದ ಸಂಕೇತವಾಗಿ, ಕತೆಯಲ್ಲಿನ ಇಡೀ ಸನ್ನಿವೇಶ ಮಾಸ್ತಿಕಲ್ಲಿನ ಪುನರಭಿನಯವಾದಂತಿದೆ. ಇದಲ್ಲದೆ ಶೂಲದ ಹಬ್ಬ, ರಮ್ಯಪ್ರಸಂಗಗಳು. ಸಾಹಸ, ತ್ಯಾಗ ಮತ್ತು ದುರಂತ–ಇವುಗಳಿಂದಾಗಿ ಕತೆಯ ಒಟ್ಟು ಹಂದರ ಮತ್ತು ಪರಿಣಾಮಗಳು ಇದನ್ನೊಂದು ಜನಪದ ಕತೆಯನ್ನಾಗಿಸಿವೆ. ಗೌರಿಯ ಅಸಹಜ ಸಾವು ಮಾಸ್ತಿಕಲ್ಲಿನ ಒಳಗಿರುವ ಚಿತೆಯೇರಿದ ಹೆಣ್ಣಿಗೆ ಸಮೀಕರಣವಾಗಿ ಕತೆಗೆ ಭಾವುಕ ಅಂತ್ಯವನ್ನು ಕೊಡುತ್ತದೆಯೇ ವಿನಾ ಬೇರೊಬ್ಬನೊಂದಿಗೆ ಮದುವೆ ನಿಶ್ಚಯಿಸಿದಾಗ ಆಕೆಯ ಪ್ರತಿಭಟನೆಯ ಸ್ವರ ಎಲ್ಲೂ ಕೇಳಿಬರುವುದಿಲ್ಲ.

'ಬೇಲಾ' ಎಂಬುದು ಇಡೀ ಸಂಕಲನದಲ್ಲಿ ದೊಡ್ಡಕತೆಯಾದರೂ ಕಲೆಗಾರಿಕೆಯ ಶಿಸ್ತಿಲ್ಲದೆ, ಲೇಖಕರ ಆತ್ಮಕಥನದಂತೆ ಗೋಚರಿಸುತ್ತದೆ. ಕತೆಯುಲ್ಲಿ ಬರುವ ವಿವರಗಳು–ಸನ್ನಿವೇಶಗಳು ತೊಪ್ಪೆ–ತೊಪ್ಪೆಯಾಗಿ ಬರುತ್ತವೆಯೇ ಹೊರತೂ ಕಲಾತ್ಮಕವಾಗಿ ಮಿಡಿಯುವುದಿಲ್ಲ. ಬೇಲಾಳ ನೋವಿನ ಒಳಪ್ರಪಂಚಕ್ಕಿಂತ ತನ್ನ ಭಾವುಕ ಸಂಬಂಧದ ಪೋಜಿನಲ್ಲಿ ಇಲ್ಲಿನ ಲೇಖಕ ಭಾವತಪ್ತನಾಗುತ್ತಾನೆ. ಗಂಡು–ಹೆಣ್ಣಿನ

ಸಂಬಂಧವನ್ನು 'ಕೂಲಿ' ಕತೆಯಲ್ಲಿ ಅಮರಪ್ರೇಮ ಮತ್ತು ತ್ಯಾಗದ ಹಿನ್ನೆಲೆಯಲ್ಲಿ ನೋಡಿದ್ದರೆ. ಈ 'ಜೇಲಾ' ಕತೆಯಲ್ಲಿಯೂ ಅದು ಭಾವುಕತೆಯ ಸ್ತರದಲ್ಲಿ ನಿಂತಿರುವುದನ್ನು ಗಮನಿಸಿದಾಗ ಗಂಡು-ಹೆಣ್ಣಿನ ಸಂಬಂಧದ ಸೂಕ್ಷ್ಮಪಾತಳಿಗಳ ಒಳನೋಟವನ್ನು ಗ್ರಹಿಸಲು ಲೇಖಕರಿಂದ ಸಾಧ್ಯವಾಗಿಲ್ಲ ಎನ್ನಿಸುತ್ತದೆ.

'ಒಂದು ಹುಡುಗನಿಗೆ ಬಿದ್ದ ಕನಸು' ಹಾಗೂ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು'-ಇವು ರಾಜಕೀಯ ವಸ್ತುವನ್ನುಳ್ಳ ಕತೆಗಳು. ನಮ್ಮ ಪ್ರಜಾಪ್ರಭುತ್ವ ಮೇಲ್ನೋಟಕ್ಕೆ 'ಅಭಯಾರಣ್ಯ'ದಂತೆ ಕಂಡರೂ ಅಂತರ್ಯದಲ್ಲಿ 'ಭಯಾರಣ್ಯ' ಆಗಿರುವುದನ್ನು ಹೇಳಲು 'ಒಂದು ಹುಡುಗನಿಗೆ ಬಿದ್ದ ಕನಸು' ಕತೆ ಪ್ರಯತ್ನಿಸುತ್ತದೆ. ಕಪ್ಪು ಮುಖವಾಡ ತೊಟ್ಟ ವ್ಯಕ್ತಿಗಳು ಮೇಸ್ಟ್ರನ್ನು ಗುಂಡಿಕ್ಕಿ ಕೊಂದು ತೂಗು ಹಾಕುವ ಭೀಕರ ದೃಶ್ಯ ಕತೆಯ ಕನಸಿನ ಭಾಗದಲ್ಲಿದೆ. ಕತೆಯ ಆಶಯ ಸ್ಫೋಟಗೊಳ್ಳುವುದು ಕನಸಿನ ಈ ಭಾಗದಲ್ಲಿಯೇ. ಆದರೆ ಕನಸಿನಲ್ಲಿ ಜರುಗುವ ಭೀಕರ ಸ್ಫೋಟಕ್ಕೆ ಕತೆಯೊಳಗೆ ಮೊದಲಿಂದಲೂ ಕಾವು ಕೊಡುವ ಹಿನ್ನೆಲೆಯ ತಾರ್ಕಿಕ ಬೆಳವಣಿಗೆ ಕಾಣಸಿಗುವುದಿಲ್ಲ. ಮೊದಲ ಮೂರು ಭಾಗಗಳಲ್ಲಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿ ಮತ್ತು ಕರುಣಾಕರನ್ ಸ್ಮಾರಕ-ಇವುಗಳ ಪ್ರಸ್ತಾಪ ಅಪ್ಪ-ಮಗನ ಸಂಭಾಷಣೆಯಲ್ಲಿ ಬರುತ್ತದೆ. ಆದರೆ ಈ ಸಂಭಾಷಣೆ ಉದ್ದೇಶಪೂರ್ವಕವಾಗಿ ಜೋಡಿಸಿದ್ದಾಗಿದೆಯೇ ಹೊರತು ಕತೆಯ ಆಶಯವನ್ನು ಇದು ಆಂತರಿಕವಾಗಿ ಪೋಷಿಸುವುದಿಲ್ಲ. ಹಾಗಾಗಿ ಆಶಯವನ್ನು ಬಲಾತ್ಕಾರದಿಂದ ಬಾಯಿ ಬಿಡಿಸಲಿಕ್ಕಾಗಿಯೇ ಮೊದಲ ಮೂರು ಭಾಗಗಳನ್ನು ತಯಾರು ಮಾಡಿದಂತಿದೆ. ಇದರಿಂದಾಗಿ ಕತೆಯು ಆಶಯದ ಭಾರ ನಿರೀಕ್ಷಿಸುವಷ್ಟು 'ಕಥನ ಪೋಷಣಶಕ್ತಿ' (Sustenance) ಯನ್ನು ಪಡೆಯದೆ ಹೋಗಿದೆ.

ಗಾಂಧೀಜಿಯ ಮೌಲ್ಯಗಳನ್ನು ಗಾಂಧೀಜಿಯ ಹೆಸರಿನಲ್ಲಿಯೇ ಕೊಲೆ ಮಾಡುವುದನ್ನು ಹಾಗೂ ಪ್ರಜಾಪ್ರಭುತ್ವದ ಹೆಸರಿನಲ್ಲಿಯೇ ಸ್ವಾತಂತ್ರ್ಯ ಹರಣ ಮಾಡುವುದನ್ನು 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಕತೆ ಒಂದು ಮಟ್ಟದಲ್ಲಿ ಯಶಸ್ವಿಯಾಗೇ ಅಣಕ ಮಾಡುತ್ತದೆ. ನಿಜ. ಆದರೆ ಇಲ್ಲಿನ ಮಂಗಗಳು ಮತ್ತು ಇಡೀ ಸನ್ನಿವೇಶ ಒಂದು allegory ಯಾಗಷ್ಟೇ ಉಳಿಯುತ್ತದೆ.

'ಗಾಂಧಿ' ಕತೆಯಲ್ಲಿ ಬರುವ ಗಾಂಧಿ ಎಂಬ ಬಡ ಹುಡುಗನ ಸಾವು ಗಾಂಧೀಜಿಯ ಮರಣವೂ ಸಾವು ಎಂಬಂತೆ ಧ್ವನಿ ಹೊಮ್ಮಿಸುತ್ತದೆ. ಆದರೆ ಹುಡುಗನ ಸಾವಿನ ಅವನ ಸುತ್ತಲಿನ ಪರಿಸರ—'ವ್ಯವಸ್ಥೆ'—ಕಾರಣವಾಗುವುದರ ಬದಲು ಕುಟುಂಬದ ಬಡತನವೇ ಕಾರಣವಾಗಿರುವಂತೆ ಕತೆಯ ಅಂತ್ಯ ಸೂಚಿಸುತ್ತದೆ. ಹುಡುಗನ ಅಪ್ಪ-

ತಂಗಿಯುರು ಔಷಧಿಗಾಗಿ ಓಲೆಗಳನ್ನು ಗಿರವಿ ಇಡಲು ಕೊಡುವುದು; ಮತ್ತು ಹುಡುಗನ ಅಜ್ಜ ದುಡ್ಡಿಗಾಗಿ ಪರದಾಡುವುದು : ಈ ಚಿತ್ರಣ ಓದುಗನಲ್ಲಿ ಬಡತನದ ಬಗ್ಗೆ ಮರುಕ ಹುಟ್ಟಿಸುತ್ತದೆ. ಕತೆಯುಲ್ಲಿರುವ ವ್ಯಂಗ್ಯ, ಈ ಕಾರಣದಿಂದಾಗಿ, ಬೇರೆ ಆಯಾಮುಗಳನ್ನು ಪಡೆದು ಬೆಳೆಯುತ್ತಾ ಹೋಗುವ ಬದಲು ಗುರಿತಪ್ಪಿ, ಕತೆಗೆ ದಕ್ಕಬೇಕಾಗಿದ್ದ ಆಳ ಪ್ರಾಪ್ತವಾಗದೆ ಹೋಗಿದೆ,

ವಸ್ತು ಮತ್ತು ರೂಪದ (Form and Content) ನಡುವಣ ಪರಸ್ಪರ ಸಂಬಂಧವು ತನ್ನ ಅಂತರ್ ಪ್ರಕ್ರಿಯೆಯಲ್ಲಿ ಮೇಲಿನ ಮೂರು ಕತೆಗಳಲ್ಲಿ–ಯಾಕೆ ದುರ್ಬಲವಾಗಿದೆ ಎಂಬುದನ್ನು ಈಗ ಮತ್ತೊಂದು ನಿಟ್ಟಿನಲ್ಲಿ ಪರಿಶೀಲಿಸಬಹುದು. ಪ್ರಜಾಪ್ರಭುತ್ವ ಸ್ವಾತಂತ್ರ್ಯ ಮತ್ತು ಗಾಂಧೀಜಿ ಮೌಲ್ಯಗಳು—ಈ ಪರಿಕಲ್ಪನೆಗಳು (Concepts) ಕತೆಗಳ ವಿಚಾರಪ್ರಧಾನವಾಗಿವೆ. ಈ ವಿಚಾರಗಳು ಕತೆಗಳ ಆಶಯುವನ್ನು ರೂಪಿಸಿ ರುವ ಮೂಲಭಿತ್ತಿಯಾಗಿವೆ. ಇವು ಕತೆಗಾರ ಆಗಲೇ ಒಪ್ಪಿಕೊಂಡ ಮೌಲ್ಯಗಳಾಗಿ ರುವುದರಿಂದ ಆದರ್ಶ ಮೌಲ್ಯಗಳಾಗಿ ಕತೆಗಾರನನ್ನು ನಿರ್ದೇಶಿಸುತ್ತವೆ. ಈ ಆದರ್ಶ ನೆಲೆ ಕತೆಗಳ ಆಂತರಿಕ ಪ್ರಕ್ರಿಯೆಯುಲ್ಲಿ ಒಡಮೂಡಿದ್ದಾಗಿರದೆ, ಕತೆಗಾರನ ಪೂರ್ವ ಭಾವೀ, ಸ್ವೀಕೃತ, ಸಿದ್ಧ ಧೋರಣೆಯಾಗಿದೆ. ಹಾಗಂತ ಒಬ್ಬ ಲೇಖಕನಲ್ಲಿ ಸೃಷ್ಟಿ ಕ್ರಿಯೆಯ ಹಿನ್ನೆಲೆಯಲ್ಲಿ ವಿಚಾರಗಳು ಇರಬಾರದು ಎಂದರ್ಥವಲ್ಲ. ಅಂಥ ವಿಚಾರ ಗಳನ್ನು ಕುರಿತು ಲೇಖಕ ತಳೆಯುವ ದೃಷ್ಟಿಕೋನ–ಧೋರಣೆ ಎಂತಹದು ಯಾವ ನಿಟ್ಟಿನದು ಎಂಬುದು ಅತ್ಯಂತ ಮುಖ್ಯ. ವಿಚಾರಗಳು ನಿರುಕಿಸುವ ಧೋರಣೆ ಯಿಂದಾಗಿಯೆ ಕಲಾಕೃತಿಯ ಹಿಂದಿನ ಆಶಯಕ್ಕೆ ಮೂರ್ತರೂಪ ಇಲ್ಲವೆ ಅಮೂ ರ್ತತೆ ಒದಗುತ್ತದೆ. ಅಂದರೆ, ಲೇಖಕ ವಿಚಾರಗಳನ್ನು ಪಂಭಾವಿಸುವ ದೃಷ್ಟಿ-ಧೋರ ಣೆಯ ಪರಿಯೇ ಆಶಯುಗಳ ಶಕ್ತಿಸಾಮರ್ಥ್ಯಗಳನ್ನು ನಿರ್ಧರಿಸುತ್ತದೆ; ಮತ್ತು ಈ ಶಕ್ತಿಸಾಮರ್ಥ್ಯಗಳು ತಮ್ಮ ಅಳವಿಗೆ ತಕ್ಕಂಥ ಶರೀರವನ್ನು, ಸ್ವರೂಪವನ್ನು ಪಡೆ ಯಲು ಹವಣಿಸುತ್ತವೆ. ಹಾಗಾಗಿ ವಸ್ತು ಮತ್ತು ರೂಪದ ಸಾವಯವ ಸಂಬಂಧ ಲೇಖಕನ ಒಟ್ಟು ಜೀವನಾನುಭವ ಮತ್ತು ಜೀವನದೃಷ್ಟಿಯುನ್ನು ಅವಲಂಬಿಸಿರು ತ್ತದೆ. ಇದನ್ನು ಇನ್ನೂ ನಿಚ್ಚಳವಾಗಿ ಹೀಗೆ ಹೇಳಬಹುದು: ಒಂದು ಕೃತಿಯ ರೂಪವು ಮೂರ್ತ ಆಕಾರ ತಳೆಯುವ ಪ್ರಕ್ರಿಯೆ ಮೂಲತಃ ವಸ್ತುವಿನಲ್ಲಿನ ಆಶಯುಗಳ ಜೀವಸತ್ವವನ್ನು ಅವಲಂಬಿಸಿರುತ್ತದೆ; ಈ ಜೀವಸತ್ವ ಲೇಖಕನ ಜೀವನ ದೃಷ್ಟಿಯ ಸಾಮರ್ಥ್ಯದಿಂದ ರೂಪುಗೊಂಡಿರುತ್ತದೆ.

ರಾಮಣ್ಣನವರ ಪ್ರಸ್ತುತ ಕತೆಗಳಲ್ಲಿನ ವಿಚಾರಗಳಲ್ಲಿ ಭಾವುಕ ನಿಲುವು ಅಂತರ್ಗತ ವಾಗಿರುತ್ತದೆ; ಮತ್ತು ಈ ಭಾವುಕ ನಿಲುವು ಆದರ್ಶ ನೆಲೆಯಿಂದ ಒಡಮೂಡಿರು ವಂಥಾದ್ದು. ರೂಪದ ಶಿಥಿಲತೆಗೂ (ಕತೆಯ ಒಟ್ಟು ಪರಿಣಾಮಕ್ಕೂ) ಮತ್ತು

ಲೇಖಕ ವಸ್ತುವನ್ನು ಪರಿಭಾವಿಸುವ ದೃಷ್ಟಿಗೂ ಇರುವ ಪರಸ್ಪರ ಸಂಬಂಧವನ್ನು ಇಲ್ಲಿ ಮನಗಾಣಬಹುದು. ಅಲ್ಲದೆ ಕರಾಳತೆಯನ್ನು ವಾಸ್ತವತೆಯ ಇದೀ ಮುಖ ಎಂಬಂತೆ ಗ್ರಹಿಸುವುದರಿಂದ ವಸ್ತುಸ್ಥಿತಿಯ ನೆಲೆ ಋಣಾತ್ಮಕವಾಗಿಯೂ, ಇವರ ಎದುರುನೆಲೆಯಾದ ಆದರ್ಶೀಕೃತಮೌಲ್ಯಗಳು ಗುಣಾತ್ಮಕವಾಗಿಯೂ ಮುಖಾಮುಖಿಯಾಗಿ ನಿಲ್ಲುತ್ತವೆ. ವ್ಯಂಗ್ಯ-ವಿಷಾದಗಳ ಮೂಲನೆಲೆ ಇರುವುದು ಇಲ್ಲಿಯೇ. ಆದರ್ಶದ ನೆಲೆ ವಾಸ್ತವತೆಯ ಕರಾಳಮುಖವನ್ನು ಪೃಥಕ್ಕರಿಸಲು ಉದ್ಯುಕ್ತವಾಗುತ್ತದೆ. 'ಗಾಂಧಿ' ಕತೆಯಲ್ಲಿ ಎದ್ದುನಿಲ್ಲುವ ವ್ಯಂಗ್ಯ ಗಾಂಧೀಜಿಯನ್ನು ಆದರ್ಶನೆಲೆಯಲ್ಲಿ ನಿಲ್ಲಿಸುತ್ತಾ, ಇಡೀವಸ್ತುಸ್ಥಿತಿಯನ್ನು Anticlimaxನಲ್ಲಿ ಇಡುತ್ತದೆ. ಹೀಗೆಯೆ ಚಂದ್ರಶೇಖರ ಪಾಟೀಲರ 'ಗಾಂಧೀಸ್ಮರಣೆ' ಕವನದ 'ಯಶಸ್ಸು' ಇರುವುದು ಈ ನೆಲೆಯಲ್ಲಿಯೆ. "ನೆನೆನೆನೆ ಗಾಂಧಿಯನು/ಯಾವಗಾಂಧಿ ?' ಎಂಬ ಹಂತದಲ್ಲಿ ಚಂಪಾ ವರ್ತಮಾನದ ವಿಕೃತಿಯನ್ನು ಪರಿಶೀಲಿಸಲು ಬಳಸುವ ವ್ಯಂಗ್ಯದ ಹಿಂದೆ ಆದರ್ಶನೆಲೆಯ ಗಾಂಧೀಜಿಪ್ರತಿಮೆ ಇರುವುದನ್ನು ನೋಡಬಹುದು.

ಇನ್ನೊಂದು ನಿಟ್ಟಿನಲ್ಲಿ, 'ಪ್ರಜಾಪ್ರಭುತ್ವ 'ಹಾಗೂ 'ಒಂದು ಹುಡುಗನಿಗೆಬಿದ್ದ ಕನಸು ಕತೆಗಳನ್ನು ವಿಶೇಷವಾಗಿ ಅವು ರಚನೆಯಾದ ಕಾಲದ ಹಿನ್ನೆಲೆಯಲ್ಲಿಟ್ಟು ನೋಡಿದಾಗ ನಮ್ಮ ಲೇಖಕರ ರಾಜಕೀಯ ಪ್ರಜ್ಞೆ ಕುರಿತು ಸ್ವಲ್ಪ ವಿಚಾರ ಮಾಡಲು ಆಸ್ಪದವಾಗುತ್ತದೆ. ಈ ಕತೆಗಳು ತುರ್ತುಪರಿಸ್ಥಿತಿಯ ಹಿನ್ನೆಲೆಯಲ್ಲಿ ಸೃಷ್ಟಿಯಾದಂಥವು. 'ಪ್ರಜಾಪ್ರಭುತ್ವ...' ಕತೆ ತುರ್ತುಪರಿಸ್ಥಿತಿಯನ್ನು ನೇರವಾಗಿ ವಸ್ತುವನ್ನಾಗುಳ್ಳದ್ದು: ಮತ್ತು 'ಒಂದು ಹುಡುಗನಿಗೆ...' ಕತೆಯ ಕನಸಿನ ಭಾಗ ತುರ್ತುಪರಿಸ್ಥಿತಿಯ ಕರಾಳಮುಖವನ್ನು ಧ್ವನಿಸುವ ಫ್ಯಾಂಟಸಿ ಎಂಬಂತೆ ಕಾಣುತ್ತದೆ. ಒಟ್ಟಾರೆ, ಜನಗರಹಳ್ಳಿ ರಾಮಣ್ಣನವರನ್ನೊಳಗೊಂಡು ಆಪತ್ಕಾಲೀನ ಕವಿತೆ-ಕತೆಗಳನ್ನು ಬರೆದ ನಮ್ಮ ಅನೇಕ ಲೇಖಕರು ಸಾಂಸ್ಕೃತಿಕವಾಗಿ ಉಗ್ರ ಪ್ರತಿಭಟನೆಯನ್ನು ತೋರಿಸಿರುವಂಥಾದ್ದು ಧೀಮಂತಿಕೆಯಿಂದ ಕೂಡಿದ್ದು. ನಿಜ. ಆದರೆ ಈ ಸ್ವರದಲ್ಲಿಯೆ ಈ ಲೇಖಕರ ರಾಜಕೀಯ ಪ್ರಜ್ಞೆಯ ಬಗ್ಗೆ ಅನುಮಾನ ಏಳುತ್ತದೆ. ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸುವುದು ಸಾಹಿತಿಯ ಆದ್ಯ ಕರ್ತವ್ಯ ಎಂಬುದನ್ನು ಖಂಡಿತಾ ಮರೆಯುವಂತಿಲ್ಲ. ಆದರೆ ಇಲ್ಲಿ ಪ್ರಜಾಪ್ರಭುತ್ವ-ಸ್ವಾತಂತ್ರ್ಯಗಳಿಗೆ ಆಪತ್ತು ಎದುರಿಸಿದಾಗ ಮಾತ್ರವೇ ಅವುಗಳ ಮೂಲರೂಪದ ಬಗ್ಗೆ ಕಾಳಜಿ ವಹಿಸಿದಂತೆ ಕಾಣುತ್ತದೆ. ಎಮರ್ಜೆನ್ಸಿ ಇಲ್ಲದಾಗ ಪ್ರಜಾಸತ್ತೆ ಸ್ವಾತಂತ್ರ್ಯಗಳಿಗೆ ಯಾವ ಧಕ್ಕೆಯೂ ಇರುವುದಿಲ್ಲ: ಅವು ಸುರಕ್ಷಿತವಾಗಿರುತ್ತವೆ ಎಂಬ ಗ್ರಹಿಕೆ ಈ ಲೇಖಕರ ರಾಜಕೀಯ ಕಾಳಜಿಯ ಒಳಗೆ ಅಡಗಿರಬಹುದೇನೋ ಎಂಬ ಗುಮಾನಿ ಹೊಗೆಯಾಡುತ್ತದೆ. ಅಂದರೆ. ಒಂದು ವೇಳೆ ಆಪತ್ಸ್ಥಿತಿ ಒದಗಿ ಬರದಿದ್ದಲ್ಲಿ ಈ ರಾಜಕೀಯ 'ಕಾಳಜಿ' ನಮ್ಮ ಸಾಹಿತಿಗಳಲ್ಲಿ

ಹುಟ್ಟಲು ಆಸ್ಪದವೇ ಇರುತ್ತಿರಲಿಲ್ಲವೇನೋ. ಯಾಕೆಂದರೆ ಇವರ ರಾಜಕೀಯ ಕಾಳಜಿ 'ಶಾಕ್'ನಿಂದಾಗಿ ಹುಟ್ಟಿದ್ದೇ ವಿನಾ 'ವ್ಯವಸ್ಥೆ'ಯ ಬಗ್ಗೆ ವಸ್ತುಸ್ಥಿತಿಯ ವಸ್ತು ನಿಷ್ಠ ಒಳನೋಟದಿಂದ ಲೇಖಕನ ಒಟ್ಟು ಧೋರಣೆಯಾಗಿ ಮೊದಲಿನಿಂದಲೂ ಬೆಳೆಯುತ್ತಾ ಬಂದ ದೃಷ್ಟಿಯಲ್ಲ.

ಆದರೆ "ರಾಜಕೀಯ ಪ್ರಜ್ಞೆ" ಎಂಬುದು ಇಂಥ 'ಪರಿಸ್ಥಿತಿ' ಗಳಿಗಾಗಿ ಕಾದು, ಸ್ಫೂರ್ತಿ ಪಡೆಯುವಂಥದ್ದಲ್ಲ. ಮತ್ತೆ ಸ್ಪಷ್ಟಪಡಿಸಬೇಕೆಂದರೆ, ಮನುಷ್ಯ–ಮನುಷ್ಯ ಸಂಬಂಧಗಳ ನೆಲೆಯಲ್ಲಿ ಮನುಷ್ಯನಿಗೆ ನಿರಂತರವಾಗಿ ಒದಗುವ ಬದುಕಿನ ಆಪತ್ ಸ್ಥಿತಿ–ಗತಿಗಳನ್ನು ನಿಯಂತ್ರಿಸುವ ಸಾಮಾಜಿಕ ಶಕ್ತಿಗಳ ಒಟ್ಟು 'ವ್ಯವಸ್ಥೆ'ಯನ್ನು ಕುರಿತ ಒಳನೋಟದಿಂದ ಹೊಮ್ಮುವಂಥಾದ್ದು. ಆದ್ದರಿಂದ ರಾಜಕೀಯ ವಸ್ತುವನ್ನು ಒಳಗೊಂಡ ಮಾತ್ರಕ್ಕೆ 'ರಾಜಕೀಯ ಪ್ರಜ್ಞೆ' ಎಂಬುದು ಪೋಷಾಕು ಧರಿಸಿ ಬರುವಂಥದ್ದೇನಲ್ಲ,

ಸಂಕಲನದ ಉಳಿದೆರಡು ಕತೆಗಳು ರಾಮಣ್ಣನವರ ಆಂತರಿಕ ಬೆಳವಣಿಗೆಯ ಮತ್ತೊಂದು ದಿಕ್ಕನ್ನು ಸೂಚಿಸುವಂಥವು. ಅಸಹಾಯಕ ಜೀವಿಗಳ ಅಸಹಾಯ ಕತೆಯನ್ನು 'ಸಂತೆಯೊಳಗೊಂದು ಮನೆಯ ಮಾಡಿ' ಕತೆ ಸೂಚಿಸುತ್ತದೆ. ಹಸುಳೆಯ ತಲೆ ಒಡೆದು ರಕ್ತಸುರಿಯಲು ಕಾರಣನಾಗಿದ್ದರೂ ಪರಾರಿಯಾಗುವ ಕಪ್ಪುಕನ್ನಡಕದ ಸೈಕಲ್ ಸವಾರ ಮನುಷ್ಯನಲ್ಲಿನ ಪಾಪಪ್ರಜ್ಞೆಯು ಸೋಂಕಿಲ್ಲದ ಕಾಡುಮೃಗದ ವರ್ತನೆಗೆ ಸಂಕೇತವಾಗುತ್ತಾನೆ; ಹಾಗೆಯೆ ಪೋಲಿಸ್ ಠಾಣೆ ಮತ್ತೊಂದು ಮೃಗೀಯ ಲೋಕವಾಗಿ ಪರಿಣಮಿಸುತ್ತದೆ. ಮೇಲಿನ ಮೂರು ಕತೆಗಳಲ್ಲಿರುವಂತಹ ಆದರ್ಶ ನೆಲೆ ಈ ಕತೆಯಲ್ಲಿ ಇಲ್ಲದಿರುವುದು ಒಂದು ರೀತಿಯಲ್ಲಿ ಕತೆಗಾರರ ಆಂತರಿಕ ಬೆಳವಣಿಗೆಯನ್ನು ಸೂಚಿಸುತ್ತದೆ. ಆದರೆ ಆ ಕತೆಗಳಲ್ಲಿ ಆದರ್ಶನೆಲೆ ವೈಭವೀಕರಣಕ್ಕೆ ತುತ್ತಾದರೆ, ಇಲ್ಲಿ ವಾಸ್ತವತೆ ಸಂಪೂರ್ಣ ಕಪ್ಪು ಆಕೃತಿಯಾಗಿ, ಬಾಯ್ತೆರೆದ ಹೆಬ್ಬುಲಿಯಾಗಿ ವಿಜೃಂಭಿಸುತ್ತದೆ.

'ಚಲುವನ ಪರಂಗಿ ಗಿಡಗಳು' ಕತೆ, ಹಾಗೆ ನೋಡಿದರೆ, ವಸ್ತುಸ್ಥಿತಿಯನ್ನು ಗ್ರಹಿಸುವ ರೀತಿಯಲ್ಲಿ ಸ್ವಲ್ಪಮಟ್ಟಿಗೆ ಚಿತ್ರಿಸಿಕೊಂಡಿದೆ ಎನಿಸುತ್ತದೆ. ಘಟನೆ–ಸನ್ನಿವೇಶಗಳು ಒಂದರೊಳಗಿನಿಂದ ಇನ್ನೊಂದು ಬೆಳೆಯುತ್ತಾ, ಒಂದು ಇನ್ನೊಂದನ್ನು ಉದ್ದೀಪಿಸುತ್ತಾ ಕತೆಯ ಆಶಯವನ್ನು ಸಹಜಗತಿಯಲ್ಲಿ ಕರೆದೊಯ್ಯುತ್ತವೆ. ಮುಗ್ಧ ಚಲುವ ಪರಂಗಿ ಗಿಡಗಳನ್ನು ಬೆಳೆಸುವ ಪರಿಯು ಮೂಗೂರನಂಥ ಗೇಣಿದಾರ ಕರಲುಭೂಮಿಯಲ್ಲಿ ಭತ್ತ ಬೆಳೆಯುವ ಕ್ರಿಯೆಗೆ ಸಂವಾದಿಯಾಗಿ, ಬೆಳೆದ ಫಲ ಕೈಗೆ ದಕ್ಕದೇ ಹೋಗುವ ಘಟ್ಟದಲ್ಲಿ ಎರಡು ಪಾತ್ರಗಳೂ ಒಂದನ್ನೊಂದು ಭೇದಿಸಿಕೊಂಡು

ಕತೆಯಲ್ಲಿ ನಿಲ್ಲುತ್ತವೆ. ಉಳುವವನೇ ಭೂಮಿ ಒಡೆಯ ಎಂಬ ಸತ್ಯ ವಾಸ್ತವ ನೆಲೆಯಲ್ಲಿ ಭಿನ್ನ ಸತ್ಯವಾಗಿ ಪರಿಣಮಿಸುತ್ತದೆ: ಉತ್ತಭೂಮಿ ಉಳುವವನದಾಗುವುದಿಲ್ಲ: ಬೆಳೆದ ಫಲ ಬೆಳೆದವನದಾಗುವುದಿಲ್ಲ. ಗೋವಿಂದ ಸ್ವಾಮಿಯಂಥ ಭೂಮಾಲೀಕ ಮೂಗೂರನಂಥ ಗೇಣಿದಾರನನ್ನು ಒಕ್ಕಲೆಬ್ಬಿಸಿಯೂ ಪ್ರಭುತ್ವದ ಆಶ್ರಯ-ನೆಲೆ ದಕ್ಕಿಸಿಕೊಳ್ಳುವ ರೀತಿಯಲ್ಲಿ ಊಳಿಗಮಾನ್ಯ ವ್ಯವಸ್ಥೆಯು 'ಸತ್ಯದರ್ಶನ' ವಾಗುತ್ತದೆ. ಪರಂಗಿ ಗಿಡಗಳು ಮುಗ್ಧಮನಸ್ಸಿನ ಭಾವನೆಗಳಾಗಿ ಬೆಳೆಯುತ್ತಾ ಕ್ರೌರ್ಯಕ್ಕೆ, ದುರಂತಕ್ಕೆ ಈಡಾಗುವುದು ಮತ್ತು ಬೆಳೆದ ಪೈರು ಅನ್ಯರ ಪಾಲಾಗುವುದು 'ನೆಲೆ' ಇಲ್ಲದ ಬದುಕಿನ ಅವಸ್ಥೆಯನ್ನು ಸೂಚಿಸುತ್ತದೆ. ಬದುಕುವ ಅದಮ್ಯ ಆಸೆ ಪರಂಗಿ ಗಿಡಗಳನ್ನು ಮತ್ತೆ ನೆಟ್ಟು, ನೀರು ಹುಯ್ಯುವ ಕ್ರಿಯೆಯ ಮುಖಾಂತರ ಕತೆಯಲ್ಲಿ ಚಿಗುರೊಡೆಯುತ್ತದೆ.

ಬದುಕಿನ ಪ್ರೀತಿ-ಕ್ರೌರ್ಯಗಳನ್ನು ಒಟ್ಟಿಗೇ ಧ್ವನಿಸುವ ಇಲ್ಲಿನ ಜೀವನ ದೃಷ್ಟಿ ರಾಮಣ್ಣನವರ ಮುಂದಿನ ಬೆಳವಣಿಗೆ ಬಗ್ಗೆ ಅತ್ಯಂತ ಕುತೂಹಲವನ್ನು ಹುಟ್ಟಿಸುವಂಥಾದ್ದು. ಒಟ್ಟಾರೆ, 'ಒಂದು ಹುಡುಗನಿಗೆ ಬಿದ್ದ ಕನಸು' ಕಥಾಸಂಕಲನ ನಮ್ಮ ಸಮಕಾಲೀನ ನೆಲೆಯಲ್ಲಿ ಪ್ರಗತಿಪರ ಆಶಯಗಳನ್ನು ಗರ್ಭೀಕರಿಸಿ ಕೊಂಡೂ ವೈಚಾರಿಕವಾಗಿ ಮತ್ತು ಸಾಹಿತ್ಯಕವಾಗಿ ಎದುರಾಗುವ ತೊಡಕುಗಳನ್ನು ನಿಭಾಯಿಸಿ ಕೊಳ್ಳಲು ಪ್ರಯತ್ನಿಸುತ್ತಿರುವ ನಮ್ಮ ಸಣ್ಣ ಕತೆಗಳ ಗತಿಶೀಲತೆಯನ್ನು ಪ್ರತಿನಿಧಿಸುತ್ತದೆ.

ಲಚಮಿ

ಸಿ. ಎಂ. ಚನಬಸಪ್ಪ

ಲಚಮಿ : ನಮ್ಮೂರ ಕೇರಿಯ ಹುಡುಗಿ
ತುಂಬು ಯೌವ್ವನದ ಬೆಡಗಿ
ಹರೆ ಉಕ್ಕುವಾಗ ಅವಳಿಗೆ ಹರಕೆ ಹೊತ್ತ
ಅವರ ಅಪ್ಪ ಬಸವಿಯಾಗಿಬಿಟ್ಟ ದೇವರಿಗೆ.

ಮೆಟ್ಟು ಹೊಲಿಯುವ ಅವರಪ್ಪನಿಗೆ
ಗಿರಾಕಿಗಳಿಗೇನೂ ಕೊರತೆ ಇಲ್ಲ.
ತೀಟೆ ತೀರಿಸಿಕೊಳ್ಳಲು ಎಲ್ಲ ಜಾತಿಯವರು
ನಾಯಿಯಂತೆ
ಜೊಲ್ಲು ಸುರಿಸುತ್ತ ಬಾಲ ಅಲ್ಲಾಡಿಸುವರು

ದಲಿತ ಕ್ರಾಂತಿಯ ಮೆರವಣಿಗೆ
ಬಂತು ಒಂದು ದಿನ.
ಎಲ್ಲರೂ ಒಂದೇ ಎನ್ನುತ
ಹೊಕ್ಕರು ಗುಡಿ ಗುಂಡಾರವ ಜಹದಂಗಡಿ ಹೊಕ್ಕರು.

ಸಿಟ್ಟಿಗೆದ್ದ ಜನರು
ಹರಿಜನರ ಗುಡಿಸಲುಗಳ
ಸುಟ್ಟು ಬೂದಿ ಮಾಡಿದರು.
ಪಾಪ,
ಲಚಮಿ ಬದುಕುಳಿದು
ಅವರ ಅಪ್ಪ ಸತ್ತು ಬಿದ್ದ ಬೂದಿಯಾಗಿ.

ಲಚಮಿಯೊಡನೆ ಸಹವಾಸವಿದ್ದ
ಜೇಸು ಏಸುಮಂದಿರದಲ್ಲಿ ಲೂಸಿಯನ್ನಾಗಿ ಮಾಡಿ
ಸಂಗಾತಿಯನ್ನಾಗಿಸಿಕೊಂಡ
ಸುದ್ದಿ ಗೊತ್ತಾಗಿ
ಬೇರೆ ಜಾತಿಯ ಜನ ನಾಯಿಯಂತೆ ಇನ್ನೂ
ಜೊಲ್ಲು ಸುರಿಸುವದ ಕಂಡು
ಕನಿಕರ ನಗು ಬಂತು.

ಗೊರೂರು ಅವರ 'ಮೆರವಣಿಗೆ'

ಎಂ. ಜಿ. ಈಶ್ವರಪ್ಪ

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕನ್ನಡದ ಹಿರಿಯ ಬರಹಗಾರರು. ನಾಲ್ಕೈದು ದಶಕಗಳಿಂದ ಕನ್ನಡ ಸಾಹಿತ್ಯದ ಕೃಷಿ ನಡೆಸುತ್ತಾ ಬಂದಿರುವವರು. ಭೂತಯ್ಯನ ಮಗ ಅಯ್ಯು, ನಮ್ಮೂರ ರಸಿಕರು, ಹಳ್ಳಿಯ ಚಿತ್ರಗಳು, ಹೇಮಾವತಿಯ ತೀರದಲ್ಲಿ ಮುಂತಾದ ಕೃತಿಗಳಿಂದ ಗ್ರಾಮೀಣ ಸಂಸ್ಕೃತಿಯನ್ನು ದಾಖಲೆಮಾಡುವುದರ ಜೊತೆಗೆ ಶುದ್ಧ ಮತ್ತು ತಿಳಿ ಹಾಸ್ಯದ ಹೊಗರಿನ ಮಾದರಿಯನ್ನು ಉಳಿಸಿ ಕೊಟ್ಟಿರುವವರು. ಇತ್ತೀಚೆಗೆ ತಮ್ಮ 'ಅಮೇರಿಕದಲ್ಲಿ ಗೊರೂರು' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ ಪಡೆದಿರುವವರು. ಇವರ ಕೃತಿಗಳನ್ನು ಅಭ್ಯಾಸ ಮಾಡುವ ಸಹೃದಯ ಒಂದು ಮಾತನ್ನು ಗ್ಯಾರಂಟಿಯಾಗಿ ನೆನಪಿಟ್ಟುಕೊಳ್ಳ ಬೇಕಾಗುತ್ತದೆ. ಅದೇನೆಂದರೆ ಇವರ ಹಲವಾರು ಲೇಖನಗಳು, ಪ್ರಬಂಧ ಮತ್ತು ಕತೆ ಪ್ರಕಾರದ ಮಿಸಳಭಾಜಿಗಳೆಂದು. ಇಲ್ಲವೆ ಪ್ರಬಂಧವಾಗಿ ವರದಿಯಂತಿದ್ದದ್ದು ಒಂದು ಆಹ್ಲಾದಕರ ಘಟನೆಯನ್ನು ಹೇಳಿ ಕತೆಯಾಗಿ ಮಾರ್ಪಡುತ್ತದೆ.

'ಮೆರವಣಿಗೆ' ಇತ್ತೀಚೆಗೆ ಪ್ರಕಟವಾಗಿರುವ, ಸಾವಿರದ ಒಂಭೈನೂರ ನಲವತ್ತೆರಡನೆಯ ಇಸವಿಯಲ್ಲಿ 'ಭಾರತದಿಂದ ತೊಲಗಿ' ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆಯಲ್ಲಿದ್ದಾಗ ಬರೆದ, ಗಾತ್ರದಲ್ಲಿ ಬೃಹತ್ತಾದ, ಸುಮಾರು ೬೫೦ ಪುಟಗಳ ವರೆಗೆ ಹರಡಿಕೊಂಡಿರುವ ಕೃತಿ. ಇದನ್ನು ಶ್ರೀಯುತರು ಕಾದಂಬರಿ ಎಂದು ಕರೆದುಕೊಂಡು ಮಿನಿ ತಲೆಬರಹ ಗಳುಳ್ಳ ೫೭ ಪರಿಚ್ಛೇದಗಳಲ್ಲಿ ವಿಂಗಡಿಸಿದ್ದಾರೆ.

ಕಾದಂಬರಿಯ ಕತಾ ಕ್ಷೇತ್ರ ಹೇಮಾವತೀ ತೀರದ ಮಲ್ಲಿಗೇ ಹಳ್ಳಿ. ಆ ಹಳ್ಳಿಯಲ್ಲಿ ಶಾನುಭೋಗರದೇ ದರ್ಬಾರು. ಹಳ್ಳಿಯ ಯೋಗಕ್ಷೇಮದ ಬಗೆಗೆ ಕಾಳಜಿಯಿರುವವರು ಜಿಲ್ಲಾಧಿಕಾರಿಗಳಿಗಾಗಲಿ, ಸಬ್‌ಡಿವಿಜನ್ ಸಾಹೇಬರಿಗಾಗಲಿ, ಅಮಲ್ದಾರರಿಗಾಗಲಿ ಬೇಸರವೆ, ಮರೆಯುವೆ. ಊರ ಹಿತಕ್ಕಾಗಿ ಏನು ಬೇಕಾದರೂ ಮಾಡಲು ತಯಾರಾಗಿರುವ

ನೀತಿವಂತ ಜನ. ಈ ಹಳ್ಳಿಯು ಎಲ್ಲ ಜಾತಿಯ ಜನಗಳಿಂದಲೂ ಕೂಡಿದ್ದು ಅವರಲ್ಲಿರುವ ಒಗ್ಗಟ್ಟು ಹಿಂದೂಗಳ ಹಬ್ಬಕ್ಕೆ ಮುಸ್ಲಿಮರು, ಮುಸ್ಲಿಮರ ಹಬ್ಬಕ್ಕೆ ಹಿಂದೂಗಳು ಸೇರುವುದು, ಊರ ಹೊಳೆಯ ದುರಸ್ತಿಗೆ ಸರ್ಕಾರ ಹಣಕೊಡದೆಯಿದ್ದಾಗ ತಾವೇ ದುರಸ್ತಿ ಮಾಡಲು ತೊಡಗಿ ಮಂತ್ರಿಗಳು ಬಂದಾಗ ಅದಕ್ಕಾಗಿ ಹಣ ಮಂಜೂರು ಮಾಡಿಸಿಕೊಳ್ಳುವುದು. ಅಲ್ಲಿಯ ಶಾನಭೋಗನಿಗೆ ಇರುವ ಅಡ್ಡಹೆಸರುಗಳನ್ನೆಲ್ಲ-ರೆಡ್ ಇಂಕ್ ಶಾಮಯ್ಯಂಗಾರಿ, ನಾದಿರ್‌ಷಾ-ಹೇಳುವುದು ಮುಂತಾದ್ದು ಶಾನಭೋಗರ ಹಳ್ಳಿಯ ರಾಜ್ಯಭಾರದ ಚಿತ್ರಣವಾಗುತ್ತದೆ.

ಕಾದಂಬರಿಯ ನಾಯಕ ಸುದರ್ಶನ.ತಂದೆಯಿಲ್ಲದ ಹುಡುಗ. ತಂದೆ ಭರ್ಜರಿ ಸಾಲಮಾಡಿ ಸತ್ತುಹೋದ ನಂತರ ತಾಯಿಯ ಅಣ್ಣ ಅನಂತುವಿನ ಮನೆಯಲ್ಲಿ ತಾಯಿ ತಂಗಿ ಜೊತೆಗೆ ಇರುತ್ತಾನೆ.ಅನಂತು ಆ ಊರಿನ ಶ್ರೀಮಂತಕುಳ. ಸುದರ್ಶನ ಶಾಲೆಯ ವಯಸ್ಸಿಗೆ ಬಂದು ಶಾಲೆಗೆ ಸೇರಿದ ನಂತರ ೪೨ ನೇ ಇಸವಿ ಹಿಂದಿನ ಶಾಲೆಗಳು, ಉಪಾಧ್ಯಾಯರು, ಇನ್‌ಸ್ಪೆಕ್ಟರರು ಮುಂತಾದವರ ವಿವರಗಳೆಲ್ಲ ಪ್ರಾರಂಭವಾಗುತ್ತವೆ. ಅಂಥವರಲ್ಲಿ ತಿಪ್ಪಯ್ಯ ಉಪಾದ್ರು ಒಬ್ಬರು. ಈತ ಒಬ್ಬ ನಿಯತ್ತಾದ ಉಪಾಧ್ಯಾಯ. ಬೆತ್ತದಿಂದ ಬಾರಿಸದೆ ಮಕ್ಕಳಿಗೆ ವಿದ್ಯೆ ಹತ್ತೋದಿಲ್ಲ ಎಂಬ ತತ್ವದಲ್ಲಿ ನಂಬಿಕೆಯುಳ್ಳವ. ಅವರ ಸಾದಿಲ್ವಾರು ಲೆಕ್ಕದ ಪಡಿಪಾಟು, ಪೇಟದ ದುರಂತ, ಇನ್‌ಸ್ಪೆಕ್ಟರಿಗೆ ಚಳ್ಳೆಹಣ್ಣು ತಿನ್ನಿಸುವುದು, ಮಕ್ಕಳಿಗೆ ಆಟ ಹೇಳಿಕೊಡುವ ರೀತಿಗಳು ರಂಜನೀಯವಾಗಿವೆ. ಇವರ ಬಡತನ ನಿರೂಪಣೆಗಳು ಎಂ.ಆರ್. ಶ್ರೀಯವರ ಪುಸ್ತಕ ರಂಗಣ್ಣನ ಕನಸಿನ ದಿನಗಳನ್ನು ನೆನಪಿಗೆ ತರುತ್ತವೆ.

ಸುದರ್ಶನ ಹಾಸನ ಶಾಲೆಗೆ ಸೇರುವ ಹೊತ್ತಿಗೆ ತುಂಬ ತುಂಟನಾಗಿ ಬೆಳೆಯುತ್ತಾನೆ. ಒಮ್ಮೆ ತಿಪ್ಪಯ್ಯ ಉಪಾದ್ರು ಫುಟ್‌ಬಾಲ್ ಆಟದಲ್ಲಿ ಸೇರಿಸಿಕೊಳ್ಳಲಿಲ್ಲವೆಂದು ಫುಟ್‌ಬಾಲ್ ತೆಗೆದುಕೊಂಡು ಓಡಿಹೋಗಿ ಅವರ ಮನೆಯಲ್ಲಿ ಹಾಕಿ ಹೋಗುತ್ತಾನೆ. ತೆಂಗಿನ ಮರ ಹತ್ತಿ ಅಲ್ಲಿರುವ ಹಾವಿಗೆ ಹೆದರಿ ಉಸುಬಿನಲ್ಲಿ ಬಿದ್ದು ಸಾಹಸಿಯೆನಿಸಿಕೊಳ್ಳುತ್ತಾನೆ. ಹೊಸ ಅಧ್ಯಾಪಕನು ಬಂದು ಪ್ರಶ್ನೆ ಪತ್ರಿಕೆಗಳನ್ನು ಮುದ್ರಣ ಮಾಡಿಕೊಂಡು ಬಂದರೆ ಹಾಸನದ ತನಕ ನಡೆದುಕೊಂಡು ಹೋಗಿ ಲಪಟಾಯಿಸಿ ತಂದು ತಯಾರಾಗಿ ಎಲ್ಲರಿಗಿಂತ ಹೆಚ್ಚು ಅಂಕ ಪಡೆಯುತ್ತಾನೆ,ಸ್ನೇಹಿತನಿಗೆ ಹರಳೆಣ್ಣೆ ಹಚ್ಚಿ ಸ್ನಾನಕ್ಕೆ ನೀರಿಲ್ಲದಂತೆ ಮಾಡುತ್ತಾನೆ. ಹಾಸನದ ಶಾಲೆಯ ಹೆಡ್ಮಾಸ್ಟರನ್ನು ಕಟ್ಟಿಪದ ಸುತ್ತ ಸುತ್ತುಹಾಕುವಂತೆ ಮಾಡುತ್ತಾನೆ.

ಈ ಮಧ್ಯೆ ಪುಟ್ಟರಾಮಪ್ಪನವರ ಉರ್ದು ಪ್ರೇಮ. ಬೆಂಗಳೂರಿನ ಕನಕಲತೆಯ ಹಿಂದಿ ಉಪನ್ಯಾಸದ ಪ್ರಸಂಗ. ಸೀತಾರಾಮು ಬಾವಿಯೊಳಗೆ ಬಿದ್ದು ಹೆಂಡತಿಯ ಕಾಲು

ಹಿಡಿದ ಪ್ರಸಂಗ ಮುಂತಾದುವುಗಳು ಹಾಸ್ಯ ಪ್ರಸಂಗಗಳಾಗಿ ಕಾಣಿಸಿಕೊಳ್ಳುತ್ತವೆ. ಆದರೆ ಕಾದಂಬರಿಗೆ ಯಾವುದೇ ರೀತಿಯ ಹೊಂದಾಣಿಕೆ ಯಾಗಿಯಾಗಲಿ, ಸುದರ್ಶನನ ಪಾತ್ರ ಬೆಳವಣಿಗೆಗೆ ಪ್ರಯೋಜನವಾಗಿಯಾಗಲಿ ಕಾಣಿಸುವುದಿಲ್ಲ. ಆ ಪ್ರಸಂಗಗಳು ತಮ್ಮಷ್ಟಕ್ಕೆ ತಾವು ಚಂದವಾಗಿವೆ. ಇದೇ ಸಂದರ್ಭದಲ್ಲಿ ಪ್ರತ್ಯೇಕವಾಗಿ ಉಲ್ಲೇಖಾರ್ಹವಾದ ಇನ್ನೊಂದು ಪ್ರಸಂಗವೆಂದರೆ ಹಾವಾಡಿಗನ ಹೆಂಡತಿಯ ಕತೆ. ಮಲ್ಲಿಗೆಹಳ್ಳಿಗೆ ಬಂದ ಒಬ್ಬ ಹಾವಾಡಿಗನ ಹತ್ತಿರಕ್ಕೆ ಸುದರ್ಶನ ಮಾಟ ಮಂತ್ರ ಕಲಿಯಲು ಹೋಗುತ್ತಾನೆ. ಆತ ಅಫೀಮಿನ ಚಟಕ್ಕೆ ಒಳಗಾದವನು. ಸುದರ್ಶನನಿಂದ ಹಣ ಸುಲಿಯಲು ಹಲ್ಲಿಲ್ಲದಿರುವ ಹಾವೊಂದನ್ನು ಬಿಟ್ಟು ಹೆದರಿಸುತ್ತಾನೆ. ಆ ಹಾವಿನಿಂದ ಸುದರ್ಶನನನ್ನು ರಕ್ಷಿಸಿದವಳು ಹಾವಾಡಿಗನ ಹೆಂಡತಿ. ಅದೇ ಹಾವಾಡಿಗ ಆ ಹಾವಿನ ಸಂಗಡ ಆಟವಾಡುತ್ತ ಅಫೀಮಿನ ಅಮಲಿನಲ್ಲಿ ಕಡಿಸಿಕೊಂಡು ಸತ್ತು ಹೋಗುತ್ತಾನೆ. ಆಗ ಹಾವಾಡಿಗನ ಹೆಂಡತಿ ತಮ್ಮ ನಿಗೂಢ ಜೀವನದ, ಪ್ರೇಮದ, ದುರಂತದ ಕತೆಯನ್ನು ಹೇಳುತ್ತಾಳೆ. ಆಕೆಯ ಬಾಯಿಂದಲೇ ಬರುವ ಆಕೆಯ ಕತೆ–ತಾಯಿಯಿಲ್ಲದೆ ಬೆಳೆದು, ಗೊತ್ತಿರುವ ಒಬ್ಬನಿಗೆ ಮದುವೆ ಮಾಡಿ. ಆತ ವಿಧವೆಯೊಬ್ಬಳ ಸಂಪರ್ಕಹೊಂದಿ ಇವಳನ್ನು ತಿರಸ್ಕರಿಸಿ. ಆದರೆ ಇಹಳ ಹಣಕ್ಕೆ ಒಡವೆಗೆ ಆಸೆಪಟ್ಟು ನಂತರ ಎಲ್ಲ ಕಳೆದುಕೊಂಡ ಮೇಲೆ ನಿರುದ್ಯೋಗಿಯೊಬ್ಬನು ಆಕೆಯ ಆಶ್ರಯದಾತನಾಗುತ್ತಾನೆ. ಅವನು ಒಬ್ಬ ಉತ್ತಮಸ್ಥನಾಗಿದ್ದು ಜೀವನೋಪಾಯಕ್ಕಾಗಿ ಕ್ರೈಸ್ತಧರ್ಮ ಸ್ವೀಕರಿಸಿ ನಂತರ ಅದನ್ನು ಧಿಕ್ಕರಿಸಿ ಹಾವಾಡಿಗನೊಬ್ಬನ ಪರಿಚಯ ಮಾಡಿಕೊಂಡು ಅದನ್ನೇ ವೃತ್ತಿಯಾಗಿ ಸ್ವೀಕರಿಸಿದ್ದು. ಅಫೀಮಿನ ಚಟಕ್ಕೆ ಒಳಗಾಗಿದ್ದು ಇತ್ಯಾದಿ ಎಲ್ಲ ದುರಂತಗಳು. ಈ ಭಾಗವೇ ಪ್ರತ್ಯೇಕ ಕತೆಯೊಂದರ, ಕಾದಂಬರಿಯೊಂದರ ವಸ್ತುವಾಗಬಲ್ಲುದಾಗಿದೆ.

ಸುದರ್ಶನ ಯೌವನಕ್ಕೆ ಕಾಲಿಡುವ ಹೊತ್ತಿಗೆ ಸ್ವಾತಂತ್ರ್ಯ ಚಳುವಳಿ ಕಾವೇರುತ್ತದೆ. ಅದರಲ್ಲಿ ಧುಮುಕುತ್ತಾನೆ. ಜೈಲಿಗೆ ಹೋಗುತ್ತಾನೆ. ಬಿಡುಗಡೆಯಾದ ನಂತರ ಸಾಬರಮತಿ ಆಶ್ರಮಕ್ಕೆ ಹೋಗಿ 'ನಿಮ್ಮ ನಿಮ್ಮ ಊರುಗಳಲ್ಲಿ ಸುಧಾರಣೆ ಮಾಡಿ' ಎಂಬ ಗಾಂಧಿ ಮಾತಿಗೆ ಓಗೊಟ್ಟು ಹಳ್ಳಿಗೆ ಬರುತ್ತಾನೆ. ಮಲ್ಲಿಗೆ ಹಳ್ಳಿಯಲ್ಲಿ ನೂಲುವುದಕ್ಕೆ, ಮಗ್ಗ ಹಾಕುವುದಕ್ಕೆ. ದೇಶೀಯ ಕಾಗದ ತಯಾರು ಮಾಡುವುದಕ್ಕೆ ಶತಪ್ರಯತ್ನಗಳನ್ನು ಪಟ್ಟು ಅದರಲ್ಲಿ ಯಶಸ್ವಿಯಾಗುತ್ತಾನೆ. ಜನರೆಲ್ಲ ಇವನ ಪ್ರಯತ್ನಗಳಿಗೆ ಓಗೊಡುತ್ತಾರೆ. ಹಳ್ಳಿಯಲ್ಲಿ ಈತ ನಡೆಸಿದ ಈ ಕೆಲಸಗಳಿಗೆ ಸರ್ಕಾರ ಸುದರ್ಶನನನ್ನು ಜೈಲಿಗೆ ಹಾಕುತ್ತದೆ. ಇಲ್ಲಿಂದ ಮುಂದೆ ಕೃತಿ ಜೈಲುಗಳ ವರ್ಣನೆ, ಊಟ ವಸತಿ ಏರ್ಪಾಟು. ನ್ಯಾಯಾಧೀಶರ ವಿಚಾರಣೆಯ ಮಾದರಿಗಳು, ಪೋಲೀಸರ ಕ್ರೂರ ವರ್ತನೆಗಳು. ಬ್ಯಾರಕ್ಕುಗಳು. ಶಿಕ್ಷೆಗಳು. ಭಾರತಕ್ಕೆ ಸ್ವಾತಂತ್ರ್ಯ ಕೊಡುವ

ಬಗ್ಗೆ ಮ್ಯಾಂಚೆಸ್ಟರ್‌ನ 'ಗಾರ್ಡಿಯನ್' ಪತ್ರಿಕೆ ಏನು ಹೇಳುತ್ತದೆ, ಚಿಕಾಗೋ 'ಡೇಲಿ ನ್ಯೂಸ್' ಏನು ಬರೆಯುತ್ತದೆ, ಇಂಗ್ಲೆಂಡಿನ 'ಡೇಲಿಮೇಲ್' ಏನು ಹೇಳಿತು ಲಂಡನ್ ನ 'ಡೇಲಿಹೆರಾಲ್ಡ್' ಪತ್ರಿಕೆಯ ಜಾರ್ಜ್‌ಸ್ಲೋಕೋಂ ಪತ್ರಕರ್ತ ಏನೇನೆಲ್ಲ ಬರೆದ, ಲೂಯಿ ಫಿಷರ್ ಏನು ಹೇಳಿದ, ಜೈಲು ಸುಧಾರಣೆ ಗಳನ್ನು ಕುರಿತು ಫ್ರಾಂಕ್‌ಕ್ರೇನ್ ಏನು ಹೇಳಿದ್ದಾನೆ ಏನು ಹೇಳಿದ್ದಾನೆ ಎನ್ನುವ ವಿವರಗಳನ್ನು ಚರಿತ್ರೆಯ ಪುಸ್ತಕದಂತೆ ವಿವರಿಸುತ್ತದೆ. ಈ ವಿವರಣೆಯ ಗೊಂಡಾರಣ್ಯದಲ್ಲಿ ನಾಯಕ ಸುದರ್ಶನ ನಾಪತ್ತೆಯಾಗಿಬಿಡುತ್ತಾನೆ. ಕೃತಿಕಾರ ಓದುಗರು ಎಲ್ಲಾದರೂ ಮರೆತಾರಲ್ಲ ಎಂಬ ಕಿಚ್ಚಿಗೆ ಸುದರ್ಶನ ಆ ಜೈಲಿನಿಂದ ಈ ಜೈಲಿಗೆ ಬಂದ ಎಂದು ಅವನ ಅಸ್ತಿತ್ವವನ್ನು ಆಗಾಗ ನೆನಪಿಸುತ್ತಾರೆ. ಈ ದೀರ್ಘ ವಿವರಣೆಗಳ ಮಧ್ಯೆಯೂ ಜೈಲುವಾಸಿಗಳ ಕಾವ್ಯವಾಚನ, ಪಾಕಪ್ರವೀಣತೆ, ವ್ಯಾಯಾಮ, ಸ್ವರ್ಗದ ಬಾಗಿಲು ಎಂಬ ಪತ್ರಿಕಾ ಪ್ರಕಟಣೆ ಮುಂತಾದ ಭಾಗಗಳು ಉಂಟಾದ ಬೇಸರವನ್ನು ನಿವಾರಿಸುತ್ತವೆ.

ಸುಸಂಬದ್ಧ ಪಾತ್ರಗಳ ಬೆಳವಣಿಗೆಯಿಲ್ಲದಿರುವ ಈ ಕೃತಿಯನ್ನು ಕಾದಂಬರಿಯೆಂದು ಕರೆಯಲು ಅನುಮಾನವಾಗುತ್ತದೆ. ಬೇಕಾದರೆ ಚಲೇಜಾವ್ ಚಳುವಳಿಯ ಸಂದರ್ಭದ ಒಂದು ಸಾಮಾಜಿಕ ದಾಖಲೆಯೆನ್ನಬಹುದು.

ಮುಟ್ಟಾಟ[೧]

ಪೋಲಂಕಿ ರಾಮಮೂರ್ತಿ

ಹಿಡಿ ಹಿಡಿ ಕೈಯ
ಮುಂಗೈಯ
ಬರಸೆಳೆ ತೋಳ
ತಬ್ಬು
ಬಿಗಿದಪ್ಪು ಮೈಯ
ಮೈ
ಥಳಿ ಬಿಟ್ಟು
ಮುಟ್ಟು
ಓ
ಶತ ಶತಮಾನಗಳ
ಮುಟ್ಟಾದ ಮಾನವ!

ತಟ್ಟು ಕೈ
ಇಕ್ಕು ಚಪ್ಪಾಳೆ
ಬಿಚ್ಚು ಮುಚ್ಚಾಲೆ ಕಣ್ಣ
ಕುಲುಕು ಕೈ
ಕೆನೆ
ಕುಣಿ ಕೈಯ ಕುಣಿಕೆಯಲಿ
ಮಣಿ ಮೈಯ ಮಣಿಕೆಯಲಿ
ತಾಗು, ಬೀಗು
ಬೀಗುತ್ತ ಸಾಗು
ಕೈ ಮೈಯ ತಳಿಕೆಯಲಿ ತೂಗು

---

೧ ಸಂಕ್ರಮಣದ ಸ್ತ್ರೀ ಲೇಖನಗಳನ್ನು ಕುರಿತು

ಇಕ್ಕು ಕಾಲನು ನಾಯು
ನೆಕ್ಕಿಗೆ
ನೇವರಿಸು ಬೆಕ್ಕ
ತುರಿ ಎಳೆಗರುವ ಕೊರಳ

ಬಾಚು ಹುಲ್ಲನು ಸಡೆವ ಕಾಲ್ಬೆರಳ ಬಾಚಿನಲಿ
ಚಾಚು ಕೊಂಬೆಗೆ ತೋಳ
ತೂಗು ತೂಗುಯ್ಯಾಲೆ ಮರಕೆ
ಬಿಚ್ಚು ಮೈ
ಎಲೆ ಎಲೆ ನೆರಳಚ್ಚೆಗೆ
ಪುಟ್ಟಿ ಪುಳಕಕ್ಕೆ ಚಿಕ್ಕೆ ಚಿಗರಿ
ಪಟ್ಟೆ ಹುಲಿ
ಎಲಿ ಎಲಿ ನೆರಳ ಚಿರತೆ

ಬೀಳು ಬೀಸಿನ ನೀರ
ಹರಿ
ಹುರಿ ಕಟ್ಟಿ ಹೊಸೆ ನೀರ
ತೊಡೆ ತೊಡೆಯು ತಳುಕಿನಲಿ
ತೂರು
ನೊರೆಗಟ್ಟ ನೂಕು
ನುಗ್ಗು
ಕೊರೆ ಕೊರೆ ತಿರುಗಣಿ ಸುರಂಗ
ಹೊಡೆಕೊಳ್ಳೆ ಕೂಗುತ್ತ
ಕೇಕೆ
ಚಿಮ್ಮು, ಹೊರಚೆಲ್ಲು
ಚೆಲ್ಲುತ್ತ ಕಚ್ಚು ಬಾನಗಣ್ಣ

ಮೆಟ್ಟು ನೆಲ, ನೆಲಗಟ್ಟು
ನೆಟ್ಟಾಡು ನೇಗಿಲಲಿ ನೆಲದ ಬಸಿರ
ಮುಟ್ಟಾಡು ನೆಲದವನ
ಕೈ ಕೈಯ ಹಿಸುಕು
ಪಟ್ಟಾಡು ನೆಲದವಳ
ಮೈ ಮೈಯ ಹೊಸಕು

ಕುಸಿ
ಕೆಸರ ಕುಸಿಗೆ
ಬೆಸಿ
ಬೆವರ ಬೆಸುಗೆ

ಉಸಿರು
ಉಸಿರಾಡು ಮೈಹುಲ್ಲ
ಮಂಡೆ ಮೈ ರೋಮದಲಿ
ಬಿಸಿಯಾಡು ಬೆಂಕಿ ಬೆಳಿ
ತೋಳ, ತೊಡೆಯ ಸಂದಿನಲಿ
ಮೂಸು
ಮುಂದೆಲಿ ನಾರ
ಪೂಸು
ಬೆವರಿನ ಬೇರ
ತಕ್ಕೈಸು
ತಿಕ್ಕು
ಉಕ್ಕಿಹರಿ ಬೆಂಕಿ ಹೊಳಿ
ಕಂಕಂಕುಳೋಕಳಿ

ಮುರಿ ಮುಟ್ಟ
ಮುಟ್ಟು
ಓ
ಶತ ಶತಮಾನಗಳ
ಮುಟ್ಟಾದ ಮಾನವ
ಮುಟ್ಟಾಡು
ಕಣ್ಣಾ
ಬಿಚ್ಚಾಡು.

ಆಕ್ರಂದನ

ಮುಳ್ಳೂರು ನಾಗರಾಜ

ಸತ್ತವರ ಕಪ್ಪು ಆತ್ಮಗಳು
ನನ್ನ ಕನಸಿನ
ಬಿಳಿ ಪಾರಿವಾಳಗಳನ್ನ
ಕೊಂದಿವೆ

ದಗ್ಧ ಎದೆಯಲ್ಲಿ
ರಕ್ತ ಸಮುದ್ರಗಳು
ಅರಳುತಿವೆ ಚಿಂತೆಯಿಲ್ಲ

ಕೊಂದವರ ಕೊಲುವಂಥ
ಬೆಂಕಿಯಾಗುವೆ ನಾನು
ಧಗಧಗಿಸುವ ಸಾವಾಗುವೆ

ಅಯ್ಯೋ ಹೇಗೆ ಕೊಂದರವರು
ನಮ್ಮ ರಕ್ತ ಬಾಂಧವರನ್ನ
ಕ್ರಾಂತಿಯ ಯಾವ ಹಾಡುಗಳಿಂದ
ತರಲಿ ಅವರ ಜೀವ ?

ತಲ್ಲಣಿಸುತಿವೆ ಸಾವಿರಾರು
ಜೀವ ಪಕ್ಷಿ ಕಪ್ಪು ನೆಲದ ತುಂಬ
ದಿಕ್ಕುಗಳ ತುಂಬುತಿವೆ
ದುಃಖದಲಿ ಬೆಂದವರ ಆಕ್ರಂದನ

‘ರಾಮಾಯಣದ ಸೀತಾಯಣ’

ಪ್ರತಿಕ್ರಿಯೆ

ಭಗವಾನ್

ಸಂಕ್ರಮಣ–೧೧೬ ರಲ್ಲಿ ಡಾ। ಪೋಲಂಕಿ ರಾಮಮೂರ್ತಿಯವರ ‘ರಾಮಾಯಣದ ಸೀತಾಯಣ’ ಪ್ರಕಟವಾಗಿದೆ. ಈ ಲೇಖನದ ಬಗ್ಗೆ ಮೆಚ್ಚಿಗೆ ರೂಪದಲ್ಲಿ ಅಭಿಪ್ರಾಯಗಳು ಸಂ–೧೨೧ ರಲ್ಲಿ ಅಚ್ಚಾಗಿವೆ. ಡಾ: ಶಂ. ಬಾ. ಜೋಷಿಯವರೂ ಸೇರಿದಂತೆ ವಾಲ್ಮೀಕಿ ರಾಮಾಯಣವನ್ನು ಯಾರೂ ಸಮಗ್ರವಾಗಿ ಓದಿಲ್ಲ ಎನಿಸುತ್ತದೆ.

ಡಾ: ಪೋಲಂಕಿಯವರ ಲೇಖನ ತಪ್ಪು ಗ್ರಹಿಕೆಗಳಿಂದ ತುಂಬಿ ಹೋಗಿದೆ. ‘ಲಕ್ಷ್ಮಣ’ ಶಬ್ದಕ್ಕೆ ಅವರು ‘ಜನನೇಂದ್ರಿಯ, **sexual organ**’ ಎಂಬ ಅರ್ಥವನ್ನು ಬರೆದಿದ್ದಾರೆ. ಈ ಅರ್ಥ ಮೋನಿಯರ್— ವಿಲಿಯಮ್ಸ್, ಕಿಟ್ಟೆಲ್ ಮತ್ತು ಆಪ್ಟೆ ನಿಘಂಟುಗಳಲ್ಲಿ ಸಿಗುವುದಿಲ್ಲ. ಸರ ಮೋನಿಯರ— ವಿಲಿಯಮ್ಸನ ಸಂಸ್ಕೃತ— ಇಂಗ್ಲೀಷ ನಿಘಂಟಿನಲ್ಲಿ ಲಕ್ಷ್ಮಣ ಶಬ್ದಕ್ಕೆ ಈ ಅರ್ಥಗಳಿವೆ: **having marks or signs or characteristics; endowed with auspicious signs or marks, lucky, fortunate**. ಜನನೇಂದ್ರಿಯ ಎಂಬ ಅರ್ಥ ಇಲ್ಲ. ಇಂಥದೇ ವಿಪರೀತಾರ್ಥವನ್ನು ‘ಬಿತ್ತನೆ’ಗೆ ಕಾತರಳಾದ ‘ನೆಲ’ ಎಂದು ‘ಸೀತಾ’ ಶಬ್ದಕ್ಕೆ ಬರೆದಿದ್ದಾರೆ. ಲಕ್ಷ್ಮಣ ‘ಕ್ರಿಯಾಶೀಲನಾದ ಕಾಯಕದವನು’ ಎಂದರೆ **man of action** ಎಂದಿದ್ದಾರೆ. ಅವರ ಪ್ರಕಾರ ಕ್ರಿಯಾಶೀಲ ವ್ಯಕ್ತಿ ರಾಮನಲ್ಲ; ಆದರೆ ಇಡೀ ರಾಮಾಯಣದಲ್ಲಿ ಹೆಚ್ಚು ಹೆಚ್ಚು ವೀರೋಚಿತ ಕಾರ್ಯಗಳನ್ನು ಮಾಡುವವನು ರಾಮನೇ ಹೊರತು ಲಕ್ಷ್ಮಣನಲ್ಲ. ವೀರಾಧಿವೀರರೂ ಹೆದೆಯೇರಿಸಲಾರದ ಧನುಸ್ಸನ್ನು ಮುರಿದು ಸೀತೆಯನ್ನು ಗೆದ್ದವನು ರಾಮ; ವಾಲಿಯನ್ನು ಕೊಂದವನು ರಾಮ; ಜನಸ್ಥಾನದಲ್ಲಿ ಖರದೂಷಣಾದಿ ಹದಿನಾಲ್ಕು ಸಹಸ್ರ ರಾಕ್ಷಸರನ್ನು ಏಕಾಂಗಿಯಾಗಿ ಕೊಲ್ಲುವವನು ರಾಮ; ಮಹಾ ಬಲಶಾಲಿಯಾದ ಕುಂಭಕರ್ಣನನ್ನು ವಧಿಸುವವನು ರಾಮ; ರಾವಣ

ನನ್ನು ಸಂಹಾರ ಮಾಡುವವನು ರಾಮ, ರಾಮನ ಪರಾಕ್ರಮವನ್ನು ಅವನ ವೈರಿಗಳೂ ಮುಕ್ತಕಂಠದಿಂದ ಹೊಗಳುತ್ತಾರೆ.

'ಮಹಾಬಾಹು' ಎಂಬ ವಿಶೇಷಣವನ್ನು ವಾಲ್ಮೀಕಿ ಲಕ್ಷ್ಮಣನಿಗೆ ಮಾತ್ರ ಕೊಟ್ಟಿಲ್ಲ; ರಾಮಾಯಣದ ಎಲ್ಲ ವೀರರಿಗೂ ಅದೊಂದು ಸಾಮಾನ್ಯ ಗುಣವಾಚಕವಾಗಿದೆ. ಕುಂಭಕರ್ಣ, ಇಂದ್ರಜಿತು, ಶತ್ರುಘ್ನ, ಅಂಗದ ಇವರಿಗೂ ಆ ಗುಣ ವಿಶೇಷ ಲಭ್ಯವಾಗಿದೆ. ಸೀತೆ ರಾಮನನ್ನು 'ಮಹಾಬಲ, ಮಹಾಬಾಹು' ಎಂದು ಸಂಬೋಧಿಸುತ್ತಾಳೆ, (ಅಯೋಧ್ಯಾಕಾಂಡ, ೨೯, ೯; ೩೨.೯೧) ಆದರೆ 'ಸತ್ಯ ಪರಾಕ್ರಮ:' ಎಂಬ ವಿಶೇಷಣ ರಾಮನಿಗೆ ಮಾತ್ರ ಮೀಸಲಾಗಿದೆ.

ರಾಮನಿಗೆ ಸೀತೆ "ಸ್ತ್ರೀಯಂ ಪುರುಷ ವಿಗ್ರಹಂ" (ಅ, ಕಾ. ೩೦.೩) ನೀನು 'ಪುರುಷ ರೂಪದ ಸ್ತ್ರೀ' ಎಂದು ಹೇಳಿದ ಮಾತನ್ನೇ ಆಧಾರವಾಗಿಟ್ಟುಕೊಂಡು ಡಾ: ಪೋಲಂಕಿ ತಮ್ಮ ತರ್ಕವನ್ನು ಮಂಡಿಸಿದ್ದಾರೆ, ವಾಲ್ಮೀಕಿಯನ್ನು ನೋಡೋಣ. (ಟೀಕೆ, ವಿವರಣೆ ಕೊಡುವ ಚಾಪಲ್ಯಕ್ಕೆ ಒಳಗಾಗದೆ ರಾಮಾಯಣದ ಮಾತುಗಳನ್ನು ಮುಂದೆ ಉದ್ಧರಿಸುತ್ತೇನೆ.)

ಪಿತೃವಾಕ್ಯ ಪರಿಪಾಲನೆಗೆ ರಾಮ ವನವಾಸ ಕೈಗೊಂಡಾಗ ಸೀತೆ ತಾನೂ ಬರುತ್ತೇನೆಂದು ಹೇಳುತ್ತಾಳೆ. ರಾಮ ಬೇಡವೆಂದು ತಡೆಯಲು ಬಹಳ ಪ್ರಯತ್ನ ಪಡುತ್ತಾನೆ. ತಾನು ಹಿಡಿದ ಹಟವೆಲ್ಲ ವ್ಯರ್ಥವಾಗುವಂತೆ ಕಾಣಲು ಸೀತೆ, ನೀನು 'ಗಂಡು ವೇಷದ ಹೆಣ್ಣು' ಎಂದು ಪ್ರಚೋದಿಸುತ್ತಾಳೆ. ಆಗ ರಾಮ ಅನಿವಾರ್ಯವಾಗಿ ಸೀತೆಯನ್ನು ತನ್ನ ಜೊತೆ ಕರೆದುಕೊಂಡು ಹೋಗಲು ಸಮ್ಮತಿಸುತ್ತಾನೆ. ಇದು ಸಾಂದರ್ಭಿಕ ಮಾತು.

'ಮ್ಯಾಕ್‌ಬೆತ್' ನಾಟಕದಲ್ಲಿ ಲೇಡಿ ಮ್ಯಾಕಬೆತ್ ತನ್ನ ಗಂಡನಿಗೆ 'ನೀನು ಗಂಡಸೇ?' (Are you a man ?– ೩.೪.೫೮) ಎಂದು ಛೇಡಿಸುತ್ತಾಳೆ. ಈ ಮಾತಿನಿಂದ ಮ್ಯಾಕ್‌ಬೆತ್ ಗಂಡಸಲ್ಲವೆಂದು ವ್ಯಾಖ್ಯಾನಿಸಲು ಸಾಧ್ಯವೇ ?

ತ್ರಿಲೋಕ ವೀರರೂ ಹೆದೆಯೇರಿಸಲಾರದ ಶಿವಧನುಸ್ಸನ್ನು ರಾಮ ಲೀಲಾಜಾಲವಾಗಿ ಛೇದಿಸುತ್ತಾನೆ. ಆಗ ಜನಕ ಮಹಾರಾಜ ಸೀತೆಯನ್ನು ರಾಮನಿಗೆ 'ವೀರ್ಯಶುಲ್ಕ' ಎಂದು ನೀಡುತ್ತಾನೆ :

> ವೀರ್ಯಶುಲ್ಕಂ ಮಮಸುತಾಂ ಸೀತಾಂ ಸುರಸುತೋಪಮಾಮ
> ಸುರಸುಂದರಿಯಾದ ನನ್ನ ಮಗಳು ಸೀತೆಯನ್ನು ರಾಮನಿಗೆ ವೀರ್ಯ ಶುಲ್ಕವಾಗಿ
> ಧಾರೆಯೆರೆಯುತ್ತೇನೆ. [ಬಾಲಕಾಂಡ ೭೧.೨೧]

‘ವೀರ್ಯಶುಲ್ಕ’ ಎಂಬ ಮಾತನ್ನು ಜನಕ ಪದೇ ಪದೇ ಹೇಳುತ್ತಾನೆ.

ಮದುವೆಯಾಗಿ ವನವಾಸಕ್ಕೆ ಹೊರಡುವ ವರೆಗೆ ಸೀತಾರಾಮರು ಅಯೋಧ್ಯೆಯಲ್ಲಿ ಸಂತೃಪ್ತ ಜೀವನವನ್ನು ನಡೆಸಿದರೆಂದು ಬಾಲಕಾಂಡವಲ್ಲಿ ನಿರೂಪಿತವಾಗಿದೆ.

ಮನಸ್ವೀತದ್ಗತಮನಾ ನಿತ್ಯಂ ಹೃದಿ ಸಮರ್ಪಿತ;
ಪ್ರಿಯಾ ತು ಸೀತಾ ರಾಮಸ್ಯ ದಾರಾ; ಪಿತೃಕೃತಾ ಇತಿ

ಗುಣಾತ್ ರೂಪಗುಣಾತೆ ಚ ಅಪಿ ಪ್ರೀತಿ; ಭೂಯೋಭ್ಯವರ್ಧತ
ತಸ್ಯಾಃ ಚ ಭರ್ತಾ ದ್ವಿಗುಣಂ ಹೃದಯೇ ಪರಿವರ್ತತೇ

ಅಂತರ್ಗತಂ ಅಭಿವ್ಯಕ್ತಂ ಅಖ್ಯಾತಿ ಹೃದಯಂ ಹೃದಾ
ತಸ್ಯ ಭೂಯೋ ವಿಶೇಷೇಣ ಮೈಥಿಲೀ ಜನಕಾರ್ತಜಾ (೭೭.೨೮–೩೦)

“ರಾಮನು ಮನಃಪೂರ್ವಕವಾಗಿ ಸೀತೆಯಲ್ಲಿಯೇ ಅನುರಕ್ತನಾಗಿದ್ದನು. ಸೀತೆಯ ಹೃದಯದಲ್ಲಿ ರಾಮನು ನಿತ್ಯ ನೆಲಸಿದ್ದನು. ತಂದೆ ನಿಂತು ಮಾಡಿದ ಮದುವೆಯೆಂದ ಅವನಿಗೆ ಸೀತೆಯಲ್ಲಿ ಪ್ರೀತಿ. ಆ ಪ್ರೀತಿ ಸೀತೆಯ ಗುಣಗಳಿಂದಲೂ ರೂಪ ಲಾವಣ್ಯಗಳಿಂದಲೂ ಅಧಿಕವಾಗಿ ವರ್ಧಿಸಿತು. ಸೀತೆಗೆ ಗಂಡನ ಮೇಲಿನ ಪ್ರೇಮವು ದ್ವಿಗುಣವಾಯಿತು. ಜನಕರಾಜನ ಮಗಳಾದ ಆ ಮೈಥಿಲಿ ತನ್ನ ಅಂತರಂಗದ ಭಾವನೆಗಳನ್ನು ಮುಚ್ಚುಮರೆಯಿಲ್ಲದೆ ಗಂಡನಿಗೆ ಹೇಳಿಕೊಳ್ಳುತ್ತಿದ್ದಳು.”

ಸೀತೆಯನ್ನು ಅಪಹರಿಸಲು ರಾವಣ ಬಂದಾಗ ಪ್ರಕೃತಿಯಲ್ಲಿ ಉಂಟಾಗುವ ಕೆಡುಕಿನ (evil) ಪರಿಣಾಮವನ್ನು ವಾಲ್ಮೀಕಿ ಭಯಂಕರವಾಗಿ ಚಿತ್ರಿಸಿದ್ದಾನೆ. (ಅರಣ್ಯ : ೪೬.೬-೮)

ತಂಉಗ್ರ ತೇಜಃ ಕರ್ಮಾಣಂ ಜನಸ್ಥಾನರುಹಾ ದ್ರುಮಾ;
ಸಮೀಕ್ಷ್ಯ ನ ಪ್ರಕಂಪಂತೇ ನ ಪ್ರವಾತಿ ಚ ಮಾರುತಃ

ಶೀಘ್ರಸ್ರೋತಾಶ್ಚ ತಂ ದೃಷ್ಟ್ವಾ ವೀಕ್ಷಂತಂ ರಕ್ತಲೋಚನಂ
ಸ್ತಿಮಿತಂ ಗಂತು ಮಾಲೀದೇ ಭಯಾತೆ ಗೋದಾವರೀ ನದೀ
"ಉಗ್ರಕರ್ಮಿಯಾದ ರಾವಣನನ್ನು ಕಂಡು ಜನಸ್ಥಾನದ ಮರಗಳು
ಅಲ್ಲಾಡಲಿಲ್ಲ.

ಗಾಳಿ ಬೀಸಲಿಲ್ಲ ರಕ್ತಲೋಚನನಾದ ರಾವಣನನ್ನು ನೋಡಿ ವೇಗವಾಗಿ
ಹರಿಯುತ್ತಿದ್ದ ಗೋದಾವರಿ ನದಿ, ಭಯದಿಂದ ಮೆಲ್ಲನೆ ಹರಿಯ
ತೊಡಗಿದಳು !!

ಅರಣ್ಯಕಾಂಡವಲ್ಲಿ ಸೀತೆ ರಾವಣನಿಗೆ ತಾನು ‘ಸರ್ವಕಾಮ ಸಮೃದ್ಧಿನಿ’ ಸಕಲಭೋಗ

ಗಳನ್ನು ಅನುಭವಿಸಿದ್ದೇನೆ; ಯಾವುದಕ್ಕೂ ಕೊರತೆಯಿಲ್ಲ ಎಂದು ಹೇಳುತ್ತಾಳೆ.
(೮೨.೪)

ಉಷಿತ್ವಾ ದ್ವಾದಶ ಸಮಾಃ ಇಕ್ಷ್ವಾಕೂಣಾಂ ನಿವೇಶನೇ
ಭುಂಜನಾ ಮಾನುಷಾನ್ ಭೋಗಾನ್ ಸರ್ವಕಾಮ ಸಮೃದ್ಧಿನೀ
(ಸು. ಕಾ. ೩೩.೧೮)

ಇಕ್ಷ್ವಾಕು ಕುಲದ ಅರಸರ ಅರಮನೆಯಲ್ಲಿ ಹನ್ನೆರಡು ವರ್ಷಗಳ ಕಾಲ ಸಕಲ ಭೋಗಭಾಗ್ಯಗಳನ್ನು ಅನುಭವಿಸಿದ್ದೇನೆ...

ಅನುಸೂಯಾದೇವಿಯ ಜೊತೆ ಸೀತೆ ರಾಮನ ಬಗ್ಗೆ ಹೇಳುವ ಮಾತುಗಳು ಎಲ್ಲಾ ರೀತಿಯ ವಕ್ರವೃಷ್ಟಿಯನ್ನು ಹೋಗಲಾಡಿಸುತ್ತವೆ; (ಅಯೋಧ್ಯಾಕಾಂಡ, ೧೧೮.೪)

ಸ್ಥಿರಾನುರಾಗೋ ಧರ್ಮಾತ್ಮಾ ಮಾತೃವತ್ ಪಿತೃವತ್ ಪ್ರಿಯ :

"ನನ್ನಲ್ಲೇ ಅದರ ಪ್ರೇಮವುಳ್ಳ ರಾಮನು ನನ್ನನ್ನು ತಾಯಿಯಂತೆ ತಂದೆಯಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಾನೆ." ಅನುಸೂಯಾದೇವಿಗೆ ಸೀತೆ

ಕೃತಂ ಇತಿ ಅಬ್ರುವೀತ ಸೀತಾ ತಪೋಬಲ ಸಮನ್ವಿತಾಂ (ಅ.ಕಾ.೧೧೮.೧೬)

"ನಿನ್ನ ಕೃಪೆಯಿಂದ ನನಗೆ ಯಾವುದಕ್ಕೂ ಕೊರತೆಯಿಲ್ಲ" ಎಂದು ಹೇಳಿದಳು.

ಯುದ್ಧಕಾಂಡದಲ್ಲಿ ರಾಮನಾಡುವ ಮಾತುಗಳು ಅವನ ಗಂಡಸುತನವನ್ನು ಸಾಬೀತು ಪಡಿಸುತ್ತವೆ : (೫.೫, ೮, ೧೨, ೧೩, ೧೪)

ಏತತ್ ಏವ ಅನುಶೋಚಾಮಿ ವಯೋಸ್ಯಾ ಹಿ ಅತಿವರ್ತತೇ...

ತತ್ ವಿಯೋಗ ಇಂಧನವತಾ ತತ್ ಚಿಂತಾ ವಿಪುಲಾರ್ಚಿಷಾ
ರಾತ್ರಿಂ ದಿವಂ ಶರೀರಂ ಮೇ ದಹ್ಯತೇ ಮದನಾಗ್ನಿನಾ...

ಕದಾನು ಖಲು ಸುಶ್ರೋಣೀಂ ಶತಪತ್ರಾಯತೇ ಕ್ಷಣಾಂ
ವಿಜಿತ್ಯ ಶತ್ರೂನ್ ದ್ರಕ್ಷ್ಯಾಮಿ ಸೀತಾಂ ಸ್ಫೀತಾಂ ಇವ ಶ್ರಿಯಂ

ಕದಾನು ಚಾರುಬಿಂಬೋಷ್ಠಂ ತಸ್ಯಾಃ ಪದ್ಮಂ ಇವ ಆನನಂ
ಈಷತ್ ಉನ್ನಮ್ಯ ಪಾಸ್ಯಾಮಿ ರಸಾಯನಂ ಇವ ಆತುರಃ

ತಸ್ಯಾಸ್ತು ಸಂಹತೌ ಪೀನೌ ಸ್ತನೌ ತಾಲಫಲೋಪಮೌ
ಕದಾ ನು ಖಲು ಸೋತ್ಕಂಪೌ ಶ್ಲಿಷ್ಯಂತ್ಯಾ ಮಾಂ ಭಜಿಷ್ಯತಃ

"ಅವಳ ತಾರುಣ್ಯ ವ್ಯರ್ಥವಾಗುತ್ತಿದೆಯಲ್ಲ ಎಂದು ನನಗೆ ಸಂಕಟವಾಗುತ್ತಿದೆ. ಮದನಾಗ್ನಿಯಿಂದ ಹಗಲಿರುಳು ನನ್ನ ದೇಹ ಬೆಂದು ಹೋಗುತ್ತಿದೆ. ಅವಳ ಚಿಂತೆಯೇ ಮಹಾಜ್ವಾಲೆ. ಶತ್ರುಗಳನ್ನು ಸದೆಬಡಿದು ನಳಿನಾಕ್ಷಿಯೂ ನಿತಂಬಿನಿಯೂ ಆದ

ನನ್ನ ಸೀತೆಯನ್ನು ಎಷ್ಟು ಬೇಗ ನೋಡುವೆನೊ ! ಅರಳಿದ ಕಮಲದಂತಿರುವ ಅವಳ ಮುಖವನ್ನು ಮೇಲೆತ್ತಿ ತೊಂಡೆಯ ಹಣ್ಣಿನಂತಿರುವ ಚೆಂದುಟಿಯ ಸವಿಯನ್ನು ಯಾವಾಗ ಅನುಭವಿಸುವೆನೋ! ರೋಗಿಯು ರಸಾಯನ ಸವಿಯಲು ಕಾತುರನಾಗಿರುವಂತೆ ಅವಳ ಅಧರಾಮೃತವನ್ನು ಯಾವಾಗ ಹೀರುವೆನೋ ! ಅವಳು ನನ್ನನ್ನು ಅಪ್ಪಿಕೊಂಡು ಉದ್ವೇಗದಿಂದ ಕಂಪಿಸುವಾಗ ತಾಳೆಯ ಹಣ್ಣಿನಂತಿರುವ ಅವಳ ಪೀನ ಸ್ತನಗಳು ಯಾವಾಗ ನನ್ನ ಶರೀರವನ್ನು ಸ್ಪರ್ಶಿಸುತ್ತವೆಯೋ !

ಸೀತೆಗೆ ಅತೃಪ್ತಿಯಿತ್ತೆಂದೂ "ಗಂಡನ ಭೋಗದಿಂದ ವಂಚಿತಳು" ಎಂದೂ ಪ್ರೊ॥ ಲಂಕೆ 'ಸಂಶೋಧನೆ' ಮಾಡಿದ್ದಾರೆ. ಆದರೆ ಅವರ 'ಸಂಶೋಧನೆ' ವಾಲ್ಮೀಕಿ ಏನು ಹೇಳುತ್ತಾನೆ ? ಸ್ವತಃ ಸೀತೆ ಮತ್ತು ರಾಮ ಏನು ನುಡಿಯುತ್ತಾರ? ಎಂಬುದನ್ನು ಗಮನಿಸಿಲ್ಲ.

ತನಗೆ ಅತೃಪ್ತಿ ಇಲ್ಲವೆಂದು ಸೀತೆ ಖಚಿತವಾಗಿ ಹೇಳುತ್ತಾಳೆ. ತನ್ನ ಗಂಡ ತನ್ನನ್ನು ಸದಾ ಪ್ರೀತಿಸುತ್ತಾನೆಂದು ಆಕೆಗೆ ಸಂತೋಷ.

ಸ್ವದಾರ ನಿರತಃ ತ್ವಂ ಚ ನಿತ್ಯಂ ಏವ ನೃಪಾತ್ಮಜ (ಅರಣ್ಯ ೯.೬)

ರಾಮನನ್ನು ಬಿಟ್ಟು ಬೇರೆಯನ್ನು ಸೀತೆ ಯೋಚಿಸಿದವಳಲ್ಲ. ಮಾಯಾಮೃಗ 'ಹಾ: ಲಕ್ಷ್ಮಣಾ: ಹಾ, ಸೀತೆ' ಎಂದು ಭಯ ಹುಟ್ಟಿಸುವಂತೆ ಚೀರಿದಾಗ ಸೀತೆ ಗಾಬರಿ ಪಡುತ್ತಾಳೆ, ತನ್ನ ಪತಿಗೆ ಅಪಾಯ ಸಂಭವಿಸಿತೆಂದು ಲಕ್ಷ್ಮಣ ಎಷ್ಟೇ ಸಮಾಧಾನ ಹೇಳಿದರೂ ಅವನನ್ನೇ ಅನುಮಾನಿಸುತ್ತಾಳೆ. ಅವನನ್ನು ತುಚ್ಛವಾಗಿ ಕಾಣುತ್ತಾಳೆ : (ಅರಣ್ಯಕಾಂಡ : ೪೫.೩೮)

ನ ತು ಅಹಂ ರಾಘವಾತೆ ಅನ್ಯಂ ಪದಾಪಿ ಪುರುಷಂ ಸ್ಪೃಶೇ

"ರಾಘವನನ್ನು ಬಿಟ್ಟು ಪರಪುರುಷನನ್ನು ಕಾಲಿನಿಂದಲೂ ಮುಟ್ಟಲಾರ"

ಲೋಕದಲ್ಲಿ ಕೆಟ್ಟ ಹೆಸರು ಪಡೆಯಲು ತಾನು ಸಿದ್ಧಳಿಲ್ಲ ಎಂದು ರಾವಣನಿಗೆ ಹೇಳುತ್ತಾಳೆ. ಆಕೆ ರಾವಣನನ್ನು ಕಾಮುಕನಂತೆ ಕಾಣುತ್ತಾಳೆ. ಅರಣ್ಯಕಾಂಡದ ೪೭ ನೆಯ ಸರ್ಗ, ೫೬ನೆಯ ಸರ್ಗ ಮತ್ತು ೫೭ನೆಯ ಸರ್ಗದಲ್ಲಿ ಶಕ್ತಿಯುತವಾಗಿ ಅಭಿವ್ಯಕ್ತವಾಗಿದೆ.

ಸೀತೆ ತನ್ನ ಹಾಸಿಗೆಗೆ ಬರಲು ಒಪ್ಪುತ್ತಿಲ್ಲವೆಂದು ರಾವಣ ಪರಿತಪಿಸುತ್ತಾನೆ :
ಸಾ ಮೇ ನ ಶಯ್ಯಾಂ ಆರೋಢುಂ ಇಚ್ಛತಿ ಅಲಸಗಾಮಿನೀ ,
ತ್ರಿಷು ಲೋಕೇಷು ಚ ಅನ್ಯಾ ಮೇ ನ ಸೀತಾ ಸದೃಶೀ ಮತಾ
(ಯು. ಕಾ. ೧೨.೧೩)

ಸೀತೆಯ ಪಾತಿವ್ರತ್ಯದ ಬಗ್ಗೆ ರಾಮಪಕ್ಷದವರು ಹೇಳುವುದಿರಲಿ,
ರಾವಣ ಪಕ್ಷದ ಮಾರೀಚ ಕೂಡ ಅವನ್ನು ಕೊಂಡಾಡುತ್ತಾನೆ :
ವೈದೇಹಿ ರಕ್ಷಿತಾಂ ಸ್ವೇನ ತೇಜಸಾ (ಆರಣ್ಯಕಾಂಡ ೩೨.೧೪)
"ಸೀತೆ ತನ್ನ ಪಾತಿವ್ರತ್ಯದ ತೇಜಸ್ಸಿನಿಂದಲೇ ರಕ್ಷಿತಳಾಗಿದ್ದಾಳೆ"

"ರಾವಣ ಬಲವಂತವಾಗಿ ಸೀತೆಯನ್ನು ಎತ್ತಿಕೊಂಡು ಹೋದಾಗ ಅವಳು "ಅವನನ್ನು ಬಯ್ಯುವುದಾಗಲಿ ಶಪಿಸುವುದಾಗಲಿ ಮಾಡದೆ "ರಾಮಾ" ಎಂದು ಕೂಗುತ್ತಾಳೆ, ಗಟ್ಟಿಯಾಗಿ ಅಳುತ್ತಾಳೆ"—ಎಂದು ವಿಮರ್ಶೆ ಬರೆಯುತ್ತಾರೆ. ಆದರೆ ವಾಲ್ಮೀಕಿಯಲ್ಲಿ ಇದಕ್ಕೆ ವಿರುದ್ಧವಾದ ವಸ್ತು ವಿವರವಿದೆ. ಆರಣ್ಯಕಾಂಡದ ೫೩ ನೆಯ ಸರ್ಗಪೂರ್ತಿ ಸೀತೆ ಮಾಡುವ ರಾವಣನಿಂದೆಯಾಗಿದೆ. ನೀಚ, ದುಷ್ಟಾತ್ಮ ನಿನ್ನ ಶೌರ್ಯಕ್ಕೆ ಧಿಕ್ಕಾರ; (ಧಿಕ್ ತೇ ಶೌರ್ಯ) ಇತ್ಯಾದಿಯಾಗಿ ರಾವಣನನ್ನು ಹೀಯಾಳಿಸುತ್ತಾಳೆ.

ರಾವಣನನ್ನು ಸೀತೆ ವಿರೋಧಿಸಲಿಲ್ಲವೆಂಬ ಮಾತು ಸಂಪೂರ್ಣ ಅಸತ್ಯವಾಗುತ್ತದೆ. ಮುಂದಿನ' ಶ್ಲೋಕಗಳನ್ನು ಅರ್ಥಮಾಡಿಕೊಂಡರೆ:

ತಾಂ ಅಕಾಮಾಂ ಸ ಕಾಮಾರ್ತ: ಪನ್ನಗೇಂದ್ರ ವಧೂ ಇವ.
(ಆರಣ್ಯಕಾಂಡ .೪೯,೨೨; ಕಿಷ್ಕಿಂಧಾ ಕಾಂಡ ೬.೧೦)

...ನಿಷ್ಕಾಮಳಾದ ಸೀತೆ ಕಾಮುಕ (ರಾವಣ)ನ ಕೈಯಲ್ಲಿ ಹೊರಳಾಡುತ್ತಿದ್ದಳು...

ವಿರಾಧವಧೆಯ ಸಂದರ್ಬದಲ್ಲಿ. 'ಲಕ್ಷ್ಮಣನಾದರೋ ಒಡನೆಯೇ ಸಂಕ್ರುದ್ಧನಾಗಿ. ಕೆಣಕಿದ ಕೃಷ್ಣಸರ್ಪದಂತೆ ಘೂತ್ಕರಿಸುತ್ತ, (ಇಲ್ಲಿ, ಈ ಉಪಮೆಯ ಲೈಂಗಿಕ ಸೂಚನೆಯ ಸೂಕ್ತತೆಯನ್ನು ಗಮನಿಸಿ) ವಿರಾಧನನ್ನು ಕೊಲ್ಲಲು ಅರ್ಭಟಿಸುತ್ತಾನೆ" ಎಂದು ಬರೆಯುತ್ತಾರೆ. ಇಲ್ಲಿ ಅವರಣದಲ್ಲಿ ಹಾಕಿರುವ ಮಾತು ವಿಚಾರಣೀಯ. ಸರ್ಪವನ್ನು ಇಲ್ಲಿ ಲೈಂಗಿಕಶಕ್ತಿಯ ಸಂಕೇತವಾಗಿ ಪರಿಗಣಿಸಲು ಸಾಧ್ಯವಿಲ್ಲ. ಸರ್ಪದ ವಿಷ ಮರಣಸದೃಶವಾಗಿರುವಂತೆ ಲಕ್ಷ್ಮಣ ವಿರಾಧನಿಗೆ ಮೃತ್ಯು ಪ್ರಾಯವಾಗುತ್ತಾನೆ. ಹಾಗೆಯೇ ಸೀತೆಯನ್ನು ಹೊತ್ತುಕೊಂಡು ಹೋಗುತ್ತಿರುವ ರಾವಣನಿಗೆ ಸೀತೆ ವಿಷಪ್ರಾಯವಾಗುತ್ತಾಳೆ. ಕೊನೆಗೆ ವಿರಾಧ ಮತ್ತು ರಾವಣ ಇಬ್ಬರೂ ನಾಶವಾಗುತ್ತಾರೆ.ಆದ್ದರಿಂದ ಸರ್ಪ ಮತ್ತು ಸರ್ಪಿಣಿಪ್ರತಿಮೆಗಳು ಮೃತ್ಯು ಸೂಚಕವಾಗಿದೆ; ಪರಿಭಾವಿಸಿದಷ್ಟೂ ಅರ್ಥಪೂರ್ಣವಾಗಿದೆ.

ತಾಂ ಲತಾಂ ಇವ ವೇಷ್ಟಂತೀಂ ಮಹಾದ್ರುಮಾನ
ಮುಂಚ ಮುಂಚೇತಿ ಬಹುಶ: ಪ್ರವದನ ರಾಕ್ಷಸಾಧಿಪ:
ಕ್ರೋಶಂತೀಂ ರಾಮ ರಾಮ ಇತಿ ರಾಮೇಣ ರಹಿತಾಂ ವನೇ
ಜೀವಿತಾಂತಾಯ ಕೇಶೇಷು ಜಗ್ರಾಹಾಂತಕಸಂನಿಭ:

ಅಲ್ಲಿದ್ದ ದೊಡ್ಡಮರಗಳನ್ನು ಬಳಸಿ ಅಪ್ಪಿಕೊಂಡು 'ರಾಮ ರಾಮ' ಎಂದು ಸೀತೆ ಕೂಗಿಕೊಳ್ಳುತ್ತಿದ್ದಳು. 'ಬಿಡು, ಬಿಡು ಬಿಡು ಎಂದು ರಾವಣ ಅವಳನ್ನು ಅಟ್ಟಿಸಿಕೊಂಡು ಹೋಗುತ್ತಿದ್ದನು...(ಅರಣ್ಯಕಾಂಡ ೫೨,೯–೧೦)

ವಿಪ್ರಕೀರ್ಣಾಜಿನಕುಶಂ ವಿಪ್ರವಿದ್ಧಭೃಸೀಕಟಂ
ದೃಷ್ಟ್ವಾ ಶೂನ್ಯೋಟಜಸ್ಥಾನಂ ವಿಲಲಾಪ ಪುನಃ ಪುನಃ

"ಆಶ್ರಮದಲ್ಲಿ ಕೃಷ್ಣಾಜಿನ ದರ್ಭೆಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಆಸನ, ಚಾಪೆ ಅತ್ತಿತ್ತ ಚದರಿ ಹರಡಿದ್ದವು. ಶೂನ್ಯವಾಗಿದ್ದ ಆಶ್ರಮವನ್ನು ನೋಡಿ (ರಾಮನಿಗೆ (ದುಃಖ) ಉಕ್ಕಿ ಬಂತು; ಮತ್ತೆ ಮತ್ತೆ ಅತ್ತನು... (ಅರಣ್ಯಕಾಂಡ ೬೦.೭)

ಸಿಕ್ಕಾಪಟ್ಟೆ ಬಿದ್ದಿದ್ದವು (ಕೀರ್ಣ, ವಿದ್ಧ) ಮಾತುಗಳಲ್ಲಿ ಸೀತೆ ರಾವಣನಿಂದ ತಪ್ಪಿಸಿಕೊಳ್ಳಲು ನಡೆಸಿರುವ ಪ್ರಯತ್ನ ಚೆನ್ನಾಗಿ ಧ್ವನಿತವಾಗುತ್ತದೆ.

ರಾಮ ಪಟ್ಟಾಭಿಷೇಕದಿಂದ ರಾಮಾಯಣ ಸಮಾಪ್ತವಾಗುವುದು ಸೂಕ್ತ. ವಾಲ್ಮೀಕಿ ರಾಮಾಯಣವನ್ನು ಆಧಾರವಾಗಿಟ್ಟುಕೊಂಡು ಬರೆದ ದೇಶಭಾಷೆಯ ಕವಿಗಳು ಪಟ್ಟಾಭಿಷೇಕಕ್ಕೆ ಮುಕ್ತಾಯ ಮಾಡಿದ್ದಾರೆ. ಉತ್ತರಕಾಂಡ ಪ್ರಕ್ಷಿಪ್ತ ಎಂದು ಸಾಮಾನ್ಯವಾಗಿ ಎಲ್ಲಾ ವಿದ್ವಾಂಸರೂ ಒಪ್ಪಿಕೊಂಡಿದ್ದಾರೆ.

ಉತ್ತರಕಾಂಡದಲ್ಲಿ ವರ್ಣಿತವಾಗಿರುವ ಸೀತಾಪರಿತ್ಯಾಗದ ಸಂದರ್ಭದಲ್ಲಿ ಸೀತೆ ಹೇಳುವ ಮಾತುಗಳು ಈ ಲೇಖಕರಿಗೆ ದಿಗ್ಭ್ರಮೆ ಹುಟ್ಟಿಸಿವೆ :

ನಿರೀಕ್ಷ್ಯ ಮಾದ್ಯ ಗಚ್ಛತ್ವಮ ಋತುಕಾಲ ಅತಿವರ್ತಿನೀಂ (ಉ.ಕಾ. ೪೮.೧೯)

"ನನಗೆ ಋತುಕಾಲ ಮೀರಿರುವುದನ್ನು ನೀನು ನೋಡಿ ಹೋಗು."

'ನಿರೀಕ್ಷ್ಯ' ಮತ್ತು 'ಋತುಕಾಲ' ಪದಗಳಿಗೆ ಅವರು ಅಸ್ವಾಭಾವಿಕ ಅರ್ಥವನ್ನು ಆರೋಪಿಸಲು ಯತ್ನಿಸಿದ್ದಾರೆ. ಸೀತೆಗೆ ಋತುಕಾಲ ನಿಂತಿರುವುದನ್ನು ಖಚಿತಪಡಿಸಿಕೊಳ್ಳಬೇಕಾದರೆ ಲಕ್ಷ್ಮಣ "ಅವಳ ದೇಹದ ಯಾವುದೋ ಒಂದು ಭಾಗವನ್ನು, ಪ್ರದೇಶವನ್ನು ಕಣ್ಣಾರೆ ನೋಡಬೇಕು" ಎಂದು ಬರೆಯುತ್ತಾರೆ.

ಅವರ ಸೂಚ್ಯಾರ್ಥದ 'ಭಾಗ' ಬರೆಯುವಂಥದಲ್ಲವೆಂದೇನೋ ಅವರು ಅದನ್ನು ಬಹು ನಾಜೂಕಾಗಿ ಹೇಳಿದ್ದಾರೆ. ಋತುಕಾಲ ಮೀರಿದೆ ಎಂದರೆ 'ನೀರು ನಿಂತಿದೆ' ಮುಟ್ಟು ನಿಂತಿದೆ' ಎಂದು ಅರ್ಥ. ಇಲ್ಲಿ 'ಆ ಪ್ರದೇಶ'ವನ್ನು ವೈದ್ಯರಂತೆ ಕಣ್ಣಾರೆ ನೋಡಿ ಪರೀಕ್ಷಿಸುವ ಇಂಗಿತವಿಲ್ಲ. ಪ್ರಸವಶಾಸ್ತ್ರಜ್ಞರೂ ಕೂಡ ಆ 'ಪ್ರದೇಶ'ವನ್ನು ನೋಡಿ ಗರ್ಭ ನಿಂತಿದೆ ಎಂದು ಹೇಳಲು ಸಾಧ್ಯವಿಲ್ಲವೆಂದು ಕೇಳಿದ್ದೇನೆ. ಗರ್ಭ ನಿಂತಿದೆ ಎಂದು ಖಚಿತ ಪಡಿಸಿಕೊಳ್ಳಲು ಇತರೇ ಪರೀಕ್ಷೆಗಳನ್ನು ವೈದ್ಯರು ಮಾಡು

ವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದ್ದರಿಂದ ಡಾ. ಪ್ರೋಲಂಕಿ ಅವರ ಗರ್ಭಿತಾರ್ಥ ಸರಿಯಲ್ಲ. ಅವರ ಪ್ರಕಾರ ಆ 'ಪ್ರವೇಶ'ವನ್ನು ನೋಡಿ ರಕ್ತಸ್ರಾವ ನಿಂತಿದೆ ಎಂದು ದೃಢಪಡಿಸಿಕೊಳ್ಳುವುದೇ ? ಗರ್ಭ ಧರಿಸುವವರೆಗೂ ರಕ್ತಸ್ರಾವ ಆಗುತ್ತದೆಂದು ಅವರ ತಿಳಿವಳಿಕೆಯೋ ? 'ಋತುಕಾಲ ಅನಿವರ್ತಿನೀಂ' ಎಂದರೆ ಗರ್ಭಿಣಿ ಎಂಬ ಅರ್ಥವೇ ಸಾಧುವೇ. ವಿದ್ವಾನ್ ಎನ್. ರಂಗನಾಥ ಶರ್ಮಾ ಅವರ ಅಡಿ ಟಿಪ್ಪಣಿ ಸರಿ.

"ನಾವು ರಾಮಾಯಣವನ್ನು ಪೂಜಿಸುತ್ತೇವೆ. ಬರೀ ರಾಮಾಯಣ ಎನ್ನುವುದಿಲ್ಲ; ಶ್ರೀಮದ್ರಾಮಾಯಣ ಎನ್ನುತ್ತೇವೆ" ಎಂದು ಲೇಖಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜನ ಏನೆಂದು ಕರೆಯುತ್ತಾರೆಂಬುದು ಗೌಣ: ವಾಲ್ಮೀಕಿಯ ದೃಷ್ಟಿ ನಮಗೆ ಮುಖ್ಯ.

ನಾರದನನ್ನು ವಾಲ್ಮೀಕಿ ಪ್ರಶ್ನೆ ಮಾಡುವಾಗ ಆಡುವ ನುಡಿಗಳು ಮಹತ್ವಪೂರ್ಣವಾಗಿವೆ.

> ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್
> ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ... ನರಂ (ಬಾಲಕಾಂಡ ೧.೧–೫)

ಈ ಲೋಕದಲ್ಲಿ ಈಗ (ಸಾಂಪ್ರತ) ಗುಣವಂತನೂ ವೀರ್ಯವಂತನೂ ಆದ ಮನುಷ್ಯ (ನರಂ) ಯಾರಿದ್ದಾನೆ? ಎಂದು ವಾಲ್ಮೀಕಿ ಕೇಳುತ್ತಾನೆ. ವಾಲ್ಮೀಕಿಯ ಮಾತುಗಳಲ್ಲಿ ಸಾಂಪ್ರತಂ (ಈಗ, ಹಾಲಿ) ಲೋಕೇ (ಈ ಲೋಕದಲ್ಲಿ) ನರಂ (ನರವಿಲ್ಲದವನನ್ನು 'ನರಸತ್ತವನು' ಎಂದು ಹೇಳುತ್ತಾರೆ) ಶಬ್ದಗಳು ಬಹಳ ಮುಖ್ಯ. ವಾಲ್ಮೀಕಿ ಈ ಲೋಕವನ್ನು ಉತ್ತಮ ಪಡಿಸುವುದರ ಬಗ್ಗೆ ತಲೆಕೆಡಿಸಿಕೊಂಡಿದ್ದಾನೆ. ಅವನಿಗೆ ಹಿಂದೆ ಆಗಿ ಹೋದ ಅಥವಾ ಮುಂದೆ ಬರುವ ನರನ ಬಗ್ಗೆ ಆಸಕ್ತಿಯಿಲ್ಲ. ವರ್ತಮಾನದಲ್ಲಿ ಕೇವಲ ಆಸಕ್ತಿ. ಆದ್ದರಿಂದಲೆ ಹಾಲಿ ಇರುವಂಥ ಮನುಷ್ಯನ ವಿಷಯ ಕೇಳುತ್ತಾನೆ. ನಾರದ ರಾಮಕಥೆಯನ್ನು ಸಂಕ್ಷಿಪ್ತವಾಗಿ ಸುಮಾರು ತೊಂಬತ್ತು ಅನುಷ್ಟುಪ್ ಶ್ಲೋಕಗಳಲ್ಲಿ ವಾಲ್ಮೀಕಿಗೆ ತಿಳಿಸುತ್ತಾನೆ. ನಾರದನಾಗಲೀ ವಾಲ್ಮೀಕಿಯಾಗಲೀ ರಾಮನನ್ನು ದೇವರೆಂದು, ಅವತಾರವೆಂದು, ದೈವಾಂಶ ಸಂಭೂತನೆಂದು ಹೇಳುವುದಿಲ್ಲ. ಉತ್ಕಟಶ್ರಮದಿಂದ, ತ್ಯಾಗದಿಂದ ಪುರುಷಪುರುಷೋತ್ತಮನಾಗಲು ಸಾಧ್ಯ ಎಂಬುದನ್ನು ವಾಲ್ಮೀಕಿ ಅದ್ಭುತವಾಗಿ ಚಿತ್ರಿಸುತ್ತಾನೆ. ಬ್ರಹ್ಮಾದಿ ದೇವತೆಗಳು ರಾಮನ ಮೇಲೆ ದೇವತ್ವವನ್ನು ಹೇರಿದಾಗ ರಾಮನಾಡುವ ಮಾತು ಅರ್ಥಪೂರ್ಣವಾಗಿದೆ. ದೊಡ್ಡ ಮನುಷ್ಯ ಮಾತ್ರ ತನಗೆ ಬಂದ ದೊಡ್ಡಸ್ತಿಕೆಯನ್ನು ನಿರಾಕರಿಸಬಲ್ಲ; ಹಾಗೆ ನಿರಾಕರಿಸುವುದರಿಂದ ಮತ್ತೂ ದೊಡ್ಡವನಾಗುತ್ತಾನೆ.

ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ(ಯು.ಕಾ.೧೨೦.೧೧)

"ನಾನು ಮನುಷ್ಯ, ದಶರಥನ ಮಗ ರಾಮ ಎಂದು ಗೊತ್ತು, ಅಷ್ಟೆ"

ದೇವರ ಅವತಾರ ಇತ್ಯಾದಿಯಾಗಿ ಹೇಳುವುದೆಲ್ಲ ಪ್ರಕ್ಷಿಪ್ತ.

ಇದುವರೆಗೆ ಡಾ. ಫ್ರೋಲಂಕಿಯವರ ಆರೋಪಗಳಿಗೆ ಉತ್ತರ ಸಿಗುವ ವಿವರಗಳನ್ನು ಆದಷ್ಟು ಸಂಕ್ಷಿಪ್ತವಾಗಿ ಕೊಡಲು, ಮೂಲದಿಂದ ಉಲ್ಲೇಖಿಸಿದ್ದೇನೆ. ವಾಲ್ಮೀಕಿಯ ಮಹಾಕಾವ್ಯದಲ್ಲಿ ಸೀತಾಲಕ್ಷ್ಮಣರಿಗೆ ಕಳಂಕ ತಟ್ಟುವಂಥ ಒಂದು ಅಂಶವೂ ಇಲ್ಲ.

'ರಾಮಾಯಣದ ಸೀತಾಯಣ' ದ ಅಭಿಪ್ರಾಯಗಳು ಸರಿಯಲ್ಲ. ಅವರ ಲೇಖನದ ಶೀರ್ಷಿಕೆಯೇ ಅನಾವಶ್ಯಕ (Superfluous) ಏಕೆಂದರೆ ಸೀತೆಯಿಲ್ಲದಿದ್ದರೆ ರಾಮಾಯಣವೇ ಇಲ್ಲ. ರಾಮಾಯಣ ಎಂದರೆ, ಅದು ಸೀತಾಯಣವೂ ಹೌದು: ಆದರೆ ಅದು ಡಾ. ಫ್ರೋಲಂಕಿಯವರ ಅರ್ಥದಲ್ಲಿ ಅಲ್ಲ.

ಸಾವು

ಎಸ್. ಎಸ್. ಮುಕ್ತಾಯಕ್ಕ

ವೈದ್ಯರ ಮುಖದ ಆತಂಕದಲ್ಲಿ
ರಕ್ತದ ಬಾಟಲುಗಳಲ್ಲಿ
ನರ್ಸುಗಳ ಹೆಜ್ಜೆಯ ಏರಿಳಿತದಲ್ಲಿ
ಕೋಣೆಯ ಸ್ಥಬ್ಧತೆಯಲ್ಲಿ
ನನ್ನ ಜನಗಳ ಅಗಲವಾದ ಕಂಗಳಲ್ಲಿ
ಸಾವನ್ನು ಕಾಣುವೆನು.

ನೋವಿನಲಿ ಮಿಡಿಯುವ ನರಗಳಲ್ಲಿ
ಅದು ಸಂಚರಿಸುತ್ತಿದ್ದರೂ
ನನ್ನನ್ನು ಹೆದರಿಸುವುದಕ್ಕಾಗದೆ
ನನ್ನ ನಿಶ್ಚಲತೆಯನ್ನು ಕದಲಿಸಲಾಗದೆ
ಅದು,
ಬಂದಂತೆ ಹೊರಟು ಹೋಗುವುದನ್ನು
ಸಮಾಧಾನದ ಉಸಿರಿಡುವ
ನನ್ನ ಸುತ್ತಲಿನವರ ಮುಖದಲ್ಲಿ
ಕಾಣುವೆನು.

ಸ: ಕವ ೨೫/೧೨೫–೧೨೬

ಏಳು ಕವನ ಸಂಕಲನಗಳು

ಕೆರ

೧ ಪ್ಯಾಂಥರ್ ಪದ್ಯಗಳು : ಚೆನ್ನಣ್ಣ ವಾಲೀಕಾರ, (೧೯೮೧)
೨ ನಿತ್ಯೋತ್ಸವ ; ಕೆ. ಎಸ್. ನಿಸಾರ್ ಅಹಮದ್ (೧೯೮೧)
೩ ಬೆಳ್ಳಿತೆರೆಗೆ ಬದುಕಿನ ಚಿತ್ರ : ಹ. ಶಿ. ಭೈರನಟ್ಟಿ (೧೯೮೧)
೪ ಪುಟ್ಟನ ಕನಸು : ಗುರುರಾಜ ಬೆಣಕಲ್ (೧೯೮೦)
೫ ಹದಿವಯದ ಕವನಗಳು : ಡಿ. ಜಿ. ಹಡಪದ (೧೯೮೦)
೬ ಉದ್ಘೋಷ : ಮೇಟಿ ಮುದಿಯಪ್ಪ (೧೯೮೦)
೭ ತುಮುಲ : ಶಿವಾನಂದ ಬೆಳಕೂಡ (೧೯೮೦)

ಎಂದಿನಿಂದಲೂ ಪ್ರಯೋಗನಿಷ್ಠರಾಗಿ ಉಳಿದಿರುವ ಚೆನ್ನಣ್ಣ ವಾಲೀಕಾರರ ನಾಲ್ಕನೆಯ ಕವನ ಸಂಕಲನ–**ಪ್ಯಾಂಥರ್ ಪದ್ಯಗಳು.** ಹೆಸರೇ ಸೂಚಿಸುವಂತೆ, ಕಾವ್ಯಕ್ರಿಯೆಗೆ ಕವಿ ಕೊಡುವ ವ್ಯಾಖ್ಯಾನ ಸುಸ್ಪಷ್ಟವಾಗಿದೆ; ಹಾಗೂ, ಕವಿಯ ಕಾವ್ಯಧೋರಣೆ ಹೀಗಿರುವುದರಿಂದ ಕಾವ್ಯವು ಸ್ವಾಭಾವಿಕವಾಗಿಯೇ ಇಲ್ಲಿ ಪ್ರಯೋಗನಿಷ್ಠವಾಗಿ ಉಳಿದುಬಿಡುವಂತಾಗಿದೆ.

ಹೋರಾಟದ ವಸ್ತುವನ್ನು, ಅನುಭವಗಳನ್ನು ಎತ್ತಿಹಿಡಿಯುವ ಸಾಹಿತ್ಯಕೃತಿ ಕಲೆಯ ಉದ್ದೇಶವನ್ನು ಮೊನಚಾಗಿಸುವುದರಿಂದ, ಜನಪರತೆಯ ಹಳಿಯಲ್ಲಿ ಕಾವ್ಯ ಸಾಗುವ ಹಾಗಾಗುತ್ತದೆ. ಆದರೆ, ಜನಪರವಾಗಬೇಕೆಂಬ ಅತ್ಯಾವೇಶದಲ್ಲಿ ಕಾವ್ಯ ತನ್ನ ಕಲೆಯ ಸೂಕ್ಷ್ಮಧ್ವನಿಗಳನ್ನೂ ನಾಜೂಕನ್ನೂ ಕಳಕೊಳ್ಳಬೇಕೆಂದೇನೂ ಇಲ್ಲ; ಸಂಕಲನದ ಮುನ್ನುಡಿಯಲ್ಲಿ ಈ ಅಂಶಗಳನ್ನು ವಿವರವಾಗಿ ವಿಶ್ಲೇಷಿಸಿರುವ ಬರಗೂರರು ಗುರುತಿಸಿರುವಂತೆ ವಾಲೀಕಾರರ ಕಾವ್ಯದಲ್ಲಿ 'ಅತಿವಾಚ್ಯದ ಅಪಾಯ ಮತ್ತು ಅವನ್ನು ಮೀರಬಯಸುವ ಹೋರಾಟ' ಎದ್ದು ಕಾಣುತ್ತದೆ. ಅತಿವಾಚ್ಯತೆಯ ದೋಷ ತೀವ್ರವಾಗುವುದು ಅತಿವಿವರದಿಂದ; ಈ ಅತಿವಿವರದಲ್ಲಿ ಕವಿಯ ಆಕ್ರೋಶ, ಹತಾಶೆಗಳು ಮೇರೆವರಿಯುವುದನ್ನು ಇಲ್ಲಿನ ಹೆಚ್ಚುಕಮ್ಮಿ ಎಲ್ಲ ಕವನಗಳಲ್ಲಿ

ಗುರುತಿಸಬಹುದು. ಈ ಹತಾಶೆಯನ್ನು ಮೀರಿನಿಲ್ಲುವ ಸಮಾಜವಾದಿ ಆಶಾವಾದಕ್ಕೆ ಇಲ್ಲಿ ಸಾಕಷ್ಟು ಎಡೆಯಿರುವುದು ತುಂಬ ಮುಖ್ಯ ಕೂಡ. ಉದಾ;

೧. ಸಭಿಕರಿಗೆ ಕೈಜೋಡ್ಸಿ ಎದೆಬಿಚ್ಚಿ ಹೇಳ್ತೀವಿ ಹ್ವಾದಾವ್ರೊ ಹಿಂದಿನ ಕಥೆಯು
ದೇವಸೂರ ಮಹಾದೇವ ಭದ್ರಾವತಿ ಕೃಷ್ಣಪ್ಪ ಇರುವಾಗ ಇಲ್ಲಯ್ಯ ವ್ಯಥೆಯು
ರಾಮದೇವ ರಾಕೆಯು ದೇವಯ್ಯ ಹರವೆಯು ಇರುವಾಗ ಇಲ್ಲಯ್ಯ ಕುದಿಯು
ಪಾಲೀಕಾರ ಚೆನ್ನಣ್ಣ ಸಿದ್ದಲಿಂಗಯ್ಯ ಕೂಡಿಬರಿವಾಗ ಸಾಯುವನು ವಿಧಿಯು (೨೨)

೨. ಎಲ್ಲಿತನ ಕತ್ತಲವು ಬೆಳಗು ಆಗಲಿಬೇಕು
ಚಿಕ್ಕಿಗಳು ಹೊಳೆದಾವ ಮ್ಯಾಗ
ಜಗತ್ತಿನೆಲ್ಲಾ ಕಡೆಗೆ ಮೊದಲ್ಹಿಂಗೆ ಅತ್ತವರೆ
ಗಟ್ಯಾಗಿ ಕುಳಿತಾರ ಈಗ (೧೭)

ಇಲ್ಲಿನ ಗಪದ್ಯ ಮತ್ತು ಹಾಡುಗಳಲ್ಲಿ ಒಡ್ಡಯ್ಯನ ಹಾಡು, ಪ್ರಜಾಪ್ರಭುತ್ವದಲ್ಲಿ... ಸಿಕ್ಕಿಂ ಸ್ವಾತಂತ್ರ್ಯಗೀತೆ, ಪ್ಯಾಂಥರ್‌ಪದ್ಯ, ಬಂಡಾಯದ ಕಿಡಿಗಳು'—ಪ್ರಯೋಗದ ದೃಷ್ಟಿಯಿಂದ ವಿಶೇಷ ಉಲ್ಲೇಖವನ್ನು ಬಯಸುತ್ತವೆ.

●

ನಿಸಾರರ ವಿವಿಧ ಸಂಕಲನಗಳಿಂದ ಆಯ್ದ ಕವನಗಳು **ನಿತ್ಯೋತ್ಸವ** ದಲ್ಲಿವೆ. ಗೇಯಾಂಶವುಳ್ಳ ಭಾವಗೀತೆಗಳನ್ನು ಧ್ವನಿಮುದ್ರಣ ಮತ್ತು ಪ್ರಸಾರಕ್ಕಾಗಿ ಒಂದೆಡೆ ಸಂಗ್ರಹಿಸುವ ಉದ್ದೇಶ ಈ ಸಂಕಲನದ್ದಾಗಿದೆ. ಈ ಸಂಕಲನ ಎರಡು ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾದುದು. ಒಂದು- ಬಹುತೇಕ ಸಂದರ್ಭಗಳಲ್ಲಿ ಎಳ್ಳಷ್ಟೂ ಸಾಹಿತ್ಯಾಂಶವಿಲ್ಲದ, ಹೇಳಿಕೊಳ್ಳುವ ಗುಣ ಏನಿದ್ದರೂ ಗಾಯಕರ ಕಂಠ ಮಾಧುರ್ಯ ಹಿನ್ನೆಲೆ ಸಂಗೀತ–ನಿರ್ದೇಶನಗಳಿಗೆ ಮಾತ್ರ ಸೀಮಿತವಾಗಿರುವ, ಕನ್ನಡ ಚಿತ್ರಗೀತೆಗಳು ಸೃಷ್ಟಿಸುತ್ತ ಬಂದಿರುವ ಕಲಾತ್ಮಕತೆಯ ಬರಡುತನದ ಮರುಭೂಮಿಯ ನಡುವೆ ಓಯಸಿಸ್‌ನ ತಂಪನ್ನೂ ಜೀವಂತಿಕೆಯನ್ನೂ ಕನ್ನಡಿಗರ ಹೃದಯ–ಮನಸ್ಸುಗಳಿಗೆ ನೀಡಬಲ್ಲ ಕೆಲವು ಒಳ್ಳೆಯ ಭಾವಗೀತೆಗಳು ಇಲ್ಲಿವೆ. (ಲಂಕೇಶ, ಕಂಬಾರ, ದೊಡ್ಡರಂಗೇಗೌಡರಂಥವರ ಹಾಡುಗಳನ್ನು ಬಿಟ್ಟರೆ- ಸಿನೆಮಾಕ್ಕಾಗಿಯೇ ಬರೆದುವು- ಕನ್ನಡ ಚಿತ್ರಗೀತೆಗಳು ಸಾಹಿತ್ಯಕ್ಕೆ ಅಂಥ ಕೊಡುಗೆಯನ್ನೇನೂ ನೀಡಿಲ್ಲ). ಎರಡು– ಭಾವಗೀತೆಗೆ ಸತ್ವ ತುಂಬುವ ಭಾವನಿರ್ಭರತೆ ಮತ್ತು ಗೇಯತೆಗಳೊಂದಿಗೆ ನಿಸಾರರ ತಿಳಿಗನ್ನಡದ ಸುಭಗ ಶೈಲಿಯೂ ಇಲ್ಲಿ ಗಮನ ಸೆಳೆಯುವಂಥಾದ್ದು. (ಉದಾ: ಎಲ್ಲ ಮರೆತಿರುವಾಗ; ನಾಡದೇವಿಯೆ; ನೆನಪಾಗಿ ಬಾರದಿರು; ಅಂದೇನು, ಇಂದೇನು; ನೀ ನುಡಿಯದಿರಲೇನು? ; ನನ್ನ ನಲವಿನ ಬಳ್ಳಿ; ಮದುವೆ; ನಾ ನಿನ್ನ ಕಂಡಾಗ; ಮುಂ).

ಕನ್ನಡ ಭಾವಗೀತೆಗಳ ಮೊತ್ತಮೊದಲ ಕ್ಯಾಸೆಟ್ಟಾಗಿ ಬಂದಿರುವ 'ನಿತ್ಯೋತ್ಸವ'ದ ಹಾಡುಗಳ ಸಂಗೀತದ ಬಗ್ಗೆ ಪ್ರತ್ಯೇಕವಾಗಿ ವಿಮರ್ಶೆ ನಡೆಯಬೇಕಾಗಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಜನಸಾಮಾನ್ಯರಿಗೆ ಅರ್ಥಪೂರ್ಣ ಅಭಿಮಾನ ಹುಟ್ಟಿವಂತೆ ಮಾಡುವಲ್ಲಿ ಇಲ್ಲಿನ ಹೆಚ್ಚಿನ ಹಾಡುಗಳು (ಅದೂ ಶಿವಮೊಗ್ಗ ಸುಬ್ಬಣ್ಣನವರ ಕಂಠದಲ್ಲಿ) ಯಶಸ್ವಿಯಾಗಿವೆ ಎಂದಷ್ಟೇ ಇಲ್ಲಿ ಹೇಳಬಹುದು.

●

ಬೈರನಜ್ಜಿ ಅವರ ಕಾವ್ಯ ವಾಚಾಳಿ ವಿವರಗಳಲ್ಲಿ ಸೋರುತ್ತ ಹೋಗುತ್ತದೆ. ಉದಾ: 'ಹಾರಾಡುವ ತಟ್ಟೆಗಳು, ಕಡಲತೀರದ ಲಲನೆಯರು, ಪರಿದಾಡುವವರು; ಪದಗಳ ಮಿತವ್ಯಯ ಮತ್ತು ಅನುಭವದ ಏಕಾಗ್ರತೆಯಿಂದ ವಿಶಿಷ್ಟವಾಗಬೇಕಾದ ಹನಿಗಳಲ್ಲೂ ಈ ವಾಚ್ಯತೆ ಹಾಯ್ದುಬಿಡುವುದರಿಂದ ಅವುಗಳ ತೀವ್ರತೆಗೆ ಚ್ಯುತಿ ಒದಗಿದೆ. ('ಗಾಂಧೀಪದ್ಯಗಳು, ಜ್ಯಾಗಳು') ಸೊಗಸಾದ ಕಲ್ಪನೆ ಮತ್ತು ಅದಕ್ಕೆ ಅನುಗುಣವಾದ ಪದಬಂಧದ ಮೂಲಕ 'ಭ್ರಮಾಧೀನ ಪೃಥ್ವಿ' ಹಾಗೂ 'ಹಾವು ಹೊಡೆಯುವ ರೀತಿ' ಉಲ್ಲೇಖವನ್ನು ಬಯಸುತ್ತವೆ. 'ಲಂಬಾಣಿಗಳು' ಕವಿತೆ, ವಾಸ್ತವದ ಒಂದೇ ಮುಖವನ್ನು ಗುರುತಿಸುತ್ತದೆ ವಿನಾ, ಲಂಬಾಣಿಗಳ ಬದುಕಿನ ಇನ್ನೊಂದು ಕಪ್ಪುಮುಖವನ್ನು ಸೆರೆಹಿಡಿಯುವ ಉದ್ದೇಶವಿಲ್ಲದೆ ಕರಿಕಾಗುತ್ತದೆ. ನಿರೂಪಣೆಯಲ್ಲಿ ಧ್ವನಿಯನ್ನು ವಾಚ್ಯಗೊಳಿಸುವ ದೋಷವಿದ್ದರೂ ವಸ್ತು ಮತ್ತು ಧೋರಣೆಯಿಂದ 'ವಂಚಿತರು' ಓದಿಸಿಕೊಂಡು ಹೋಗುತ್ತದೆ. ಬದುಕಿನ ನಾನಾ ಮುಖಗಳ ಅನುಭವದ ಸಮಗ್ರೀಕರಣಕ್ಕಾಗಿ ಕವಿ ನಡೆಸುವ ನಿರಂತರ ಶೋಧದಿಂದಾಗಿ, ಮತ್ತು ಕಲೆಯಲ್ಲಿ ನಿಜಗೊಳಿಸುವ ಸಾಮರ್ಥ್ಯದಿಂದಾಗಿ ಮಾತ್ರ ಕವಿ ಸಮಾಜಕ್ಕೆ ಹೊಸತನ್ನು, ಪ್ರಸ್ತುತವಾದುದನ್ನು ನೀಡಬಲ್ಲ–ಎಂಬುದನ್ನು ಭೈರನಟ್ಟಿ ಇನ್ನೂ ತಿಳಿಯಬೇಕಾಗಿದೆ.

●

ಬೆಣಕಲ್ ಅವರ **ಪುಟ್ಟನ ಕನಸು,** ಮಕ್ಕಳ ಹೃದಯ-ಮನಸ್ಸುಗಳನ್ನು ಮುದ ಗೊಳಿಸುವ ಲಯಬದ್ಧ ರಚನೆಗಳನ್ನೊಳಗೊಂಡಿದೆ. ಆಶಯದಲ್ಲಿ ನೀತಿಬೋಧೆಯೂ ಒಂದಾಗಿದೆ. ಅದರೆ, 'ತೂಗುತ್ತಾಯಿ, ಮೋಸಗಾರನಿಗೆ ಮೋಸ ತಪ್ಪದು, ನೀಲಿ ಆಕಾಶದಲಿ' ಮುಂತಾದವು ಕಥನಕಲೆ ಹಾಗೂ ಲಯಸಂಯೋಜನೆಯಿಂದ ವಿಶಿಷ್ಟವಾಗಿದೆ. 'ಗಾಳಿ–ಗೊಲ್ಲಿ' ಎಂಬ ಕಿರುಗವನ ಭಾಷೆಯ ಮೇಲಿನ ಕವಿಯ ಹಿಡಿತವನ್ನು ಸಾಬೀತು ಪಡಿಸಿದೆ. ('ಮೇಯುತಿವೆ ಜೀವಿಗಳು ಕಾಲವನ್ನು'—ಎಂಬುದು ಸಮರ್ಥವೂ ನವ್ಯೋನವವೂ ಆದ ಪ್ರಯೋಗ). ಬಾಲಕ–ತಂದೆಯ ನಡುವಣ ಸಂವಾದದ ರೂಪದಲ್ಲಿರುವ 'ದುಡಿಮೆಯ ಬೆಲೆ' ಶ್ರಮದ ಗೌರವವನ್ನು ಎತ್ತಿ

ಒಡಿಯುವ ಮಾಮೂಲು ವಸ್ತುವನ್ನು ಒಳಗೊಂಡಿದೆ. 'ಪುಟ್ಟನ ಕನಸು', ಮಗುವೊಂದು ಸಾಮಾಜಿಕ ಅಸಮಾನತೆಯ ಕಡೆಗೆ ಬೇಸತ್ತು ಪ್ರಶ್ನಿಸುತ್ತಲೇ, ಸಮಾಜವಾದಿ ಸಮಾಜದ ಉದಯದ ಕನಸನ್ನು ಹೊತ್ತಿರುವುದರಿಂದ ಮಹತ್ವ ಪಡೆಯುತ್ತದೆ. ನಮ್ಮ ಶಾಲೆಗಳಿಗೆ ಹೋಗುವ ಪುಟ್ಟಂದಿರೆಲ್ಲಾ ಇಂಥ ದಿಟ್ಟ ಪ್ರಶ್ನೆಗನ್ನು ಎಸೆಯುತ್ತ ಉತ್ತರಕ್ಕಾಗಿ ತಡಕಾಡುವ ಸಂನಿವೇಶವೊಂದನ್ನು ನಾವು ನಿರ್ಮಿಸಲು ಸಮರ್ಥರಾದಾಗ ನಮ್ಮ ನೆಲ ಹೊಸ ಆದರ್ಶಗಳ ಗರ್ಭಧಾರಣೆಗೆ ಬೆದೆಗೊಳ್ಳುವುದು ಖಂಡಿತ.

●

ಹಪಪವ ಅವರ **ಹದಿನಯದ ಕವನಗಳು,** ಹೆಸರೇ ಸೂಚಿಸುವಂತೆ ಹದಿವಯಸ್ಸಿನ ಕನಸುಣಿ ಸ್ವಭಾವ. ರೋಮಾಂಚಕತೆ (romanticism) ಗಳೇ ಸ್ಥಾಯಿಯಾಗಿರುವ ಕಾವ್ಯ. ವೈವಿಧ್ಯವೇ ಇಲ್ಲದ, ತೀರಾ ವಾಚಾಳಿಯಾದ ಇಲ್ಲಿನ ರಚನೆಗಳು ಅಂಶತ: ಆದರೂ ಕಾವ್ಯಗುಣವನ್ನು, ಕನಿಷ್ಠ ನಿರೂಪಣೆಯಲ್ಲಿ ಹೊಸತನವನ್ನು, ಪ್ರಕಟಿಸದಿರುವುದು ಬೇಸರ ಬರಿಸುತ್ತದೆ, ಬೇರೆ ರೀತಿಯಲ್ಲಿ ಬರೆಯುತ್ತಿದ್ದರೆ ಸಾಮಾನ್ಯ ಗದ್ಯವಾದರೂ ಆಗಿ ಓದಿಸಿಕೊಂಡು ಹೋಗುತಿತ್ತು. ಹೆಣ್ಣು-ಗಂಡಿನ ಸಂಬಂಧವೆಂದರೆ ಬಾಹ್ಯ ಆಕರ್ಷಣೆಯೆಂದಷ್ಟೇ ತಿಳಿದಾಗ ಇಂಥ ಅಪಾಯ ಉಂಟಾಗುತ್ತದೆ. ಅದೂ ಸಂವಾದರಹಿತ ಏಕಮುಖ ಪ್ರಣಯದ ನಿರೂಪಣೆಯಾಗಿ, ಶೃಂಗಾರ ಸಂದರ್ಭಕ್ಕೆ ಆಗತ್ಯವೆನಿಸುವ ಸೂಕ್ಷ್ಮತೆ–ಹೃದಯವಂತಿಕೆಗಳು ವಸ್ತುವಿನ್ಯಾಸದಲ್ಲಾಗಲೀ ಶೈಲಿಯಲ್ಲಾಗಲಿ ಕಾಣಿಸದಿರುವುದು ಅನುಭವ ದಾರಿದ್ರ್ಯವನ್ನು ಬೊಟ್ಟು ಮಾಡುತ್ತದೆ. ಸಾಂದ್ರ ಅನುಭವದ, ಹೊಸಬಗೆಯ ನಿರೂಪಣೆಯ ಒಂದೇ ಒಂದು ಕವನ ಈ ಸಂಕಲನದಲ್ಲಿರದಿರುವುದು, ಕವಿ, ಕಾವ್ಯದ ಕುರಿತು ತಳೆದಿರುವ ಬೇಜವಾಬ್ದಾರಿಯ ನಿಲುವನ್ನು ಪ್ರಕಟಿಸುತ್ತದೆ ಎನ್ನಲೇಬೇಕಾಗಿದೆ.

●

ಸಮಾನತೆ, ಸ್ವಾತಂತ್ರ್ಯಗಳಂಥ ಸಾಮಾಜಿಕ ಮೌಲ್ಯಗಳ ಆವಿಷ್ಕಾರಕ್ಕಾಗಿ ಕವಿ ಮುದಿಯಪ್ಪ ಹಪಹಪಿಸುತ್ತಿರುವುದು ಅವರ **ಉದ್ಘೋಷ**ದಲ್ಲಿ ಗೋಚರವಾಗುತ್ತದೆ. ಆದರೆ ಈ ಹಪಹಪ ಕಾವ್ಯದ ಆಕಾರ ಪಡೆಯದೆ ಒಣಭಾಷಣವಾಗುವುದು ಮಾತ್ರ ಬೇಕಿಲ್ಲ, (ಉದಾ: 'ನಾವೂ ಮನುಷ್ಯರೆ, ಉದ್ಘೋಷ, ಬಡತನ. ಹುಳುಗಳು, ಭ್ರಮೆ, ಹಾಡು'). ವೇಶ್ಯೆಯೊಬ್ಬಳ ದುರಂತಜೀವನದ ಸಂದರ್ಭದಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯ ಇಣುಕುನೋಟ ಬೀರುವ ಪ್ರವೃತ್ತಿ 'ಬಸವಿ'ಯಲ್ಲಿದೆ. ಭಾಗಶ: ಸಮರ್ಥ ಅಭಿವ್ಯಕ್ತಿಯಿಂದ ಖುಷಿಕೊಡುವ 'ನಮ್ಮವರು ಇವರು' ಸಂಯಮರಹಿತ ರೊಚ್ಚಿನಿಂದಾಗಿ ಕಲೆಯ ಛಾಪು ಪಡೆಯುವಲ್ಲಿ ಸೋಲುತ್ತದೆ. 'ಬದುಕು' ಇದ್ದದ್ದರಲ್ಲಿ ಚೊಕ್ಕಾಗಿ ಮೂಡಿಬಂದ ಕವನ. ಶೃಂಗಾರಾನುಭವದ ಕವಿತೆಗಳು ಹೊಸತೇನಿಲ್ಲದೆ

ಪೇಲವವಾಗಿವೆ; ಆದರೆ ಅಭಿವ್ಯಕ್ತಿಯಲ್ಲಿ ಹಡಪದರಿಗಿಂತ ಹೆಚ್ಚಿನ ಪಕ್ವತೆ, ಸಾಮರ್ಥ್ಯ ಎದ್ದು ಕಾಣುತ್ತದೆ, 'ಮಿನಿಗವನಗಳು' ಆ ಪ್ರಕಾರದ ಗುಣಗಳನ್ನು ಎಟುಕಿಸಿಕೊಳ್ಳದೆ ಸಾದಾ ರಚನೆಗಳಾಗಿ ಉಳಿಯುತ್ತವೆ.

●

ಶಿವಾನಂದ ಬೆಳಕೂಡರಿಗೆ ಕ್ರಾಂತಿಯ ಸಿದ್ಧತೆಯ ಸರಿಯಾದ ಪೂರ್ವಕಲ್ಪನೆ ಇರುವಂತಿದೆ. (ಉದಾ: ಮಧ್ಯಮವರ್ಗ ಮತ್ತು ಕ್ರಾಂತಿ). ಅಭಿವ್ಯಕ್ತಿ ಸಾಮರ್ಥ್ಯದಿಂದಲ್ಲ-ವಾದರೂ ಅನುಭವದ ಸಂಕೀರ್ಣತೆಯಿಂದ 'ಹಾಸಿಗೆ' ಗಮನಸೆಳೆಯುತ್ತದೆ.ಜೆಲೂಸಿನ ಹೋಲಿಕೆಯಲ್ಲಿ ಹೆಣ್ಣಿನ 'ಮರ್ಯಾದೆ'ಯ ಪ್ರಶ್ನೆಯನ್ನು ವಿಶ್ಲೇಷಿಸಿರುವುದು ಸೊಗಸಾಗಿದ್ದರೂ, ಅತಿವಿವರದಿಂದಾಗಿ ವ್ಯಂಗ್ಯದ ಪರಿಣಾಮ ಮಂಕಾಗಿಬಿಟ್ಟಿದೆ. ಇದೇ ದೋಷ 'ನನ್ನೂರ ಇತಿಹಾಸ, ಪಾಸ್‌ಪೋರ್ಟ್'ಗಳಲ್ಲೂ ಹಣಕಿದೆ. ಧನ್ಯ ಕರ್ನಾಟಕ ಮಾತೆ. ಶರಣುಶರಣಾರ್ಥಿ'ಗಳ ಅತಿವಾಚ್ಯತೆ ಕವನಗಳನ್ನು ಖಾರವಾದ ಭಾಷಣಕ್ಕಿಂತ ಮೇಲಿನ ಮಟ್ಟಕ್ಕೆ ಕೊಂಡೊಯ್ಯದೆ ಹೋಗಿದೆ. 'ಆಲದಮರ'ನಮ್ಮ ಗೊಡ್ಡುಪರಂಪರೆಗೆ ಕ್ಲೀಷೆಯೆನಿಸುವ ಪ್ರತಿಮೆಯಾದರೂ, ಅದನ್ನು ಕೀಳಲು ತಾನು ಮಾಡಬೇಕಾಗಿರುವ ಪ್ರಯತ್ನದ ಅಗಾಧತೆ ಏನೆಂಬುದನ್ನು ಪರಾಂಬರಿಸುತ್ತ ಹೋಗಿರುವಲ್ಲಿ ಪರಿಸರದ ಕುರಿತು ಪ್ರಜ್ಞಾವಂತನೊಬ್ಬನ ಪ್ರತಿಕ್ರಿಯೆಯನ್ನು ದಾಖಲಿಸಲು ಬರುತ್ತದೆ. 'ನಿರುದ್ಯೋಗಿಗಳ ಮೇಲೊಂದು ಹಾಡು' ಇದರಲ್ಲಿ ಕವಿಯ ವಿಡಂಬನಾ ಸಾಮರ್ಥ್ಯ ಎದ್ದು ನಿಲ್ಲುತ್ತದೆ. 'ಮಲ್ಲಿಗೆ,ಕೋಣ ಮತ್ತು ನಾನು' ತನ್ನ ಅಚ್ಚುಕಟ್ಟುತನದಿಂದ ವಿಶಿಷ್ಟವಾಗಿದೆ, ಹನಿಗಳು ಅತ್ಯಂತ ಮಾಮೂಲಾದ ರಚನೆಗಳು. ಒಟ್ಟಿನಲ್ಲಿ ಪರಿಶೀಲಿಸಿದಾಗ, ಬೆಳಕೂಡರ ಕವನಗಳು ಬದುಕಿಗೆ ಬದ್ಧವಾದ, ಪ್ರಾಮಾಣಿಕವೂ ಮಾನವೀಯವೂ ಆದ ಒನ್ನೆಲೆಯುಳ್ಳವಾಗಿರುವುದು ಸ್ವಾಗತಾರ್ಹವಾಗಿದ್ದರೂ,ಅವರ ಕಾವ್ಯಕ್ರಿಯೆ ಇಷ್ಟರಲ್ಲೇ ಲಂಗರು ಹಾಕದೆ, ಅಪ್ಪಟಕಲೆಯ ಅಗ್ನಿದಿವ್ಯಕ್ಕೆ ತನ್ನನ್ನು ತಾನು ಒಡ್ಡಿಕೊಳ್ಳಬೇಕಾಗಿದೆ; ಹಾಗಾದಾಗಮಾತ್ರ ಇವರ ಬದ್ಧತೆಗೆ ಅರ್ಥ ದಕ್ಕೀತು.

●

ಎರಡು ಕವನಗಳು

ಶಿರ್ವ ಮುಜಾಫ್ಫರ್ ಎಚ್. ಅಸ್ಸಾದಿ

೧ ನಗುವಿನ ಪದ್ಯ

ನಗುವಿನ ಪದ್ಯ ಅಂದೆ:
ಕೇಳಿಲ್ಲಾ ನಿಮಗೆಲ್ಲಾ. ಹೀಗೆ
ಬೆಪ್ಪಾಗಿ ಕೂತಿದ್ದೀರಾ ಸತ್ತ ಹೆಣದಂತೆ
ಬಿಸಿಲ ಜಳಕ್ಕೆ ಆರ್ದ್ರತೆ ತಳೆದ ಭೂಮಿ
ಬಂಜರು. ಮಳೆಗಾಲಕ್ಕೆ ತುದಿಗಾಲಲ್ಲಿ ನಿಂತಂತೆ—

ನೀವೂ ನಿಮ್ಮ ಮುಖ
ನಿಸ್ತೇಜವಾಗಿ ಯಾಕೋ ಹೆದರಿದಂತೆ
ಯಾಕೆ? ಇಲ್ಲಿಯಾರೂ ಬಂಧಿಸಿಡುವುದಿಲ್ಲ
ನಿಮ್ಮ ಮನಸಾ ನಗುಗಳಿಗೆ.

ಯಾಕೆಂದರೆ: ಬಾಗ್ದಾದಿನ ರಾಜ ರಶೀದ್ ಸತ್ತಿದ್ದಾನೆ
ಅಂದರೆ ವರ್ಷಗಳು ಕಳೆದೂ ಕಳೆದೂ ಕತೆಗಳು
ಹಳತಾಗಿವೆ. ಒಮ್ಮೆ ನಕ್ಕು ಬಿಟ್ಟವರ
ನಗು ಕ್ರಯಕ್ಕೆ ಪಡಕೊಂಡವನು
ಮತ್ತೆ ಬರುವುದಿಲ್ಲ. ಎಲ್ಲರೂ ಸತ್ತಿದ್ದಾರೆ
ನೀವು ಅವರು ಇವರು ನಾಳೆ–

ಸಾಯುವವರು. ಈಗಲೇ ನಕ್ಕುಬಿಡಿ.
ಮತ್ತೆ ನಿಮ್ಮ ನಗುವಿಗೆ
ನೀವೂ ಅಥವಾ ಇನ್ನಾರೂ ಠಾಣೆಗಳಲ್ಲಿ ಬಂದಿಯಾಗುವುದಿಲ್ಲ
ಬಾಯಿಗಳಿಗೆ ದಬ್ಬಣ ಚುಚ್ಚುವುದಿಲ್ಲ
ಚಪಾತಿ ವಿರೋಪ್ಲೇನುಗಳನ್ನು ಏರಿಸುವುದಿಲ್ಲ
ಅದಕ್ಕೆ ನಿಲ್ಲಿಸಿಬಿಡಿ: ಮಳೆತಾರದ ಕಪ್ಪು ಮೋಡಗಳನ್ನು
ಬಿಳಿ ಮೇಘಗಳನ್ನು: ಕತ್ತಲಲ್ಲಿ ನಕ್ಷತ್ರ ಮಿನುಗುವುದನ್ನು
ಕಂಡರೆ ಲೆಕ್ಕ ಹಾಕುವುದನ್ನು.
ಪ್ರೇತ ಕಳೆಯಂತೆ ನಿಂತ ಮರಗಳು
ನಗುವುದಿಲ್ಲವೇ ವಸಂತ ಕಾಲದಲ್ಲಿ ?
ಸತ್ತ ಒಣಬೀಜಗಳು ಮಳೆಗಾಲದಲ್ಲಿ
ಹುಟ್ಟುವುದಿಲ್ಲವೆ ?
ಮಣ್ಣಿನಲ್ಲಿ ಗಿಡಗಳಾಗುವುದಿಲ್ಲವೆ ?

ನೀವೇಕೆ ನಗುವುದಿಲ್ಲ. ? ಯಾತು ಕಾಲಗಳಿಗಾಗಿ ಕಾದಿದ್ದೀರಾ ?
ಬೇಡ, ಇದು ನಗುವಿನ ಪದ್ಯ.
ಒಮ್ಮೆ ನಕ್ಕು ಬಿಡಿ ಅಂದೆ.

೨. ಸಿಮೆಂಟು ಕವನ

ಉಬ್ಬಿ ತಬ್ಬಿ ಸಿಕ್ಕ ಸಿಕ್ಕವರನ್ನೆಲ್ಲಾ ಅಪ್ಪಿ
ಮೈ ಕೈಗಳ ತಡಕಾಡುತ್ತಾ ಹೊರಟವರು
ನಡೆಯುತ್ತಲೇ ಇದ್ದರು;
ದಾರಿಯಲ್ಲಿ ನಿಂತು ಒಮ್ಮೆ ನಿಂತೇ
ದಿಗಂತದತ್ತಾ ಮೊರೆಯಿಟ್ಟು ಅಂದರು;
ಸಿಮೆಂಟೆಂದರೇನು?
ಅದು ಯಾವ ರೂಪದಲ್ಲಿರುತ್ತದೆ?

ನೂರಾರು ಬಾಬಾಗಳು ನೂರಾರು ಪವಾಡಗಳು
ನೂರಾರು ಕರಾಮತ್ತುಗಳು ಇಲ್ಲಿ ನಡೆಯುತ್ತವೆ.
ವಾಚು ಉಂಗುರ ಬೂದಿ ಚೆಲ್ಲುತ್ತಾ ತಮ್ಮನ್ನೆಲ್ಲಾ ಬೀದಿ
ತುಂಬೆಲ್ಲಾ ಹರಡಿ ಮಾರಾಟಕ್ಕಿಡುತ್ತಾರೆ.
ತೆರೆದ ಅಂಗಡಿಗಳಲ್ಲಿ ಅಷ್ಟ ಪರದೆ
ರೇಶ್ಮೆನೂ ಅಲ್ಲ ಖಾದಿನೂ ಅಲ್ಲ
ಒಟ್ಟಾರೆ ಅಲ್ಲ ಅಲ್ಲ ಏನೂ ಅಲ್ಲ
ಎಂದು ಬಂದವರಿಗೆಲ್ಲಾ ಒಂದಿಷ್ಟು ಸಿಹಿ. ಸಿಹಿ
ಮಿಠಾಯಿ ಹಚ್ಚಿ
ಏರಿಸುತ್ತಾರೆ. ಬೆಲೆಗಳನ್ನು.
ಬೆಲೆ ಏರುತ್ತಾ ಏರುತ್ತಾ ಮತ್ತೂ ಏರುತ್ತಾ
ಗಾಳಿಯಲ್ಲಿ ಬೆಲೂನು ಟಪ್ಪೆಂದು ಅದೃಶ್ಯವಾದಂತೆ
ವಸ್ತುಗಳು ಟಪ್ಪಾದಾಗ ಸಾಪೆಲ್ಲ ಗುಪ್ಪೆಗಳು: ನಮ್ಮನ್ನೆಲ್ಲಾ ಚಚ್ಚಿಕೊಂಡು
ತವಕಿ ತವಕಿದರೂಅರ್ಥವಾಗುವುದೇ ಇಲ್ಲ
ದಿನನಿತ್ಯದ ಈ ಪವಾಡಗಳು.
ಅಂಗಡಿಗಳು ತೆರೆದಾಗ 'ಸ್ಟಾಕಿಲ್ಲ'–ಪದ
ಓದಿ
ತ್ರಸಿದು ಮೇಲೆ ಕೈಯಿಕ್ಕಿ ಗೋಗರೆಯುತ್ತೇವೆ: ಜೀಲವಿಡೀ ಹಣತುಂಬಿ.
ಅಯ್ಯಾ ದಮ್ಮಯ್ಯಾ ನೀಡಿರಯ್ಯ ಒಂದಿಷ್ಟು
ಅಂಗೈ ಸಿಮೆಂಟು.

ಹಾಂ! ಶಬ್ದ ಎಲ್ಲೋ ಕೇಳಿದ ಭಾಸ
ಎಣ್ಣೆ ತೂರದ ಈ ಕಿವಿಗಳಿಗೆ.
ಶೂನ್ಯದಿಂದ ಮಹಾನ್ ಮಹಾನ್ ಸೃಷ್ಟಿಕರ್ತರು
ಸೃಷ್ಟಿಸುವುದೇ ಇಲ್ಲ ಈ ಇಂತಹ ವಸ್ತು.
ಅಂದಮೇಲೆ ಬಹಳ ತುಂಟ್ಟಿಯೇ ಹೌದು !
ಅಥವಾ ವಿಚಿತ್ರ ವಸ್ತುವೇ ಹೌದು !

ಮತ್ತೆ ಅದೇ ಅಂಗಡಿಗಳಲ್ಲಿ ಕೂತು
ಕಾಲ ಮೇಲೆ ಕಾಲ್ಮಡಚಿ ಬೀಡಿಯೋ ಸಿಗರೇಟೋ
ಹಚ್ಚಿ
ಮೌಲ್ಯಗಳ ಕುರಿತು ಇಂದಿರಾಯಣ
ಹಣದುಬ್ಬರ ರಾಷ್ಟ್ರಪತಿ ನಕ್ಸಲ್‌ಬಾರಿ
ಮಳೆ ಬೆಳೆ ನೆರೆಗಳ ಚರ್ಚಿಸಿ
ಬೆಲೆಗಳನ್ನು ಮತ್ತೂ ಏರಿಸಿದಂತೆಯೂ
ಗಪ್ಪಾಗಿ ಕೊರುತ್ತಿದ್ದೇವೆ ಎಂದೆಲ್ಲಾ ಗಂಟೆಗಟ್ಟಲೆ ಭಾಷಣ
ಹಚ್ಚಿದರೂ ಈ ವಿಚಿತ್ರಕ್ರಿಯೆಯು
ತಲೆ ಬುಡ ಸಿಗುವುದಿಲ್ಲ; ಹಂಡುಕಾಟಕ್ಕೆ
ಕೊಡೆ ಹಿಡಿದು ಕಾಲಿಕ್ಕುತ್ತೇವೆ.

ಈ ಮನೆ ಆಸ್ತಿ ಬಂಗಾರ ಬೆಳ್ಳಿ
ಊರು ಹಳ್ಳಿ ಕೊನೆಗೆ ಈ ಅಖಂಡ ಭಾರತ
ಮಾತೆಯನ್ನು ಮಾರಾಟಕ್ಕಿಟ್ಟಿದ್ದೇನೆ;
ನೀವಾರೂ ಕೊಂಡು ಕೊಳ್ಳಬಹುದು.
ಆದರೆ, ಒಂದಿಷ್ಟು ಹುಡುಕಿ
ಅಥವಾ ಸೂಕ್ಷ್ಮವಾಗಿ ಕಣ್ಣಲ್ಲಿ ಕಣ್ಣಿಟ್ಟು
ವೀಕ್ಷಿಸಿ: ಯರಾದರೂ
ಹುಡುಕಿ ನೀಡಬಲ್ಲರೇ ಈ ಕಳೆದು ಹೋದ ವಸ್ತು,
ಅದು ವಸ್ತುವೇ ಸೂಕ್ಷ್ಮಕಣವೇ
ಎಂದೆಲ್ಲಾ ಯೋಚಿಸಿ ಆಮೇಲೆ
ನೀವೇ ಅನ್ನಿ; ವಸ್ತು ಎಂದರೇನು?
ಕಣವೆಂದರೇನು?

ಜನಾಂಗೀಯ ಕಿರುಪರಿಚಯಗಳು

ಮಹಿಮ

೧ **ಎಲ್ಲಮ್ಮನ ಜೋಗಿಗಳು :** ನಿಂಗಣ್ಣ ಸಣ್ಣಕ್ಕಿ ೧೯೮೧

೨ **ಮೈಲಾರನ ಗೊರವರು :** ಜೀ.ಶಂ.ಪರಮಶಿವಯ್ಯ ೧೯೮೧

೩ **ಬಡಗರು :** ಹಿ.ಶಿ. ರಾಮಚಂದ್ರೇಗೌಡ ೧೯೮೨

೪ **ಮೇಲುಶಿಕಾರಿಗಳು :** ಬೆನಕನಹಳ್ಳಿ ಜಿ.ನಾಯಕ ೧೯೮೨

೫ **ಸಿದ್ಧಿ ಜನರು :** ಎಲ್. ಆರ್, ಹೆಗಡೆ ೧೯೮೨

೬ **ಬಗ್ಗರು :** ಬಸವರಾಜ ನೆಲ್ಲಿಸರ ೧೯೮೨

೭ **ಕೊಂಡಮಾಮ :** ಶ್ರೀಕಂಠ ಕೂಡಿಗೆ ೧೯೮೨

(ಪ್ರಕಾಶಕರು ಐ. ಬಿ. ಹೆಚ್. ಪ್ರಕಾಶನ, ಬೆಂಗಳೂರು-೯)

ಐ.ಬಿ.ಹೆಚ್. ಪ್ರಕಾಶನದ **ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ** ಮಾಲಿಕೆಯಲ್ಲಿ ಪ್ರಕಟವಾದ ವಿವಿಧ ಜಾತಿ ಹಾಗೂ ಬುಡಕಟ್ಟುಗಳಿಗೆ ಸೇರಿದ ಜನಗಳನ್ನು ಕುರಿತ ಸ್ಥೂಲ ಪರಿಚಯಾತ್ಮಕ ಪುಸ್ತಕಗಳು ೧/೪ಕ್ರೌನ್ ಆಕಾರದಲ್ಲಿದ್ದು ೪೮ ಪುಟಗಳ ಗಾತ್ರ ಹೊಂದಿವೆ. ಎಲ್ಲ ಪುಸ್ತಕಗಳಲ್ಲಿಯೂ ಆಯಾ ಜನಾಂಗಗಳ ವಿಶಿಷ್ಟತೆಯನ್ನು ಪರಿಚಯ ಮಾಡಿಕೊಡುವ ಪ್ರಯತ್ನ ಕಂಡು ಬರುತ್ತದೆ.

ಈಗಾಗಲೇ ಮೈಸೂರು ವಿಶ್ವವಿದ್ಯಾಲಯ ೧೯೩೦ರಲ್ಲಿ ಹೆಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ.ಎ.ಅಯ್ಯರ್‌ರವರು ಬರೆದ The Mysore Tribes and castes ಎನ್ನುವ ಪುಸ್ತಕವನ್ನು ಪ್ರಕಟಿಸಿದೆ. ಈ ಪುಸ್ತಕದಲ್ಲಿ ಕರ್ನಾಟಕದ ವಿವಿಧ ಬುಡಕಟ್ಟು ಹಾಗೂ ಜಾತಿಯ ಜನಾಂಗಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ದೀರ್ಘವಾದ ವಿವರಣೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ ೧೯೦೯ರಲ್ಲಿ ಎಡ್ಗರ್ ಥರ್ಸ್ಟನ್ ಎನ್ನುವವರು ಬರೆದ Caste and Tribes of Southern India ಎನ್ನುವ

ಗ್ರಂಥವಲ್ಲಿ ಸಾಕಷ್ಟು ಮಾಹಿತಿಗಳು ಪ್ರಕಟವಾಗಿವೆ. ಮೇಲಿನ ಎರಡು ಪುಸ್ತಕಗಳನ್ನು ಅಲ್ಪಸ್ವಲ್ಪ ಪರಿಷ್ಕರಣದೊಂದಿಗೆ ಕನ್ನಡದಲ್ಲಿ ಪ್ರಕಟಿಸಿದರೆ ಅವು ಕನ್ನಡ ಭಾಷೆಯ ಅಮೂಲ್ಯ ಗ್ರಂಥಗಳಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಕನ್ನಡನಾಡಿನ ಜನಜೀವನದ ಅವಿಭಾಜ್ಯ ಅಂಗಗಳಾದ ಸಿದ್ಧಿ, ಬಡಗ, ಗೊರವ ಮುಂತಾದ ಜನಗಳ ಬಗ್ಗೆ ಕನ್ನಡಿಗರು ಅರಿಯುವುದು ಬಹುಮುಖ್ಯವಾದುದು. ಇದನ್ನರಿತೇ ಐ.ಬಿ.ಹಚ್.ಪ್ರಕಾಶನದವರು ಎಳೆಯ ಮಕ್ಕಳಿಗೂ ಅರ್ಥವಾಗುವಂತೆ ದಪ್ಪನೆಯ ಅಕ್ಷರಗಳೊಂದಿಗೆ ಸಾಕಷ್ಟು ಚಿತ್ರಗಳ ಸಮೇತ ಪ್ರಕಟಿಸಿರುವುದು ಅಭಿನಂದನೀಯ ವಿಚಾರ.

ಬಡಗ ರ ಬಗ್ಗೆ ಹಿ. ಶಿ. ರಾಮಚಂದ್ರೇಗೌಡರು ಸ್ಥೂಲಪರಿಚಯ ಮಾಡುತ್ತಾ ಬಡಗ ಎನ್ನುವ ಪದ ದ್ರಾವಿಡಭಾಷೆಯಲ್ಲಿ ದಿಕ್ಕನ್ನು ಸೂಚಿಸುತ್ತದೆ ಎಂದಿದ್ದಾರೆ. ನೀಲಿಗಿರಿ ಬೆಟ್ಟದ ಆಸುಪಾಸಿನಲ್ಲಿ ವಾಸಿಸುವ ಅನೇಕ ಬುಡಕಟ್ಟು ಜನಾಂಗಗಳಂತೆ ಬಡಗರೂ ಮೂಲತಃ ಕರ್ನಾಟಕದವರೇ ಆಗಿದ್ದು ನಂತರ ಅಲ್ಲಿಯ ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಪ್ರಭಾವದಿಂದ ಭಿನ್ನರಾಗಿದ್ದಾರೆ ಎನ್ನುವಮಾತನ್ನು ಮಾನವಶಾಸ್ತ್ರಜ್ಞರು ಚರ್ಚಿಸಬೇಕಾಗಿದೆ. ಬಡಗ ಭಾಷೆ ಕನ್ನಡದ ಉಪಭಾಷೆಯುನ್ನುವುದಕ್ಕೆ ನಾಲ್ಕಾರು ಉದಾಹರಣೆ ಕೊಡುತ್ತಾರೆ. ಆದರೆ ಇಂತಹ ಪುಟ್ಟ ಪುಸ್ತಕಗಳ ಪರಿಧಿಯಲ್ಲಿ ಒಂದು ಜನಾಂಗದ ಅವಿಭಾಜ್ಯ ಅಂಗಗಳಾದ ಭಾಷೆ, ಸಂಸ್ಕೃತಿ ಮುಂತಾದ ಅಂಶಗಳನ್ನು ದೀರ್ಘವಾಗಿ ಚರ್ಚಿಸಲು ಅವಕಾಶವಿರುವುದಿಲ್ಲ. ಬಡಗರ ಹುಟ್ಟು, ಮದುವೆ, ಉಡಿಗೆತೊಡಿಗೆ,ನಂಬಿಕೆ,ಆಚರಣೆ, ಕಲೆ ಸಾಹಿತ್ಯ,ಸಾವುಗಳನ್ನು ಕುರಿತು ಸ್ಥೂಲವಾಗಿ ಚಿತ್ರಿಸಲು ಪ್ರಯತ್ನಿಸಿದ್ದಾರೆ.

ಉತ್ತರ ಕನ್ನಡದ **ಸಿದ್ಧಿ ಜನರು** ಆಫ್ರಿಕದ ನೀಗ್ರೋ ಬುಡಕಟ್ಟು ಜನಾಂಗಕ್ಕೆ ಸೇರಿದವರು. ಇವರು ಕರ್ನಾಟಕದಲ್ಲಲ್ಲದೇ ಗುಜರಾತ್, ಅಹಮದ್‌ನಗರ, ಗೋವಾ ದಲ್ಲಿಯೂ ವಾಸಿಸುತ್ತಾರೆ. ಆದರೆ ಕರ್ನಾಟಕದಂತೆ ಇವರನ್ನು ಬೇರೆರಾಜ್ಯಗಳಲ್ಲಿಯೂ ಸಿದ್ಧಿ ಎಂದು ಕರೆಯುತ್ತಾರೋ ಹೇಗೆ ಎಂಬುವದರ ಬಗ್ಗೆ ಎಲ್.ಆರ್. ಹೆಗಡೆಯುವರು ವಿವರಿಸುವುದಿಲ್ಲ. ಇವಕ್ಕೆ ಅವರ ಸಂಗ್ರಹದ ಕೊರತೆ ಇರಬಹುದು. ಉತ್ತರಕನ್ನಡದ ಸೂಪಾ, ಮುಂಡಗೋಡು, ಯಲ್ಲಾಪುರ ತಾಲ್ಲೂಕುಗಳಲ್ಲಿ ವಾಸಿಸುವ ಇವರ ಭೌತಿಕಲಕ್ಷಣ,ಧರ್ಮ,ನಂಬಿಕೆ,ಆಚರಣೆ, ಉದ್ಯೋಗ, ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ. ಸಿದ್ಧಿಗಳಲ್ಲಿ ಮುಸ್ಲಿಂ ಸಿದ್ಧಿಗಳು, ಕ್ರಿಶ್ಚಿಯನ್ ಸಿದ್ಧಿಗಳಿದ್ದಾರೆಂದು ಮಾಹಿತಿ ನೀಡುವ ಹೆಗಡೆಯುವರು ಅವರ ಭಾಷೆಯುನ್ನು ಕುರಿತು ವಿವರಣೆ ನೀಡ ದಿದ್ದುದು ಒಂದು ಕೊರತೆಯಾಗಿದೆ.

ಮೋಲುಷಿಕಾರಿಗಳು ಬಗ್ಗೆ ಬರೆಯುವ ಜೇನಕನಪಳ್ಳಿ ಜಿ. ನಾಯಕ್ ಅವರು ಒಂದು ಕಡೆ ಇವರು ಹಕ್ಕಿ–ಪಿಕ್ಕಿ ಜನಾಂಗಕ್ಕಿಂತ ಭಿನ್ನರಾಗಿದ್ದಾರೆ ಎನ್ನುತ್ತಾರೆ. ಆದರೆ ಅವರ ಭಿನ್ನತೆಯ ಬಗ್ಗೆ ಏನನ್ನೂ ಬರೆದಿಲ್ಲ. ಹಕ್ಕಿ–ಪಿಕ್ಕಿಗಳೂ ಮೋಲುಷಿಕಾರಿಗಳೂ ಒಂದೇ ಎಂದು ಕೆಲವರು ಅಭಿಪ್ರಾಯಪಡುವುದರಿಂದ ವಿವರಣೆ ಅಗತ್ಯ. ಇವರಭಾಷೆಲಂಬಾಣಿ ಭಾಷೆಗೆ ಸಮೀಪವಾಗಿದೆ ಎನ್ನುವ ನಾಯಕ್ ಅವರ ಹೇಳಿಕೆ ಅವರ ಬಗ್ಗೆ ಭಾಷಾ ವಿಜ್ಞಾನಿಗಳು ಹೆಚ್ಚು ಕುತೂಹಲ ಕೆರಳಿಸುವಂತೆ ಮಾಡುತ್ತದೆ. ಬಸವರಾಜ ನೆಲ್ಲಿಸರ ಬರೆದಿರುವ **'ಬಗ್ಗರು'** ಮಲೆನಾಡಿನ ಜನಾಂಗವೊಂದರ ಸ್ಥೂಲ ಚಿತ್ರಣ. ಅನೇಕ ಸಲ ಈ ರೀತಿಯ ಪುಸ್ತಕಗಳಲ್ಲಿ ಖಚಿತ ಅಭಿಪ್ರಾಯಗಳ ಕೊರತೆ ಕಂಡುಬರುತ್ತದೆ. ಅಲ್ಲದೇ ಮೇಲಿನ ಎಲ್ಲ ಪುಸ್ತಕಗಳು ನಿರ್ದಿಷ್ಟ ಜನಾಂಗದನ್ನು ವಿವರಿಸುವಾಗ್ಯೂ ನಿರ್ದಿಷ್ಟ ಚೌಕಟ್ಟನ್ನು ಹಾಕಿಕೊಳ್ಳದೆ ತಮಗೆ ತೋಚಿದಂತೆ ವಿವರಿಸಿರುವುದು ಒಂದು ಮಾಲಿಕೆಯಲ್ಲಿ ಪ್ರಕಟವಾಗುವ ಪುಸ್ತಕಗಳ ನಿರೂಪಣಾ ವ್ಯತ್ಯಯವನ್ನು ತಿಳಿಸುತ್ತದೆ.

ನಿಂಗಣ್ಣ ಸಣ್ಣಕ್ಕಿಯವರು ಬರೆದ **ಎಲ್ಲಮ್ಮನ ಜೋಗಿಗಳು,** ಶ್ರೀಕಂಠ ಕೂಡಿಗೆ ಯವರು ಬರೆದ **ಕೊಂಡಮಾಮ** ಹಾಗೂ ಜೀ. ಶಂ. ಪರಮಶಿವಯ್ಯನವರು ಬರೆದ **ಮೈಲಾರನ ಗೊರವರು** ಈ ಮಾಲಿಕೆಯಲ್ಲಿ ಪ್ರಕಟವಾದ ಪುಸ್ತಕಗಳು. ಎಲ್ಲಮ್ಮನ ಜೋಗಿಗಳು ಒಂದು ಬುಡಕಟ್ಟು ಅಥವ ಜಾತಿ ಎನ್ನುವುದಕ್ಕಿಂತ ಒಂದು ಧಾರ್ಮಿಕತೆಗೆ ಒಳಪಟ್ಟ ಜನಗಳ ಗುಂಪು ಎನ್ನಬಹುದು. ಮಹಾರಾಷ್ಟ್ರದಲ್ಲಿಯೂ ಎಲ್ಲಮ್ಮನಿಗೆ ನಡೆದುಕೊಳ್ಳುವ ಅನೇಕ ಜನರಿದ್ದಾರೆ. ಇವರ ಸ್ಥೂಲ ವಿವರಣೆ, ಸಾಹಿತ್ಯಿಕ ವಿವರ ಚನ್ನಾಗಿ ನಿರೂಪಿತವಾಗಿದೆ. ಅಂತೆಯೇ ಜೀ. ಶಂ. ಪ. ರವರು ಬರೆದ **ಮೈಲಾರನ ಗೊರವರು** ಚಿಕ್ಕ ಹಾಗೂ ಚೊಕ್ಕ ನಿರೂಪಣೆಯನ್ನೊಳಗೊಂಡ ಪುಸ್ತಕ ಖಚಿತ ನಿರೂಪಣೆ, ಸರಳ ಸುಂದರ ಭಾಷೆಯಿಂದ ಓದುಗರನ್ನು ಆಕರ್ಷಿಸುವ ಈ ಪುಸ್ತಕದಲ್ಲಿ ಗೊರವರ ಮೂಲ, ಹುಟ್ಟು. ನಂಬಿಕೆ, ಸಂಪ್ರದಾಯ, ಆಕರ್ಷಣೆ. ಸಾಹಿತ್ಯದ ಬಗ್ಗೆ ಮಹತ್ತರ ಅಂಶಗಳನ್ನು ದಾಖಲಿಸಿದ್ದಾರೆ. ಶ್ರೀಕಂಠ ಕೂಡಿಗೆ **ಕೊಂಡಮಾಮ** ಎನ್ನುವ ಅಲೆಮಾರಿ ಜನಾಂಗದ ಬಗ್ಗೆ ಆಸಕ್ತಿ ಹುಟ್ಟುವಂತೆ ಬರೆಯುವಲ್ಲಿ ಯಶಸ್ವಿಯಾಗಿದ್ದಾರೆ.

ನಾಲ್ಕು ಚಂಪಾ ನಾಟಕಗಳು

ಡಿ. ರಘುನಾಥರಾವ್

೧. ಕುಂಟಾ ಕುಂಟಾಕುರವತ್ತಿ
೨. ಗುರ್ತಿನವರು
೩. ಟಿಂಗರ ಬುಡ್ಡಣ್ಣ
೪. ನಳಕವಿಯ ಮಸ್ತಕಾಭಿಷೇಕ

ಮೇಲಿನ ಮೊದಲ ಮೂರು ನಾಟಕಗಳು, ಈ ಹಿಂದೆ ಅಕ್ಷರ ಪ್ರಕಾಶನದವರು ಪ್ರಕಟಿಸಿದ 'ಮೂರು ನಾಟಕಗಳು'—ಎಂಬ ಪುಸ್ತಕದಲ್ಲಿ ಈಗಾಗಲೇ ಪ್ರಕಟವಾಗಿವೆ. ಈಗ, ಅವುಗಳನ್ನು ಧಾರವಾಡದ ಸಮಾಜ ಪುಸ್ತಕಾಲಯದವರು ಬೇರೆ ಬೇರೆಯಾಗಿ ಪ್ರಕಟಿಸಿದ್ದಾರೆ.

'ನಳಕವಿಯ ಮಸ್ತಕಾಭಿಷೇಕ' ಧರ್ಮಸ್ಥಳದಲ್ಲಿ ನಡೆದ ಸಾಹಿತ್ಯ-ಸಮ್ಮೇಳನದ ಸಂದರ್ಭದಲ್ಲಿ ಬರೆದ ಒಂದು ಅಣಕ ನಾಟಕ. ಹರಿತವಾದ ಗೇಲಿ, ವಿಡಂಬನೆ, ನಾಟಕೀಯತೆ, ಕಾವ್ಯದ ಸತ್ವ ಮತ್ತು ಚುರುಕಾದ ಶಕ್ತಿಯುತವಾದ ಸಂಭಾಷಣೆ— ಇವೇ ಮುಂತಾದುವು ಅವರ ಹಿಂದಿನ ಅಸಂಗತ ನಾಟಕಗಳಲ್ಲೂ ಈಗಿನ ಅಣಕ ನಾಟಕಗಳಲ್ಲೂ ಕಾಣಿಸಿಕೊಳುವ ಸಾಮಾನ್ಯ ಅಂಶಗಳಾಗಿವೆ. ಅವರ ನಾಟಕಗಳ ಸಂಭಾಷಣೆಗಳು 'ಕಾವ್ಯಾತ್ಮಕ'ವಾಗಿದ್ದರೂ ಧಾರವಾಡದ ಮಾತಿನ ಧಾಟಿ-ಲಯ ವನ್ನು ಕಳೆದುಕೊಳ್ಳುವುದಿಲ್ಲ. ಗೇಲಿಗಾಗಿ, ಧಾರವಾಡದ ಭಾಷೆಯನ್ನು ಚಂಪಾ ಹಾಗೆ ಬೇರೆ ಯಾರೂ ಬಳಸಿಕೊಂಡಿಲ್ಲ. ಈ ದೃಷ್ಟಿಯಿಂದ, ಅವರ ಸಾಧನೆ ಅಸಾಧಾರಣ ವಾಗಿದೆ.

ಚಂದ್ರಶೇಖರ ಪಾಟೀಲರ ಹೆಚ್ಚಿನ ನಾಟಕಗಳು ರಂಗಭೂಮಿಯ ಮೇಲೆ ಯಶಸ್ವಿ ಯಾಗಿರುವುದನ್ನು ನಾವು ಗಮನಿಸಲೇ ಬೇಕಾಗುತ್ತದೆ. ಒಂದು ಕೇಂದ್ರದ ಸುತ್ತಲೂ ಲವಲವಿಕೆಯಿಂದ, ಅವರ ನಾಟಕಗಳು ಹಿಗ್ಗುತ್ತಾ ಹೋಗುತ್ತವೆ. ಮೇಲಿನ ನಾಲ್ಕು ನಾಟಕಗಳು ಇದೇ ತಂತ್ರವನ್ನು ಬಳಸಿಕೊಂಡಿರುವುದನ್ನೂ ಕಾಣಬಹುದು. 'ಗೋಕರ್ಣದ ಗೌಡಶಾನಿ'ಯೊಂದನ್ನು ಬಿಟ್ಟರೆ, ಅವರ ಉಳಿದ ನಾಟಕಗಳು ಚಿಕ್ಕ ದಾಗಿರುವುದನ್ನು ಇಲ್ಲಿಯೇ ಉಲ್ಲೇಖಿಸ ಬಯಸುತ್ತೇನೆ. ಅವರ ಅಸಂಗತ ನಾಟಕ ಗಳಲ್ಲಿ, ಮೊದಲು ಯಾವ ಸ್ಥಿತಿಯಿರುತ್ತದೋ ಕೊನೆಯಲ್ಲೂ ಅದೇ ಸ್ಥಿತಿ ಉಳಿ ದಿರುತ್ತದೆ. ಏನೂ ನಡೆದ ಹಾಗೆ ಕಾಣುವುದಿಲ್ಲ. ಆದ್ದರಿಂದ ಸಾಂಪ್ರದಾಯಿಕ ನಾಟಕಗಳ ಬೆಳವಣಿಗೆಯನ್ನು ಈ ನಾಟಕಗಳಲ್ಲಿ ನಿರೀಕ್ಷಿಸುವುದು ತಪ್ಪಾಗುತ್ತದೆ. ಆದರೂ, ಬದುಕಿನ ಅಸಂಗತಿಯನ್ನು ಇನ್ನಷ್ಟು ಗಾಢವಾಗಿ, ವ್ಯಾಪಕವಾಗಿ ವಿವೇಚಿಸ ಬಹುದಿತ್ತೆಂದು ಅನ್ನಿಸುತ್ತದೆ.

ಮೇಲೆ ನವೋದಿಸಿದ ಮೊದಲಿನ ಮೂರು ನಾಟಕಗಳ ಮುಖಪುಟದಲ್ಲಿ, 'ಅಸಂಗತ ಏಕಾಂಕ ಪ್ರಹಸನ' ಎಂದು ಅಚ್ಚಿಸಿದ್ದಾರೆ. ಇವುಗಳು ರಂಗದ ಮೇಲೆ ಅನೇಕ ಬಾರಿ ಪ್ರದರ್ಶಿತವಾಗಿ ಜನಪ್ರಿಯವಾಗಿವೆ. ನಮ್ಮ ಜೀವನದಲ್ಲಿರುವ ಮತ್ತು ಭಾಷೆಯಲ್ಲಿರುವ ಅಸಂಗತಿಯನ್ನು ಇವರ ನಾಟಕಗಳು ಚೆನ್ನಾಗಿ ಅಭಿವ್ಯಕ್ತಿಸಿವೆ.

ಮನುಷ್ಯ ತನಗಿಲ್ಲದ್ದನ್ನು, ತನಗೆ ಅಸಾಧ್ಯವಾದುದನ್ನು ಬಯಸುವ; ಅದು ಸಾಧ್ಯವಾಗದೇಹೋದಾಗ ಮಾತಿನಿಂದ ಆ ಕೊರತೆಯನ್ನು ತುಂಬಿಕೊಳ್ಳಲು ಪ್ರಯತ್ನಿಸುವ ಮನುಷ್ಯರ ರೀತಿಯನ್ನು 'ಕುಂಟಾ ಕುಂಟಾ ಕುರವತ್ತಿ' ನಾಟಕ ತಿಳಿಸುತ್ತದೆ. ಕಾಣದ್ದನ್ನು-ಅನುಭವಿಸದ್ದನ್ನು-ಕಂಡಂತೆ-ಅನುಭವಿಸಿದಂತೆ ಹೇಳುವ ಮನುಷ್ಯರ ಸ್ವಭಾವವನ್ನು ನಾಟಕ ಚೆನ್ನಾಗಿ ಗೇಲಿಮಾಡಿದೆ. ನೀಲಿ ಬಣ್ಣದ ಬಗ್ಗೆ ಮಾತನಾಡುವ ಕುರುಡ; ಸಂಗೀತದ ಬಗ್ಗೆ ಕೊಚ್ಚಿಕೊಳ್ಳುವ ಕೆಪ್ಪ; 'ಕುದರೀಹಂಗ ಟಕ್‌ಟಕ್‌ಅಂತ' ಓಡಬಯಸುವಕುಂಟ–ಇವರುಗಳು ತಮ್ಮ ತಮ್ಮ ಮಿತಿ–ದೌರ್ಬಲ್ಯಗಳನ್ನು ಭಾಷೆಯ ಸಹಾಯದಿಂದ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಾರೆ. ಅವರಾಡುವ ಮಾತು ಹೇಗೆ ಹಾಸ್ಯಾಸ್ಪದ ಮತ್ತು ಅಸಂಗತವಾಗಿದೆ ಎಂಬುದನ್ನು ನಾಟಕ ತಿಳಿಸಿದೆ. ನಾಟಕದಲ್ಲಿ ಒಂದು ಪಾತ್ರ ಮತ್ತೊಂದು ಪಾತ್ರವನ್ನು ಗೇಲಿಮಾಡಿದರೂ ತಮ್ಮ ತಮ್ಮ ಮಿತಿಗಳನ್ನು ತಿಳಿದುಕೊಳ್ಳುವುದಿಲ್ಲ. ಅವು-ತಮಗೆ ಮೀರಿದ್ದನ್ನು ತಾವು ಪಡೆದಿದ್ದೇವೆಂಬ ಭ್ರಮೆಯಲ್ಲಿವೆ. ಒಬ್ಬರನ್ನೊಬ್ಬರು ಬಯ್ದುಕೊಳ್ಳುವ ಸಂದರ್ಭಗಳು ತುಂಬ ತಮಾಷೆ ಯಾಗಿವೆ. ಕುರುಡ ಕುಂಟರು ರಂಗದ ತುಂಬ ಓಡಾಡಿ ತಮ್ಮ ಲೆಕ್ಕವನ್ನು ಬರೋಬರಿ ಮಾಡಿಕೊಳ್ಳುವುದು; 'ರೋಡು ಎಲ್ಲಿಗೂ ಹೋಗೋದಿಲ್ಲ–ಇಲ್ಲೆ ಇರ್ತತಿ' ಎಂಬ ತೀರ್ಮಾನಕ್ಕೆ ಬರುವುದು–ಇವೇ ಮುಂತಾದುವು ನಾಟಕವಲ್ಲಿ ಯಾವುದೇ ಬದಲಾವಣೆಗಳಾಗದಿರುವುದನ್ನು ತಿಳಿಸುತ್ತವೆ. ಕೊನೆಯಲ್ಲಿ ಕುಂಟ ಮುಗ್ಗರಿಸಿ ಬೀಳುವುದೂ ಕೂಡ ಅರ್ಥಪೂರ್ಣವಾಗಿದೆ. ನಾವು ಎಲ್ಲಿಗೂ ಹೋಗುವುದಿಲ್ಲ, ಇದ್ದಲ್ಲಿಯೇ ಇರುತ್ತೇವೆಂಬುದನ್ನು ನಾಟಕೀಯವಾಗಿ ನಾಟಕ ಹೇಳಿದೆ. ತಾತ್ವಿಕ ಆಯಾಮಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿದೆ. ಕೆಲವು ಕಡೆ, ಮಾತಿನ ಖುಷಿಗಾಗಿಯೇ ಬೆಳೆಸಿದ್ದಾರೇನೋ ಎನ್ನಿಸುತ್ತದೆ. ಒಟ್ಟಿನಲ್ಲಿ, ತನಗೆ ಮೀರಿದ್ದನ್ನು ಹಂಬಲಿಸುವ ಮಾನವನ ಮನೋಧರ್ಮವನ್ನು ನಾಟಕ ಯಶಸ್ವಿಯಾಗಿ ವಿಡಂಬಿಸಿದೆ.

ಜೀವನದ ಅಸಂಗತಿಯನ್ನು 'ಗುರ್ತಿನವರು' ನಾಟಕ ಹೆಚ್ಚು ಗಂಭೀರವಾಗಿ ಅನ್ವೇಷಿಸಲು ಪ್ರಯತ್ನಿಸಿದೆ. ನಮ್ಮ ಮಾತಿನಲ್ಲಿರುವ ಅಸಂಗತಿಯನ್ನೂ ಈ-ನಾಟಕ ಚೆನ್ನಾಗಿ ಲೇವಡಿ ಮಾಡಿದೆ. ಹಲವು ವರ್ಷ ಒಟ್ಟಿಗೇ ಇದ್ದರೂ, ಈ-ನಾಟಕದಲ್ಲಿ ಬರುವ ಗಂಡ–ಹೆಂಡತಿ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡಿರುವುದಿಲ್ಲ. ಅವರು ಅಪರಿಚಿತರಾಗಿಯೇ ಉಳಿದಿರುತ್ತಾರೆ. ಹಾಗೆಯೇ ಒಂದೊಮ್ಮೆ ಪರಿಚಯವಾಗಿದ್ದ

ಆಗಂತುಕನ ಗುರುತು ಗಂಡನಿಗೆ ಸಿಗುವುದಿಲ್ಲ. ಆದರೆ, ಕೊನೆಯಲ್ಲಿ ಬರುವ ವ್ಯಕ್ತಿ, ಗುರುತಿಲ್ಲದಿದ್ದರೂ ಗಂಡನಿಗೆ ಆತ್ಮೀಯನಾಗಿಬಿಡುತ್ತಾನೆ. 'ಕಣ್ಣಾಗ ಕಣ್ಣಿಟ್ಟು' ನೋಡುವುದಕ್ಕಾಗಿ ಗಂಡ-ಹೆಂಡತಿ ಚಾಳೀಸು ತೆಗೆದು ಒಬ್ಬರು ಮತ್ತೊಬ್ಬರ ಕಡೆಗೆ ಹೋಗುತ್ತಾರೆ. ಅವರು ಸಂಧಿಸುವುದಿಲ್ಲ. ಕಣ್ಣನ್ನು ಕಳೆದುಕೊಂಡಿರುವವರು ಮತ್ತೊಬ್ಬರನ್ನು ನೋಡಲು ಹೇಗೆ ತಾನೆ ಸಾಧ್ಯ? ("......ಇವರ ಕಣ್ಣ ಎಲ್ಲಿ ಅದಾವು ?...ಇವರ ಕಣ್ಣ ಸತ್ತಾವು !" – ಗಂಡನ ಈ ಮಾತನ್ನು ನೋಡಿ.) ಭ್ರಮೆಯಲ್ಲಿ ಮಾತ್ರ ಸಂಧಿಸುತ್ತಾರೆ. ವಾಸ್ತವದಲ್ಲಿ ಒಬ್ಬರದು ಮತ್ತೊಬ್ಬರಿಗೆ ಗುರುತಿರುವುದಿಲ್ಲ. ಕನಸಿನಲ್ಲಿ ಕಂಡದ್ದನ್ನು ವಾಸ್ತವದಲ್ಲಿ ಹುಡುಕಲು ಹೊರಟರೆ ಅದು ನಿರರ್ಥಕವಾಗುತ್ತದೆಂಬುದನ್ನು ನಾಟಕ ತಿಳಿಸಿದೆ, ಒಂದು ಕಡೆ ಗಂಡ ನೋಡಚೀಟಿಯನ್ನು 'ಯಾರ ಕೊಟ್ಟಾರ?' ಎಂದು ಕೇಳಿದರೆ; ಹೆಂಡತಿ 'ಯಾರೋ ಗುರ್ತಿಲ್ಲದವರು' ಎನ್ನುತ್ತಾಳೆ. ಇಂಥಾ ಸಂಗತಿಗಳು ಅವರ ನಡುವೆ ಸಂವಾದ ಪೂರಾ ಕಡಿದು ಹೋಗಿರುವುದನ್ನು ಪರಿಣಾಮಕಾರಿಯಾಗಿ ಮತ್ತು ನಾಟಕೀಯವಾಗಿ ಚಿತ್ರಿಸಿವೆ.

ನಾಟಕದ ಪ್ರಾರಂಭದಲ್ಲಿ ಚಾಳೀಸಿಗಾಗಿ ಪರದಾಡುವ ಗಂಡನನ್ನು ನೋಡುತ್ತೇವೆ. ಆಗಂತುಕನ ಶರಟು, ಗಾಂಧೀಟೋಪಿಯ ಗುರುತನ್ನು ಹಿಡಿಯುತ್ತಾನೆ. ಆದರೆ, ಅವನ ಮುಖದ ಗುರುತು ಕೊನೆಗೂ ಸಿಗುವುದಿಲ್ಲ. ಹೀಗೆ ಗುರ್ತಿಲ್ಲದಿರುವಿಕೆಯ ವಿಷಯ ನಾಟಕದಲ್ಲಿ ಮತ್ತೆ ಮತ್ತೆ ಬರುತ್ತದೆ.

ನಾಟಕ ಒಂದು ಬಿಂದುವಿನಿಂದ ಚಕಚಕನೆ ಬೆಳೆದು ಒಂದು ಕಡೆ ಗಕ್ಕನೆ ನಿಂತು-ಹೊಸ ಅರ್ಥವೊಂದನ್ನು ಫಳಾಯಿಸಿ ಮುಂದೆ ಹೋಗುತ್ತದೆ. (ಈ ದೃಷ್ಟಿಯಿಂದ, ನಾಟಕದ ಪ್ರಾರಂಭದ, ಗಂಡ-ಹೆಂಡತಿಯರ ಸಂಭಾಷಣೆಯನ್ನು ಗಮನಿಸಿ: 'ನಾವು ಅದಽವ್ಯೇನು' ಎಂದು ಕೇಳುವ ಗಂಡನ ಮಾತು ಹೊಸ ಅರ್ಥವನ್ನು ಹೊಳೆಯಿಸಿ ಬಿಡುತ್ತದೆ.) ಇದೇ ರೀತಿಯ ಪ್ರಯತ್ನ 'ಕುಂಟಾ ಕುಂಟಾ ಕುರವತ್ತಿ'ಯಲ್ಲಿ ಅಷ್ಟು ಯಶಸ್ವಿಯಾಗಿಲ್ಲದಿರುವುದನ್ನು ಇಲ್ಲಿ ಪ್ರಸ್ತಾಪಿಸಬಹುದು.

ಜೀವನದಲ್ಲಿಯೂ, ಮಾತಿನಲ್ಲಿಯೂ, ಅಸಂಗತಿಯನ್ನು ಈ ನಾಟಕ ಒಟ್ಟೊಟ್ಟಿಗೆ ಅಭಿವ್ಯಕ್ತಿಸಿದೆ.(ವ್ಯಕ್ತಿ–ಗಂಡನ ಮತ್ತು ಗಂಡ–ಆಗಂತುಕನ ಸಂಭಾಷಣೆಯನ್ನು ನೋಡಿ) ಇಲ್ಲೂ ಲೆಕ್ಕಾಚಾರ ಬರೋಬರಿ ಮಾಡಿಕೊಳ್ಳುವ ವಿಚಾರ ಬರುತ್ತದೆ. ಹಿಂದಿನ ನಾಟಕಗಳ ರೀತಿಯಲ್ಲಿಯೇ ಕೆಲವುಕಡೆ ಮಾತುಗಳು ಬೆಳೆದಿರುವುದನ್ನು ಗುರುತಿಸಬಹುದು. ಆದರೆ, ತಮಾಷೆಯ ಮೂಲಕವೇ ಗಂಭೀರವಾದುದನ್ನು 'ಗುರ್ತಿನವರು' ಸಮರ್ಥವಾಗಿ ಅಭಿವ್ಯಕ್ತಿಸಿರುವುದನ್ನು ಗಮನಿಸಲೇಬೇಕಾಗುತ್ತದೆ.

'ಟಿಂಗರ ಬುಡ್ಡಣ್ಣ' ಅವರ ಅಸಂಗತ ನಾಟಕಗಳಲ್ಲಿಯೇ ತುಂಬ ಜನಪ್ರಿಯವಾದ ನಾಟಕ. ಈ ನಾಟಕದ ಶೈಲಿಯನ್ನು 'ಪಗದ್ಯ' ಎಂದು ಕರೆದಿದ್ದಾರೆ. ಸಂಭಾಷಣೆಗಳು ಲಯಬದ್ಧವಾಗಿದ್ದರೂ ಧಾರವಾಡದ ಮಾತಿನ ಸೊಗಡನ್ನು ಉಳಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಜನಪದ ಕತೆಯೊಂದು–ಈ ನಾಟಕಕ್ಕೆ 'ಆಧಾರ'ವಾಗಿದೆ. ಅನೈಸರ್ಗಿಕವಾದುದು, ಅಸಹಜವಾದುದು ಹುಟ್ಟಿದರೆ ಅಪರ ಬೆಳವಣಿಗೆ, ಅಂತ್ಯ ಅಸಹಜವಾದುದೇ ಆಗಿರುತ್ತದೆಂಬುದನ್ನು ನಾಟಕ ಸುಂದರವಾಗಿ ಹೇಳಿದೆ. ತನ್ನ ಜನನಕ್ಕೆ ಕಾರಣರಾದವರನ್ನೇ ಕಬಳಿಸಿ ಬಿಡುವ 'ಅನೈಸರ್ಗಿಕ' ಶಕ್ತಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. ವಿಜ್ಞಾನ ಹೀಗೆ ಬೆಳೆದು ಸಮಸ್ತ ಮಾನವ ಕುಲವನ್ನೇ ನಾಶ ಮಾಡಿಬಿಡಬಹುದೆನ್ನುವ 'ಭಯಂಕರ' ಸತ್ಯವನ್ನೂ ನಾಟಕ ಸೂಚಿಸುತ್ತದೆ.

ಸಾವಿರ ವರ್ಷದಿಂದ ಮುದುಕಿ ಮುದುಕಿ ಅನ್ನುತ್ತಿದ್ದೇನೆ–ಎಂದು ಮುದುಕ ಹೇಳುವುದು; ನಾಲ್ವತ್ತು ವರ್ಷಗಳ ಹಿಂದೆ ಊರಿದ್ದ ಉಳ್ಳಾಗಡ್ಡೆಯಿಂದ ಮಗ ಹುಟ್ಟಿ ಬರೋದು; ಮಂತ್ರದ ಸಹಾಯದಿಂದ ಹುಡುಗ ಎಲ್ಲರನ್ನೂ 'ಖಲಾಸ್' ಮಾಡುತ್ತ ಬರೋದು—ಇವೇ ಮುಂತಾದವು ಈ ನಾಟಕ ಜಾನಪದ ಪರಿವೇಷವನ್ನು ಉಳಿಸಿಕೊಂಡಿದೆ ಎಂಬುದನ್ನು ತಿಳಿಸುತ್ತವೆ. ಜಾನಪದದ ಅದ್ಭುತ ರಮ್ಯತೆ ಮತ್ತು ಅತಾರ್ಕಿಕತೆ ಈ ನಾಟಕದ ಒಡಲಲ್ಲಿರುವುದನ್ನು ಕಾಣಬಹುದು. ಹುಡುಗನ ಹುಟ್ಟು, ಬೆಳವಣಿಗೆ, ಅಂತ್ಯ ನಾಟಕದ ಆಶಯವನ್ನು ಸ್ಪಷ್ಟಪಡಿಸುತ್ತವೆ. ಆದರೆ, ನಾಟಕದ ಪ್ರತಿಯೊಂದು ವಿವರ ಅದನ್ನು ಕಟ್ಟಲು ಪ್ರಯತ್ನಿಸಿಲ್ಲ. ಜನಪದ ಕತೆಯ ಮೂಲಕ ಒಂದು ವಿಚಾರವನ್ನು ಸೂಚಿಸುತ್ತಿದ್ದಾರೆ. ಇಡೀ ನಾಟಕ ಅದಕ್ಕೆ ಪ್ರತಿಮೆಯಾಗಿ ನಿಲ್ಲುತ್ತದೆ.

ಈ ನಾಟಕದಲ್ಲಿ ಸನ್ನಿವೇಶಗಳನ್ನು ತುಂಬ ಬಿಗಿಯಾಗಿ ಮತ್ತು ಕಲಾತ್ಮಕವಾಗಿ ಬೆಳೆಸಿದ್ದಾರೆ. (ಉಪ್ಪಿಟ್ಟಿನ ಬಯಕೆಯ ವಿಷಯ ಬೆಳೆಯುವ ರೀತಿಯನ್ನು ನೋಡಿ) ಜಾನಪದದ ಸ್ವರೂಪವನ್ನು ಉಳಿಸಿಕೊಂಡೂ ಈ ನಾಟಕ ಆಧುನಿಕ ವಿಚಾರವೊಂದನ್ನು ತುಂಬ ಸುಂದರವಾಗಿ ಮತ್ತು ನಾಟಕೀಯವಾಗಿ ಅಭಿವ್ಯಕ್ತಿಸಿದೆ.

'ನಳಕವಿಯ ಮಸ್ತಕಾಭಿಷೇಕ', ನಮ್ಮ ಸಮಕಾಲೀನ ಸಾಂಸ್ಕೃತಿಕ, ಸಾಹಿತ್ಯಿಕ ಪರಿಸರದ ಹಿನ್ನೆಲೆಯಲ್ಲಿ ಬರೆದ ಅಣಕ ನಾಟಕ. ಪಾಟೀಲರು ತಮ್ಮ ಈಚಿನ ಕೃತಿಗಳಲ್ಲಿ ಜೀವಂತ ವ್ಯಕ್ತಿಗಳ ಧೋರಣೆ, ದೌರ್ಬಲ್ಯ, ವಿಚಾರ ಮುಂತಾದವುಗಳನ್ನು ಗೇಲಿಗೆ ಗುರಿ ಮಾಡುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ, ಲಾಭಕ್ಕಾಗಿ ಮತ್ತೊಬ್ಬರನ್ನು ತಾಜಾ ಮಾಡುವ ಸಮಯ ಸಾಧಕರನ್ನು; ಹೋರಾಟ, ಪ್ರತಿಭಟನೆ ಮುಂತಾದವುಗಳ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಮರೆಮಾಚಲೆತ್ನಿಸುವ ಅಪ್ರಾಮಾಣಿಕರನ್ನು; ಕೆಟ್ಟ ರಾಜಕಾರಣದಿಂದ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲೆತ್ನಿಸುವ

ಕುತಂತ್ರಗಳನ್ನು ಬಯಲಿಗೆಳೆಯುವ ಉದ್ದೇಶ ಈ ನಾಟಕಕ್ಕಿದೆ. ಆದ್ದರಿಂದ, 'ನಮ್ಮ ಸಮಕಾಲೀನ ಸಾಂಸ್ಕೃತಿಕ-ಸಾಹಿತ್ಯಿಕ' ಕ್ಷೇತ್ರದಲ್ಲಿರುವ ಕೆಲವು ಸಂಘ-ಸಂಸ್ಥೆಗಳನ್ನು ಮತ್ತು ವ್ಯಕ್ತಿಗಳನ್ನು ನಾಟಕ ಲೇವಡಿ ಮಾಡಿದೆ. ಒಂದು ರೀತಿಯಲ್ಲಿ, ಅಣಕಗಳು ಆಯಾ ವ್ಯಕ್ತಿಗಳ ಮಿತಿಗಳ ವಿಮರ್ಶೆಯೂ ಆಗಿರುತ್ತದೆ. ಒಂದು ಸಾಹಿತ್ಯ ಮಾರ್ಗದ ಮಿತಿ-ದೌರ್ಬಲ್ಯಗಳನ್ನು ಮತ್ತು ಆ ಮಾರ್ಗದ ಮುಖ್ಯ ಬರಹಗಾರರ ಧೋರಣೆ ಮತ್ತು ವ್ಯಕ್ತಿತ್ವವನ್ನು ಗಂಭೀರವಾಗಿ ಪರಿಶೀಲಿಸಿ ಅವುಗಳ ಟೊಳ್ಳನ್ನೂ ಗೇಲಿಯ ಮೂಲಕ ಪರಿಣಾಮಕಾರಿಯಾಗಿ ತಿಳಿಸಲು ಸಾಧ್ಯವಿದೆ. ಅಡಿಗರ ಕಾವ್ಯದ ಕೆಲವು ಮಾತುಗಳು, ಅವರ ವಿಚಾರ, ಧೋರಣೆ, ಸಿದ್ಧಾಂತಗಳನ್ನು ಈ ನಾಟಕದಲ್ಲಿ ಲೇವಡಿ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿರುವ ರಾಜಕಾರಣವೂ ಈ ನಾಟಕದಲ್ಲಿ ಗೇಲಿಗೆ ಗುರಿಯಾಗಿದೆ.

'ನಳಕವಿ' ತನ್ನ 'ಚೇಲಾ'ಗಳ ಮತ್ತು ಕಾರಭಾರಿ ಜಹಂಪನಾ ಅವರುಗಳ ಸಹಾಯದಿಂದ ಕಸಾಪ ಬೃಹತ್ ಮಠದ ಉತ್ಸವ ಮೂರ್ತಿಯಾಗಿ ಆಯ್ಕೆಯಾಗುವ ಸಂದರ್ಭವನ್ನು ಈ ನಾಟಕ ಚಿತ್ರಿಸುತ್ತದೆ. (ಈ ನಾಟಕವೂ ಚಿಕ್ಕದಾಗಿರುವುದನ್ನು ಇಲ್ಲಿಯೇ ಉಲ್ಲೇಖಿಸಬಯಸುತ್ತೇನೆ.) ಪಾಟೀಲರ ಉಳಿದ ನಾಟಕಗಳ ರಚನೆಯಂತೆಯೇ ಈ-ನಾಟಕದ ರಚನೆಯಿದೆ. ಜಗದ್ಗುರುವಿನ ಪೀಠವನ್ನು ಕಿತ್ತುಕೊಳ್ಳುವುದಕ್ಕೂ ಮತ್ತು ಉತ್ಸವಮೂರ್ತಿಯಾಗುವುದಕ್ಕೂ ಮಾಡುವ ರಾಜಕೀಯವೇ ಈ ನಾಟಕದ ಕೇಂದ್ರ ವಿಷಯ. ಆ ಕೇಂದ್ರದಸುತ್ತಾ ಈ ನಾಟಕ ಹರಡಿಕೊಳ್ಳುತ್ತದೆ. ನಳಕವಿ ಮತ್ತು ಅವನ ಅನುಯಾಯಿಗಳ ಗದ್ದಲ ಮತ್ತು ಘೋಷಣೆಗಳಿಂದ ನಾಟಕ ಪ್ರಾರಂಭವಾಗುತ್ತದೆ. ನಳಕವಿಗಿರುವ ಸನ್ಮಾನದ, ಕೀರ್ತಿಯ ಆಸೆಯನ್ನು ಜಹಂಪನಾ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾನೆ. ಪ್ರಾರಂಭದಲ್ಲಿ ಜೋರಾಗಿ ಮಾತನಾಡುವ ನಳಕವಿ ಮತ್ತು ಅವನ ಪಟಾಲಂನವರು ಸ್ವಲ್ಪಸಮಯದಲ್ಲಿಯೇ ಕಾರುಭಾರಿಯ ವಶರಾಗಿ ಬಿಡುತ್ತಾರೆ. ಮೊದಲು ವಿನೀತನಾಗಿದ್ದ ಜಹಂಪನಾ ಸ್ವಲ್ಪ ಸಮಯದಲ್ಲಿಯೇ ಅವರನ್ನು ನಿರ್ದೇಶಿಸುವ ಹಂತಕ್ಕೂ ಬಂದು ಬಿಡುತ್ತಾನೆ. ಇದುನಾಟಕದ ಮೊದಲನೆಯಸುಳಿ.

ಮುಂದೆ ನಾಟಕ, ನಳಕವಿಯ ಶಿಷ್ಯರಲ್ಲಿರುವ ಪರಸ್ಪರ ವೈಷಮ್ಯ, ಅಪನಂಬಿಕೆ, ಹೊಟ್ಟೆಕಿಚ್ಚು ಮುಂತಾದುವನ್ನು ತಿಳಿಸುತ್ತದೆ. ಅವರು ಮೊದಲ ವರ್ತುಲದಲ್ಲಿ ಕಾಣಿಸಿಕೊಂಡದ್ದಕ್ಕಿಂತ ಇಲ್ಲಿ ಬೇರೆಯಾಗಿ ಕಾಣಿಸಿಕೊಳ್ಳುತ್ತಾರೆ. ನಳಕವಿಯ ದೌರ್ಬಲ್ಯ ಜಹಂಪನಾಗೆ ಗೊತ್ತಾಗುತ್ತದೆ. ಅದಕ್ಕೆ ಸರಿಯಾಗಿ ನಳಕವಿಯ ಚೇಲಾಗಳು ತಮ್ಮ ಕವಿಗೆ ಹೇಗಾದರೂ ಮಾಡಿ ಆ-ಸ್ಥಾನವನ್ನು ದೊರಕಿಸಿಕೊಡಬೇಕೆಂದು ಗೋಗರೆಯುತ್ತಾರೆ. ಅವರಲ್ಲಿ ಪರಸ್ಪರ ಕಚ್ಚಾಟಗಳಿದ್ದರೂ ಈ ವಿಷಯದಲ್ಲಿ ಅವರೆಲ್ಲರೂ ಒಂದಾಗುತ್ತಾರೆ. ಕಾರಭಾರಿ ಇದಕ್ಕಾಗಿ ಒಂದು ತಂತ್ರವನ್ನು

ತಯಾರುಮಾಡಿಕೊಂಡೇ ಬಂದಿದ್ದಾನೆ. ಅವನು ಪ್ರಭಾವಿಯಾಗಿಯೇ ಮುಂದುವರಿಯುತ್ತಾನೆ. ನಳಕವಿ ಮತ್ತು ಟೋಳಿಯುವರಿಂದ ತನ್ನ ಕೆಲಸ ಸಾಧಿಸಿಕೊಳ್ಳುವ-ಚಾಣಾಕ್ಷತೆ ಕಾರಭಾರಿಗಿದೆ. ಕಾರಭಾರಿಯು ತಂತ್ರವನ್ನು ಒಪ್ಪಿಗೊಂಡು, 'ಜಹಂಪನಾ ಜಿಂದಾಬಾದ್'; 'ನಳಕವಿಗೆ 'ಜಯುವಾಗಲಿ' ಎಂಬಘೋಷಣೆಗಳನ್ನು ಹಾಕುತ್ತಾರೆ. ಇದು ನಾಟಕದ ಮಧ್ಯದಭಾಗ.

ನಳಕವಿಯಿಂದ ತಮಗೇನಾದರೂ ಪ್ರಯೋಜನವಾಗಬಹುದೆಂಬ ಸ್ವಾರ್ಥದಿಂದ ಚೇಲಾಗಳು ಅವನ ಸುತ್ತ ಜಮಾಯಿಸಿದ್ದಾರೆ. ನಳಕವಿಯ ವಾರಸುದಾರರಾಗಲು ಅವರೆಲ್ಲ ತುದಿಗಾಲ ಮೇಲೆಯೇ ನಿಂತಿದ್ದಾರೆ. ಘೋಷಣೆ-ಕುತಂತ್ರದಿಂದ ಪೀಠವನ್ನು ಕಸಿದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಆದರೆ, ಇದಕ್ಕೆ ವಿರೋಧವಾಗಿ ಪ್ರತಿಭಟನೆಯ ಘೋಷಣೆಗಳು ಪ್ರಾರಂಭವಾಗುತ್ತವೆ. ನಳಕವಿಯ ಗುಂಪಿಗೆ ಗಾಬರಿ-ಯಾಗುತ್ತದೆ. ಯಾರೂ ತನ್ನನ್ನು ಕೈಬಿಡಬೇಡಿರೆಂದು ಕೇಳಿಕೊಂಡರೂ, ಒಬ್ಬೊಬ್ಬರಾಗಿ ಕೈ ಕೊಟ್ಟು ಹೋಗುತ್ತಾರೆ. ನಳಕವಿಯ ಶಿಷ್ಯರನ್ನು ಸ್ವಲ್ಪ ಖಾರವಾಗಿಯೇ ವಿಡಂಬಿಸಿದ್ದಾರೆ. ಚಂಪಾ ಹೊರಗಡೆಯ ಪ್ರತಿಭಟನೆಯ ಘೋಷಣೆಗಳ ಜೋರಿನಲ್ಲಿ ನಾಟಕವುಗಿಯುತ್ತದೆ. ನಾಟಕದ ಮೊವಲಿನಿಂದ ಕೊನೆಯ ವರೆಗೂ ಅಲ್ಲಲ್ಲಿ ಆರೆಸ್ಸೆಸ್ ಅನ್ನು ಗೇಲಿ ಮಾಡಿದ್ದಾರೆ. ಅವರ ಲಾಠಿ, ಶಿಸ್ತು, ಕವಾಯತು ಮುಂತಾದುವನ್ನು ತಮಾಷೆ ಮಾಡಿದ್ದಾರೆ.

ನಾಟಕದಲ್ಲಿ ಸಾಂಸ್ಕೃತಿಕ ಪರಿಸರ ಸಾಹಿತ್ಯಕ ಪರಿಸರದಷ್ಟು ವಿವರವಾಗಿ-ವ್ಯಾಪಕವಾಗಿ ಬಂದಿಲ್ಲ. ನಮ್ಮ ಸಮಕಾಲೀನ ಸಾಹಿತ್ಯದ ಒಂದು ಸಂದರ್ಭವನ್ನು ಈ ನಾಟಕ ಚಿತ್ರಿಸಲು ತೊಡಗಿದೆ. ಸಾಹಿತ್ಯಕ ಪರಿಸರದ ಚಿತ್ರಣ ಇನ್ನಷ್ಟು ವ್ಯಾಪಕವಾಗಿ ಮತ್ತು ದಟ್ಟವಾಗಿರಬೇಕಾಗಿತ್ತು ಎನ್ನಿಸುತ್ತದೆ. ನಾಟಕದ ಬೀಸು ಕಿರಿದಾಗಿರುವುದೂ ಇದಕ್ಕೆ ಕಾರಣವಾಗಿದೆ. ಬೇರೆ ಅಂಶಗಳಿಗಿಂತ ಶಾಬ್ದಿಕ ಅಂಶವೇ ಪ್ಯಾರಡಿಯಲ್ಲಿ ಮುಖ್ಯವಾಗಿರುತ್ತದೆಂಬುದನ್ನು ಗಮನಿಸ ಬೇಕಾಗುತ್ತದೆ ನಾಟಕದ ಕೊನೆಯಲ್ಲಿನ ಘೋಷಣೆಗಳು ಪಾಟೀಲರು ಏನನ್ನ ಬಯಸುತ್ತಾರೆಂಬುದನ್ನು ತಿಳಿಸುತ್ತದೆ. 'ನಳಕವಿಯ ಮಸ್ತಕಾಭಿಷೇಕ' ಗಮನಿಸಬೇಕಾದ ಒಂದು ಅಣಕ ನಾಟಕವಾಗಿದೆ.

●

ದೇವನೊಬ್ಬ ನಾಮ ಹಲವು

ಧರ್ಮಗಳು ಹಲವಾರು
ಜಾತಿಗಳು ನೂರಾರು
ಒಂದೇ ಅರ್ಥದ ಬೇರೆ ಬೇರೆ ಶಬ್ದಗಳು
ಒಂದೇ ಗುರಿಗೆ ಬೇರೆ ಬೇರೆ ದಾರಿಗಳು

ಹಿಂದು, ಜೈನ, ಬೌದ್ಧ, ಮುಸ್ಲಿಮ್, ಕ್ರೈಸ್ತ, ಪಾರಸಿ ಧರ್ಮಗಳು ಬೇರೆ ಬೇರೆಯಾದರೂ ಸಮಾಜ ಒಂದೇ–ದೇಶ ಒಂದೇ. ಧರ್ಮದ ದೃಷ್ಟಿಯಲ್ಲಿ ಎಲ್ಲ ಜಾತಿ, ಮತ ಸರಿಸಮಾನ. ನಮ್ಮ ಧರ್ಮವು ನಮಗೆ ಪ್ರಿಯವಿದ್ದಷ್ಟೆ, ಇತರರ ಧರ್ಮವು ಅವರವರಿಗೆ ಪ್ರಿಯವಾದದ್ದು. ಒಂದೇ ದೇಶದಲ್ಲಿ, ಒಂದೇ ಸಮಾಜದಲ್ಲಿ ಒಂದು ಧರ್ಮದವರು ಮತ್ತೊಂದು ಧರ್ಮದವರಿಗಿಂತ ಉತ್ತಮರೆಂದು ನಡೆದು ಕೊಳ್ಳುವುದು ಮನುಷ್ಯ ಜಾತಿಗೇ ದ್ರೋಹ ಬಗೆದಂತೆ. ಎಲ್ಲರೂ ಒಪ್ಪುವಂತಹ ಮಾತು; ಒಪ್ಪಿದ್ದೇವೆ; ಒಪ್ಪಿದಂತೆ ನಡೆದುಕೊಂಡರೆ, ನಮಗೂ ಕ್ಷೇಮ, ನಾಡಿಗೂ ಶ್ರೇಯಸ್ಸು—

"ನನ್ನ ದೇವರು ಅನಂತ ರೂಪಿ; ಒಮ್ಮೆ ಜಾತೀಯ
ಐಕ್ಯದ ರೂಪದಲ್ಲಿ ಇನ್ನೊಮ್ಮೆ ಅಸ್ಪೃಶ್ಯತಾ
ನಿವಾರಣೆಯ ರೂಪದಲ್ಲಿ ಅವನು ದರ್ಶನ ಕೊಡುವನು..."

—ಗಾಂಧೀಜಿ

ಪ್ರಕಟಣೆ : ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ
ಬೆಂಗಳೂರು–೧

No. R.N. 29730/76 No. KRNG 97

Licenced to post without pre-payment.
Licence No. WPP-31

ಮಾರಾಟಕ್ಕೆ ಸಿದ್ಧವಾಗಿದೆ

ಚಂದ್ರಶೇಖರ ಪಾಟೀಲರ

ಹೂವು ಹೆಣ್ಣು ತಾರೆ

(ಕವನಗಳು ೧೯೭೭–೧೯೮೨)

ಪುಟ ೮೦ : ಬೆಲೆ ೭ ರೂ. : ಚಂದಾದಾರರಿಗೆ ೫ ರೂ.

ಅಚ್ಚಾಗುತ್ತಿವೆ

ಗೋಕಾಕ್ ಚಳುವಳಿ : ನನಗೆ ಕಂಡಂತೆ

ಬೆಲೆ : ೭ ರೂ: ಚಂದಾದಾರರಿಗೆ ೫ ರೂ.

AT THE OTHER END

ಇಂಗ್ಲಿಷ್ ಪದ್ಯಗಳು

ಬೆಲೆ : ೧೦ ರೂ. ಚಂದಾದಾರರಿಗೆ : ೯ ರೂ,

ಸಂಕ್ರಮಣ ಪ್ರಕಾಶನ, ಧಾರವಾಡ ೫೮೦೦೦೮

DEVU PATTAR
GUTTIPETH,
SHAHAPUR-585223